ಬುಧವಾರ, ಡಿಸೆಂಬರ್ 27, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 357 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಇದೀಗ ಅಮೆರಿಕದ 'ನಾರ್ತ್‌ವೆಸ್ಟರ್ನ್ ಯೂನಿವರ್ಸಿಟಿ'ಯ ವಿಜ್ಞಾನಿಗಳು ಕೊಳೆಯಬಲ್ಲ ಪ್ಲಾಸ್ಟಿಕ್ ಕಂಡುಹಿಡಿದಿದ್ದು, ಇನ್ನಷ್ಟು ಸಂಶೋಧನೆ ನಡೆಯಬೇಕಿದೆ.



2023 ಮರೆಯುವ ಮುನ್ನ... 9

ಐಎನ್‌ಎಸ್ ಇಂಫಾಲ್ ನಿಯೋಜನೆ 11
ಕೋವಿಡ್: ಏಳು ದಿನ ಪ್ರತ್ಯೇಕವಾಸ ಕಡ್ಡಾಯ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,336 ▲	21,441 ▲	₹65,050 (ಬೆಂಗಳೂರು) ▲	₹76,900 (ಬೆಂಗಳೂರು) ▲	83.19 ▼

ಬಿಜೆಪಿ ಸರ್ಕಾರದ ಕಾರ್ಯವೈಖರಿ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ

'₹40 ಸಾವಿರ ಕೋಟಿ ಅಕ್ರಮ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಬಿಜೆಪಿ ಸರ್ಕಾರದ ಆಡಳಿತದಲ್ಲಿ ಕೋವಿಡ್ ಹೆಸರಿನಲ್ಲಿ ₹40 ಸಾವಿರ ಕೋಟಿ ಅವ್ಯವಹಾರ ನಡೆದಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.



ಯತ್ನಾಳ

ಬಿಜೆಪಿ ಸರ್ಕಾರದ ವಿರುದ್ಧ ಮಂಗಳವಾರ ಆಕ್ರೋಶ ವ್ಯಕ್ತಪಡಿಸಿದ ಅವರು, 'ಕೋವಿಡ್ ವೇಳೆ ₹45 ಮೌಲ್ಯದ ಒಂದು ಮಾಸ್ಕ್‌ಗೆ ₹485 ಬಿಲ್ ಹಾಕಲಾಯಿತು. ಎಲ್ಲದಕ್ಕೂ ಮನ ಬಂದಂತೆ ದರ ನಿಗದಿಪಡಿಸಿ, ಬಡವರನ್ನು ಶೋಷಿಸಿದ್ದಾರೆ' ಎಂದರು.

'ಬೆಂಗಳೂರಿನಲ್ಲಿ 10 ಸಾವಿರ ಬೆಡ್‌ಗಳನ್ನು ಬಾಡಿಗೆಗೆ ಪಡೆದು, ಒಂದು ಬೆಡ್‌ಗೆ ದಿನಕ್ಕೆ ₹20 ಸಾವಿರ ಬಾಡಿಗೆ ದರ ನಿಗದಿ ಮಾಡಲಾಯಿತು. ಬಾಡಿಗೆ ಹಣ ಕೊಡುವ ಬದಲು ಅದೇ ದರದಲ್ಲಿ ಎರಡು ಬೆಡ್ ಖರೀದಿಸಬಹುದಿತ್ತು' ಎಂದರು.

'ಕೋವಿಡ್ ತಗುಲಿದ್ದ ರೋಗಿಗಳಿಗೆ ₹8 ಲಕ್ಷದಿಂದ ₹10 ಲಕ್ಷದವರೆಗೆ ಬಿಲ್ ಮಾಡಲಾಯಿತು. ನಮ್ಮದೇ ಬಿಜೆಪಿ ಸರ್ಕಾರವಿದ್ದರೂ ಕಳ್ಳರು ಕಳ್ಳರೇ ತಾನೇ? ಇದನ್ನು ಯಡಿಯೂರಪ್ಪ ಅವರ ಬಗ್ಗೆ ವಿಧಾನಸೌಧದಲ್ಲಿಯೇ ಹೇಳಿದ್ದೇನೆ. ಈ ಕುರಿತಂತೆ ನನ್ನಲ್ಲಿ ಇನ್ನಷ್ಟು ವಿಷಯಗಳಿವೆ. ಎಲ್ಲವನ್ನೂ ಬಯಲು ಮಾಡುತ್ತೇನೆ' ಎಂದರು.

'ಕೋವಿಡ್ ತಗುಲಿದಾಗ ನನಗೇ ₹5 ಲಕ್ಷ ಬಿಲ್ ಮಾಡಲಾಯಿತು. ನಾನು ಅಷ್ಟು ಖರ್ಚು ಮಾಡಿದೆ. ಆದರೆ, ಸರ್ಕಾರದಿಂದ ಈವರೆಗೆ ಮರುಪಾವತಿ ಮಾಡಿಕೊಂಡಿಲ್ಲ. ಆದರೆ, ಇಷ್ಟು ಹಣ ಬಡವರಿಂದ ಪಾವತಿಸಲು ಆಗುವುದೇ' ಎಂದು ಪ್ರಶ್ನಿಸಿದರು.

7ನೇ ಪುಟ ನೋಡಿ

'ಕೇಂದ್ರ ನಾಯಕರಿಗೂ ಪಾಲಿದೆಯೇ?'



ಬೆಂಗಳೂರು: 'ತಮ್ಮನ್ನು ಚೌಕೀದಾರ ಎಂದು ಬಣ್ಣಿಸಿಕೊಳ್ಳುವ, ನ ಖಾವೂಂಗಾ ನಾ ಖಾನೆ ದೂಂಗಾ ಎಂದು ಗುಟುರು ಹಾಕುವ ಪ್ರಧಾನಿ ನರೇಂದ್ರ ಮೋದಿ ಅವರೂ ತಮ್ಮದೇ ಪಕ್ಷದ ನಾಯಕ ಮಾಡುತ್ತಿರುವ ಭ್ರಷ್ಟಾಚಾರದ ಆರೋಪಗಳ ಬಗ್ಗೆ ಮೌನವಾಗಿರುವುದು ನಿಗೂಢವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬಸನಗೌಡ ಪಾಟೀಲ ಯತ್ನಾಳ ಆರೋಪದ ಬಗ್ಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿರುವ ಅವರು, 'ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಲ್ಲಿ ಕೇಂದ್ರದ ನಾಯಕರಿಗೂ ಪಾಲು ಹೋಗಿದೆ ಎನ್ನುವ ಆರೋಪಕ್ಕೆ ಎಡೆ ಮಾಡಿಕೊಡುವುದಿಲ್ಲವೇ ಪ್ರಧಾನಿಯವರೇ' ಎಂದು ಕುಟುಕಿದ್ದಾರೆ.

'ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಂದಾಜು ₹40 ಸಾವಿರ ಕೋಟಿ ಭ್ರಷ್ಟಾಚಾರ ಎಸಗಿದೆ ಎಂದು ಯತ್ನಾಳ ಅವರು ನೇರವಾಗಿ ಆರೋಪಿಸುವ ಮೂಲಕ ಬಿಜೆಪಿ ಸರ್ಕಾರ ಶೇ 40ರ ಕಮಿಷನ್ ಸರ್ಕಾರ-ವಾಗಿತ್ತು ಎನ್ನುವ ನಮ್ಮ ಆರೋಪಕ್ಕೆ ಸಾಕ್ಷ್ಯ ಒದಗಿಸಿದ್ದಾರೆ' ಎಂದು ಹೇಳಿದ್ದಾರೆ.

'ಕೋವಿಡ್ ಚಿಕಿತ್ಸೆ ಮತ್ತು ನಿಯಂತ್ರಣದ ಹೆಸರಲ್ಲಿ ಯಡಿಯೂರಪ್ಪ ಸರ್ಕಾರ ₹4,000 ಕೋಟಿ ಅಕ್ರಮ ಮಾಡಿದೆ ಎಂದು ದಾಖಲೆ ಸಮೇತ ನಾವು ಆರೋಪ ಮಾಡಿದ್ದೆವು. ಯತ್ನಾಳ ಆರೋಪ ಗಮನಿಸಿದರೆ ನಮ್ಮ ಅಂದಾಜಿಗಿಂತಲೂ ಹತ್ತು ಪಟ್ಟು ಹೆಚ್ಚಿನ ಭ್ರಷ್ಟಾಚಾರ ನಡೆದಿರುವಂತೆ ಕಾಣುತ್ತಿದೆ. ನಮ್ಮ ಆರೋಪ ಕೇಳಿ ಹೌಹಾರಿ ಬಂದು ಆಗ ವಿಧಾನಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದ ಆಗಿನ ಸಚಿವರ ದಂಡು ಈಗ ಎಲ್ಲಿ ಅಡಗಿ ಕೂತಿದೆ' ಎಂದು ಸಿದ್ದರಾಮಯ್ಯ ಕೆಣಕಿದ್ದಾರೆ.

7ನೇ ಪುಟ ನೋಡಿ

> **ನನಗೆ ನೋಟಿಸ್ ನೀಡಿ, ಪಕ್ಷದಿಂದ ಉಚ್ಚಾಟಿಸಿ ನೋಡಲಿ, ಆಗ ಇವರೆಲ್ಲರ ಬಣ್ಣ ಬಯಲು ಮಾಡುವೆ. ಅವ್ಯವಹಾರ, ಎಲ್ಲವನ್ನೂ ಬಹಿರಂಗಪಡಿಸುವೆ**
> **ಬಸನಗೌಡ ಪಾಟೀಲ ಯತ್ನಾಳ**
> ಬಿಜೆಪಿ ಶಾಸಕ

'ತನಿಖೆಗೆ ತಂಡ ರಚನೆ'

ವಿಜಯಪುರ: 'ಕೋವಿಡ್ ಸಮಯದಲ್ಲಿ ನಡೆದಿದ್ದ ಅವ್ಯವಹಾರಗಳ ಕುರಿತು ತನಿಖೆ ನಡೆಸಲು ತನಿಖಾ ತಂಡ ರಚಿಸಲಾಗಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಹೆಸರಿನಲ್ಲಿ ಭ್ರಷ್ಟಾಚಾರ ನಡೆದಿದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಕ್ಕೆ ಮಂಗಳವಾರ ಹೀಗೆ ಪ್ರತಿಕ್ರಿಯೆ ನೀಡಿದರು. 'ತನಿಖಾ ತಂಡದಿಂದ ವರದಿ ಸಲ್ಲಿಕೆಯಾದ ಬಳಿಕ ಪ್ರತಿಕ್ರಿಯಿಸುವೆ' ಎಂದರು.

ಕೆಲಸಕ್ಕೆ ಗೈರಾಗಿದ್ದಕ್ಕೆ ಕಿಡಿ ಕಾರ್ಮಿಕನಿಗೆ ಸರಪಳಿ

ಪ್ರಜಾವಾಣಿ ವಾರ್ತೆ

ರಾಮನಗರ: ಮುಂಗಡವಾಗಿ ಸಾಲ ಪಡೆದಿದ್ದ ಕಾರ್ಮಿಕ ಸರಿಯಾಗಿ ಕೆಲಸಕ್ಕೆ ಬರಲಿಲ್ಲ ಎಂದು ಕೋಪಗೊಂಡಿದ್ದ, ಇಲ್ಲಿನ ಮೆಹಬೂಬ ನಗರದ ಎಸ್‌ಐಯು ರೇಷ್ಮೆ ಕಾರ್ಖಾನೆಯ ಮಾಲೀಕರು ಕಾರ್ಮಿಕನ ಕಾಲಿಗೆ ಸರಪಳಿ ಕಟ್ಟಿ ಕೆಲಸ ಮಾಡಿಸಿ-ಕೊಂಡಿದ್ದಾರೆ.

ಕೆಲಸದ ಅವಧಿ ಮುಗಿದ ನಂತರವು ಆತನನ್ನು ಮನೆಗೆ ಕಳುಹಿಸದೆ ಕಾರ್ಖಾನೆಯಲ್ಲಿಯೇ ಸರಪಳಿ ಕಟ್ಟಿ ಕೂಡಿ ಹಾಕಿದ್ದು, ಜೀತದಾಳು ರೀತಿ ಹಗಲು ರಾತ್ರಿ ಕೆಲಸ ಮಾಡಿಸಿಕೊಂಡಿದ್ದಾರೆ.

ಸಹ ಕಾರ್ಮಿಕರು ನೀಡಿದ ದೂರಿನ ಮೇರೆಗೆ ರಾಮನಗರ ಪುರ ಠಾಣೆ ಪೊಲೀಸರು ಸೋಮವಾರ ಸಂಜೆ ಕಾರ್ಖಾನೆ ಮೇಲೆ ದಾಳಿ ನಡೆಸಿದ್ದಾರೆ. ಕಾರ್ಖಾನೆಯಲ್ಲಿ ಕೂಡಿ ಹಾಕಲಾಗಿದ್ದ ಮೊಹಮ್ಮದ್ ವಸೀಂ (24) ಎಂಬ ಕಾರ್ಮಿಕನನ್ನು ರಕ್ಷಿಸಿದ್ದಾರೆ.

ಮಾಲೀಕ ಸಯ್ಯದ್ ಇಸಾಮ್ ಮತ್ತು ಮೇಲ್ವಿಚಾರಕ ಸಯ್ಯದ್ ಅಮ್ಜದ್ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದು, ಬಂಧಿಸಿದ್ದಾರೆ.

5ನೇ ಪುಟ ನೋಡಿ

'ಪಾರು ಮಾಡಿ ಎಂದು ಅಂಗಲಾಚಿದ'

'ಕಾರ್ಖಾನೆ ಮೇಲೆ ದಾಳಿ ಮಾಡಿದಾಗ ರೇಷ್ಮೆಗೂಡು ಬೇಯಿಸುವ ಸ್ಥಳದಲ್ಲಿ ವಸೀಂ ಇದ್ದರು. ನಮ್ಮನ್ನು ಕಂಡ ತಕ್ಷಣ 'ನನ್ನನ್ನು ಇಲ್ಲಿಂದ ಪಾರು ಮಾಡಿ' ಎಂದು ಅಂಗಲಾಚಿ ಬೇಡಿಕೊಂಡರು' ಎಂದು ಅಧಿಕಾರಿಗಳು ತಿಳಿಸಿದರು.

ಆರೋಪಿಗಳ ವಿರುದ್ಧ ಜೀತ ಪದ್ಧತಿ ನಿರ್ಮೂಲನಾ ಕಾಯ್ದೆ-1976, ಐಪಿಸಿ 343 (ಅಕ್ರಮ ಬಂಧನ), ಐಪಿಸಿ 374 (ಕಾನೂನು-ಬಾಹಿರವಾಗಿ ದುಡಿಸಿಕೊಳ್ಳುವುದು) ಹಾಗೂ ಐಪಿಸಿ 34 (ಅಪರಾಧ ಸಂಚು) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.



ಕಾರ್ಖಾನೆ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಕಾರ್ಮಿಕ ಮೊಹಮ್ಮದ್ ವಸೀಂ (ಬಲದಿಂದ ಮೊದಲನೆಯವರು) ಅವರನ್ನು ರಕ್ಷಿಸಿದರು

ಶಿಕ್ಷಕರ ಜೇಬಿಗೆ ಹೊರೆಯಾದ ಮೊಟ್ಟೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟಕ್ಕೆ ನೀಡುವ ಬೇಯಿಸಿದ ಮೊಟ್ಟೆಯ ಹೆಚ್ಚುವರಿ ಖರ್ಚು ಭರಿಸಲು ಶಿಕ್ಷಕರು ಹರಸಾಹಸ ಮಾಡುತ್ತಿದ್ದಾರೆ.

ಮೊಟ್ಟೆ ಧಾರಣೆ ನಿರಂತರವಾಗಿ ಏರಿಕೆಯಾಗುತ್ತಿದ್ದು, ಮೊಟ್ಟೆ ಖರೀದಿಸಲು ಶಾಲಾ ಶಿಕ್ಷಣ ಇಲಾಖೆ ನೀಡುವ ಮೊತ್ತಕ್ಕೂ, ಮಾರುಕಟ್ಟೆ ದರಕ್ಕೂ ಬಹಳ ವ್ಯತ್ಯಾಸವಾಗುತ್ತಿರುವುದು ಶಿಕ್ಷಕರಿಗೆ ಹೊರೆಯಾಗಿ ಪರಿಣಮಿಸಿದೆ.



ಪೌಷ್ಟಿಕಾಂಶದ ಕೊರತೆ ನೀಗಿಸಲು ರಾಜ್ಯದ ಸರ್ಕಾರಿ, ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆ ನೀಡುವುದನ್ನು ಶಾಲಾ ಶಿಕ್ಷಣ ಇಲಾಖೆ ಕಡ್ಡಾಯಗೊಳಿಸಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 38.37 ಲಕ್ಷ ಮಕ್ಕಳು ಮೊಟ್ಟೆಗೆ ಬೇಡಿಕೆ ಸಲ್ಲಿಸಿದ್ದಾರೆ.

ಪ್ರತಿ ಮಗುವಿಗೂ ವರ್ಷದಲ್ಲಿ 100 ಮೊಟ್ಟೆಗಳನ್ನು ನೀಡಲಾಗುತ್ತಿದೆ. ಒಂದು ಮೊಟ್ಟೆಗೆ ₹6 ನಿಗದಿ ಮಾಡಲಾಗಿದೆ.

7ನೇ ಪುಟ ನೋಡಿ

ಅರ್ಜುನ, ಖೇಲ್‌ರತ್ನ ಪ್ರಶಸ್ತಿ ಮರಳಿಸುವೆ: ವಿನೇಶಾ ಫೋಗಾಟ್



ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಸ್ಥಾನಕ್ಕೆ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ನಿಷ್ಠಾವಂತ ಸಂಜಯ್ ಸಿಂಗ್ ಆಯ್ಕೆಯನ್ನು ಪ್ರತಿಭಟಿಸಿರುವ ಕುಸ್ತಿ ಪಟು ವಿನೇಶಾ ಫೋಗಾಟ್ ಅವರು ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂತಿರುಗಿಸಿರುವುದಾಗಿ ಮಂಗಳವಾರ ತಿಳಿಸಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ ವಿನೇಶಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ಈ ವಿಷಯ ತಿಳಿಸಿದ್ದಾರೆ.

12ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲೋಕಸಭಾ ಚುನಾವಣೆ: 28 ಕ್ಷೇತ್ರಗಳಲ್ಲೂ ಕೆಆರ್‌ಎಸ್ ಸ್ಪರ್ಧೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ರಾಜ್ಯದ 28 ಲೋಕಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಕಾರ್ಯದರ್ಶಿ ಮಲ್ಲಿಕಾರ್ಜುನಯ್ಯ ಬಿ.ಎಸ್., 'ಕೆಆರ್‌ಎಸ್ ಪಕ್ಷದಿಂದ ಲೋಕಸಭೆಗೆ ಸ್ಪರ್ಧಿಸುವ ಆಕಾಂಕ್ಷಿಗಳಿಗೆ 2024ರ ಜನವರಿ 6 ಮತ್ತು 7ರಂದು ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆಯುವ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಇತ್ತೀಚೆಗೆ ನಡೆದ ಪಕ್ಷದ ರಾಜ್ಯ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಸಂದರ್ಶನದಲ್ಲಿ ಆಯ್ಕೆಯಾಗುವ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ರಾಜ್ಯ ಸಮಿತಿಯು ಬಿಡುಗಡೆ ಮಾಡಲಿದೆ' ಎಂದು ತಿಳಿಸಿದರು.

100 ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಘೋಷಣೆ

ಬಿಎಂಟಿಸಿಗೆ 1600 ಇ–ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024ರ ಏಪ್ರಿಲ್ ಅಂತ್ಯದೊಳಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) 1,600 ವಿದ್ಯುತ್ ಚಾಲಿತ (ಎಲೆಕ್ಟ್ರಿಕ್) ಬಸ್‌ಗಳು ಸೇರ್ಪಡೆಯಾಗಲಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಪೂರ್ವ ದ್ವಾರದ ಮುಂಭಾಗದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಬಿಎಂಟಿಸಿಯ 100 ವಿದ್ಯುತ್ ಚಾಲಿತ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ವಿದ್ಯುತ್ ಚಾಲಿತ ಬಸ್‌ಗಳ ಸಂಚಾರಕ್ಕೆ ನಮ್ಮ ಸರ್ಕಾರ ಆದ್ಯತೆ ನೀಡುತ್ತದೆ. ಇ–ಬಸ್‌ಗಳ ಸಂಚಾರದಿಂದ ಪರಿಸರ ಮಾಲಿನ್ಯ ತಗ್ಗುತ್ತದೆ. ಸುಗಮ ಸಂಚಾರಕ್ಕೂ ಹೆಚ್ಚು ಅನುಕೂಲ ಆಗುತ್ತದೆ. ಬಿಎಂಟಿಸಿಯು 1,600 ಇ–ಬಸ್‌ಗಳನ್ನು ಧಾರವಾಡದ ಟಾಟಾ ಬಸ್ ತಯಾರಿಕಾ ಘಟಕದಿಂದ ಖರೀದಿಸುತ್ತಿರುವುದು ಮತ್ತೊಂದು ವಿಶೇಷ' ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ವಿರೋಧ ಪಕ್ಷದವರು ಟೀಕಿಸಿದ್ದರು. ಆದರೆ, 'ಶಕ್ತಿ' ಯೋಜನೆಯಡಿ ಮಹಿಳೆಯರು ಈವರೆಗೆ 120 ಕೋಟಿ ಬಾರಿ ಉಚಿತವಾಗಿ ಬಸ್ ಪ್ರಯಾಣ ಮಾಡಿದ್ದಾರೆ. ಬಿಎಂಟಿಸಿ ಬಸ್‌ಗಳಲ್ಲಿ ನಿತ್ಯವೂ 40 ಲಕ್ಷ ಮಹಿಳೆಯರು ಉಚಿತ ಪ್ರಯಾಣ ಮಾಡುತ್ತಿದ್ದಾರೆ. ಎಲ್ಲ ಜಾತಿ, ಧರ್ಮ, ಅಂತಸ್ತಿನ ಮಹಿಳೆಯರೂ ಉಚಿತ ಪ್ರಯಾಣದ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಈವರೆಗೆ 4.30 ಕೋಟಿ ಜನರು ಗ್ಯಾರಂಟಿ ಯೋಜನೆಗಳಿಂದ ಅನುಕೂಲ ಪಡೆದಿದ್ದಾರೆ. ಇದರಿಂದ ಕಾರ್ಮಿಕರು, ರೈತರು, ಮಹಿಳೆಯರಲ್ಲಿ ದೊಡ್ಡ ಪ್ರಮಾಣದ ಉಳಿತಾಯವಾಗಿದೆ. ಪರಿಣಾಮವಾಗಿ ಅವರ ಆರ್ಥಿಕ ಶಕ್ತಿಯೂ ವೃದ್ಧಿಯಾಗಿದೆ ಎಂದರು. ಡಿಸಿಎಂ ಡಿ.ಕೆ.ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿದರು.



ಮಂಗಳವಾರ ಬಿಎಂಟಿಸಿಯ ಹೊಸ ಇ–ಬಸ್‌ಗಳಿಗೆ ಚಾಲನೆ ನೀಡಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೊಸ ಬಸ್‌ಗಳಲ್ಲಿ ಕುಳಿತು ಪ್ರಯಾಣಿಸಿದರು. ಸಚಿವರಾದ ಡಾ. ಶರಣ ಪ್ರಕಾಶ್ ಪಾಟೀಲ ಕೂಡ ಬಸ್ ಏರಿದ್ದರು

–ಪ್ರಜಾವಾಣಿ ಚಿತ್ರ

ಭೀಮಾ ಕೊರೇಗಾಂವ್ ವಿಜಯೋತ್ಸವ 31ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮತಾ ಸೈನಿಕ ದಳ (ಎಸ್‌ಎಸ್‌ಡಿ), ಭಾರತೀಯ ಬೌದ್ಧ ಮಹಾಸಭಾ ಹಾಗೂ ನಾಗಸೇನಾ ಬುದ್ಧ ವಿಹಾರ ಸಹಯೋಗದಲ್ಲಿ ಇದೇ 31ರಂದು ಭೀಮಾ ಕೊರೇಗಾಂವ್ ವಿಜಯೋತ್ಸವವನ್ನು ಸದಾಶಿವನಗರದಲ್ಲಿರುವ ನಾಗಸೇನ ವಿದ್ಯಾಲಯದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.


ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಎಸ್‌ಡಿ ರಾಜ್ಯ ಸಂಚಾಲಕ ಡಿ.ಎಂ. ಅಂಬರೀಶ್, 'ಭೀಮಾ ಕೊರೇಗಾಂವ ಯುದ್ಧಕ್ಕೆ ಸಂಬಂಧಿಸಿದಂತೆ ಚರಿತ್ರೆಯ ಚಿಂತನೆಗಳು ಎಂಬ ನಾಲ್ಕು ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಗತಿಪರ ಚಿಂತಕರು ಈ ಗೋಷ್ಠಿಗಳನ್ನು ಭಾಗವಹಿಸಲಿದ್ದಾರೆ. ರಾಜ್ಯಸಭೆಯ ಸದಸ್ಯ ಎಲ್. ಹನುಮಂತಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ' ಎಂದು ತಿಳಿಸಿದರು. 'ಸಂಜೆ 7 ರಿಂದ ರಾತ್ರಿ 12 ಗಂಟೆವರೆಗೆ ಹತ್ತು ಕಲಾತಂಡಗಳಿಂದ ಭೀಮಗೀತೆ ಗಾಯನ ಕಾರ್ಯಕ್ರಮ ನಡೆಯಲಿದೆ' ಎಂದರು. ಜಾನಪದ ಸಾಹಿತಿ ಗೊಲ್ಲಹಳ್ಳಿ, ಬಾನಂದೂರು ಕೆಂಪಯ್ಯ, ಸುಬ್ಬುಹೊಲೆಯಾರ್ ಭಾಗವಹಿಸಲಿದ್ದಾರೆ.

ನಗರದಲ್ಲಿ ಇಂದು

ಸಾಂಖಿಕಶಾಸ್ತ್ರ, ಅರ್ಥಶಾಸ್ತ್ರ ಮತ್ತು ಕಂಪ್ಯೂಟರ್ ಸೈನ್ಸ್ ಕಾರ್ಯಾಗಾರ–2023: ಅತಿಥಿಗಳು: ಎಂ.ಆರ್. ದೊರೆಸ್ವಾಮಿ, ಮಂಜುನಾಥ್ ಎಸ್., ರಾಜಗೋಪಾಲ್ ಆರ್., ಪುರುಷೋತ್ತಮ ಜಿ.ಎಸ್., ಅಧ್ಯಕ್ಷತೆ: ಆನಂದ ರಾಜ್ ಎ., ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಪಿಯು ಕಾಲೇಜು ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಸಂಘ, ಸ್ಥಳ: ಎಂಆರ್‌ಡಿ ಸಭಾಂಗಣ, ಪಿಇಎಸ್‌ಯು, ಆರ್‌ಆರ್ ಕ್ಯಾಂಪಸ್, ಹೊಸಕೆರೆಹಳ್ಳಿ, ಬೆಳಿಗ್ಗೆ 10

ಬಿ. ಬಸವಲಿಂಗಪ್ಪ ಅವರ ಪುಣ್ಯಸ್ಮರಣೆಯ ಅಂಗವಾಗಿ ಕಾಲ್ನಡಿಗೆ ಜಾಥಾ: ಆಯೋಜನೆ: ದಲಿತ ಸಂಘರ್ಷ ಸಮಿತಿ, ಸ್ಥಳ: ಯಲಹಂಕ ಉಪನಗರದ ಮದರ್ ಡೈರಿ ವೃತ್ತದಿಂದ ಅಳ್ಳಾಳಸಂದ್ರ ಬಸ್ ನಿಲ್ದಾಣದವರೆಗೆ (ಬಿ. ಬಸವಲಿಂಗಪ್ಪ ಅವರ ಪುಣ್ಯಭೂಮಿ) ಬೆಳಿಗ್ಗೆ 11

ಚಕ್ಕೆರೆ ಶಿವಶಂಕರ್ ಅವರಿಗೆ ಅಭಿನಂದನಾ ಸಮಾರಂಭ, 'ಜಾನಪದ ಚಂದ್ರಮ' ಅಭಿನಂದನಾ ಗ್ರಂಥ ಬಿಡುಗಡೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಅಭಿನಂದನಾ ನುಡಿ: ಬೈರಮಂಗಲ ರಾಮೇಗೌಡ, ಅತಿಥಿ: ಎಚ್. ದಂಡಪ್ಪ, ಉಪಸ್ಥಿತಿ: ಎಚ್.ಕೆ. ಮಳಲಿಗೌಡ, ಸೂರನಾಯಕನಹಳ್ಳಿ ನಂದೀಶ್, ಆಯೋಜನೆ: ಚಕ್ಕೆರೆ ಶಿವಶಂಕರ್ ಅಭಿನಂದನಾ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4



ಹಂ.ಪ. ನಾಗರಾಜಯ್ಯ

ಸಂಗೀತ ಕಾರ್ಯಕ್ರಮ: ವೀಣೆ: ಬೋನಾಲ ಶಂಕರ ಪ್ರಕಾಶ್, ಪಿಟೀಲು: ಆರ್. ರಘುರಾಮ್, ವಿಶೇಷ ತವಿಲ್: ವಿ. ಮಣಿ, ಮೃದಂಗ: ತುಮಕೂರು ಬಿ. ರವಿಶಂಕರ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6ರಿಂದ

ಹೊಸ ವರ್ಷಾಚರಣೆಗೆ ದಿನಗಣನೆ ● ನಗರದಲ್ಲಿ ಪೊಲೀಸರ ಬಿಗಿ ಭದ್ರತೆ

ಸಂಭ್ರಮಾಚರಣೆ: ರಾತ್ರಿ 1ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2024ರ ಹೊಸ ವರ್ಷಾಚರಣೆ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಭದ್ರತೆ ಕೈಗೊಳ್ಳಲು ಸಿದ್ಧರಾಗಿದ್ದೇವೆ. ಸಾರ್ವಜನಿಕ ಸ್ಥಳಗಳಲ್ಲಿ ಡಿ. 31ರಂದು ರಾತ್ರಿ 1 ಗಂಟೆಯವರೆಗೆ ಮಾತ್ರ ಸಂಭ್ರಮಾಚರಣೆಗೆ ಅವಕಾಶವಿದೆ’ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮದ್ಯದ ಅಂಗಡಿಗಳ ವಹಿವಾಟಿಗೆ ರಾತ್ರಿ 11 ಗಂಟೆಯವರೆಗೂ ಅವಕಾಶವಿದೆ. ಬಾರ್ ಆ್ಯಂಡ್ ರೆಸ್ಟೋರೆಂಟ್, ಪಬ್, ಹೋಟೆಲ್ ಹಾಗೂ ಇತರೆ ವ್ಯಾಪಾರ ಸ್ಥಳಗಳನ್ನು ರಾತ್ರಿ 1 ಗಂಟೆಯೊಳಗೆ ಬಂದ್ ಮಾಡಬೇಕು. ನಿಯಮ ಮೀರಿದರೆ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಎಚ್ಚರಿಸಿದರು.

‘ಹೆಚ್ಚು ಜನರು ಸೇರುವ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಕೋರಮಂಗಲ ಹಾಗೂ ಇತರೆ ಸ್ಥಳಗಳ ಮೇಲೆ ಹೆಚ್ಚು ನಿಗಾ ವಹಿಸಲಾಗಿದೆ. ನಗರದ ಪ್ರತಿಯೊಂದು ಸ್ಥಳದಲ್ಲೂ ಪೊಲೀಸರ ಗಸ್ತು ಇರಲಿದೆ. ಭದ್ರತೆ ಹೊಣೆಯನ್ನು ಇಬ್ಬರು ಹೆಚ್ಚುವರಿ ಪೊಲೀಸ್ ಕಮಿಷನರ್ ಹಾಗೂ ಜಂಟಿ ಕಮಿಷನರ್ ವಹಿಸಲಾಗಿದೆ’ ಎಂದು ದಯಾನಂದ್ ಹೇಳಿದರು.

‘ವೈದ್ಯರು, ಬೆಸ್ಕಾಂ ಸಿಬ್ಬಂದಿ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ಅಧಿಕಾರಿಗಳೂ ಪೊಲೀಸರ ಜೊತೆಗಿರಲಿದ್ದಾರೆ’ ಎಂದರು.

48 ಕಡೆ ಮದ್ಯ ತಪಾಸಣೆ: ‘ಮದ್ಯ ಕುಡಿದು ವಾಹನ ಚಾಲನೆ ಮಾಡುವುದರಿಂದ ಅಪಘಾತಗಳು ಸಂಭವಿಸುತ್ತಿವೆ. ಹೀಗಾಗಿ, ಪಾನಮತ್ತ ಚಾಲಕರನ್ನು ಪತ್ತೆ ಮಾಡಲು 48 ಸ್ಥಳಗಳಲ್ಲಿ ತಪಾಸಣೆ ತಂಡಗಳನ್ನು ರಚಿಸಲಾಗಿದೆ. ಮದ್ಯ ಕುಡಿದು ವಾಹನ ಚಾಲನೆ ಖಾತ್ರಿಯಾದರೆ ಪ್ರಕರಣ ದಾಖಲಿಸಲಾಗುವುದು. ವಾಹನ ಜಪ್ತಿ ಮಾಡಲಾಗುವುದ’ ಎಂದು ಕಮಿಷನರ್ ತಿಳಿಸಿದರು.

‘ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆಗೂ ಒತ್ತು ನೀಡಲಾಗಿದೆ. ಜನಸಂದಣಿ ಸ್ಥಳಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಮಹಿಳೆಯರ ದೂರು ಆಲಿಸಿ ಕ್ರಮ ಕೈಗೊಳ್ಳಲು ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಸ್ಥಳಗಳಲ್ಲಿ ನಿಗಾ ವಹಿಸಲು ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗುತ್ತಿದೆ. ಗೋಪುರಗಳಲ್ಲಿ ಸಿಬ್ಬಂದಿ ಇರಲಿದ್ದಾರೆ. ಅನುಮಾನಾಸ್ಪದ ವಸ್ತು ಹಾಗೂ ವ್ಯಕ್ತಿಗಳು ಕಂಡುಬಂದರೆ ತ್ವರಿತವಾಗಿ ಸ್ಪಂದಿಸಲಿದ್ದಾರೆ’ ಎಂದು ಅವರು ಹೇಳಿದರು.

‘ನಗರದ ಹಲವು ಸ್ಥಳಗಳಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಕೆ ಕೆಲಸ ಆರಂಭವಾಗಿದೆ. ಭದ್ರತೆಗಾಗಿ ಡ್ರೋನ್ ಕ್ಯಾಮೆರಾಗಳನ್ನು ಬಳಸಲಾಗುತ್ತಿದೆ. ಸಾರ್ವಜನಿಕ ಸ್ಥಳದ ದೃಶ್ಯಗಳನ್ನು ಚಿತ್ರೀಕರಿಸಿಟ್ಟು ಕೊಳ್ಳಲಾಗುವುದು. ಯಾವುದಾದರೂ ಅವಘಡ ಸಂಭವಿಸಿದರೆ, ಆರೋಪಿ ಪತ್ತೆಗೆ ದೃಶ್ಯಗಳು ನೆರವಾಗಲಿವೆ’ ಎಂದು ಅವರು ತಿಳಿಸಿದರು.

ಡ್ರಗ್ಸ್ ವಿರುದ್ಧ ಕಾರ್ಯಾಚರಣೆ: ‘ಹೊಸ ವರ್ಷಾಚರಣೆ ಸಂದರ್ಭದಲ್ಲಿ ಡ್ರಗ್ಸ್ ಸಾಗಣೆ ಹಾಗೂ ಮಾರಾಟವನ್ನು ತಡೆಯಲು ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ಕಮಿಷನರ್ ದಯಾನಂದ್ ಹೇಳಿದರು.

‘26 ದಿನಗಳಲ್ಲಿ 9 ವಿದೇಶಿ ಪ್ರಜೆಗಳು ಸೇರಿ 56 ಮಂದಿಯನ್ನು ಬಂಧಿಸಲಾಗಿದೆ. ಅವರಿಂದ 99.85 ಕೆ.ಜಿ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದರು.

‘ಹೊಸವರ್ಷಾಚರಣೆಸಂದರ್ಭದಲ್ಲಿ ಡ್ರಗ್ಸ್ ಸೇವನೆ ಮಾಡಿದವರನ್ನು ಪತ್ತೆ ಮಾಡಲು ವಿಶೇಷ ತಂಡಗಳನ್ನು ರಚಿಸಲಾಗುತ್ತಿದೆ. ಅನುಮಾನ ಬಂದವರನ್ನು ವಶಕ್ಕೆ ಪಡೆದು ರಕ್ತದ ಮಾದರಿ ಸಂಗ್ರಹಿಸಲಾಗುವುದು. ವೈದ್ಯಕೀಯ ವರದಿ ಬಂದ ನಂತರ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಲಾಗುವುದು’ ಎಂದು ದಯಾನಂದ್ ತಿಳಿಸಿದರು.



ಕ್ಯಾಮೆರಾ ಕಣ್ಗಾವಲು: ಬೆಂಗಳೂರಿನ ಬ್ರಿಗೇಡ್ ರಸ್ತೆ ಮತ್ತು ಚರ್ಚ್ ಸ್ಟ್ರೀಟ್ ನಲ್ಲಿ ಕ್ರಿಸ್‌ಮಸ್ ಹಬ್ಬ ಮತ್ತು ಹೊಸವರ್ಷದ ಆಚರಣೆ ಹಿನ್ನಲೆ ಕ್ಯಾಮೆರಾ ಕಣ್ಗಾವಲಿನಲ್ಲಿ ಪೊಲೀಸ್ ಭದ್ರತೆ ಒದಗಿಸಲಾಗಿದೆ . ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

ಭದ್ರತೆಗೆ ಪೊಲೀಸರ ಬಲ	
ಡಿಸಿಪಿಗಳು	15
ಎಸಿಪಿಗಳು	45
ಇನ್‌ಸ್ಪೆಕ್ಟರ್‌ಗಳು	160
ಪಿಎಸ್‌ಐಗಳು	600
ಎಎಸ್‌ಐಗಳು	600
ಹೆಡ್‌ಕಾನ್‌ಸ್ಟೆಬಲ್‌ಗಳು	1,800
ಹೆಡ್‌ಕಾನ್‌ಸ್ಟೆಬಲ್‌ಗಳು	5,200

‘ಮೇಲ್ಸೇತುವೆಗಳಲ್ಲಿ ಸಂಚಾರ ಬಂದ್’

‘ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಯಲ್ಲಿರುವ ಮೇಲ್ಸೇತುವೆಯನ್ನು ಹೊರತುಪಡಿಸಿ ನಗರದ ಎಲ್ಲ ಮೇಲ್ಸೇತುವೆಗಳನ್ನು ಡಿ. 31ರಂದು ರಾತ್ರಿ 11 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಬಂದ್ ಮಾಡಲಾಗುವುದು’ ಎಂದು ಕಮಿಷನರ್ ದಯಾನಂದ್ ಹೇಳಿದರು.

ತುರ್ತು ಸಂದರ್ಭ 112ಕ್ಕೆ ಕರೆಮಾಡಿ

‘ಎಂ.ಜಿ. ರಸ್ತೆ ಮೆಟ್ರೊ: 3 ಗಂಟೆ ಬಂದ್’



‘ಹೊಸ ವರ್ಷಾಚರಣೆಗೆ ನಗರ ಎಂ.ಜಿ. ರಸ್ತೆಯಲ್ಲಿ ಅತೀ ಹೆಚ್ಚು ಜನರು ಸೇರುತ್ತಾರೆ. ಕಳೆದ ವರ್ಷ ಮೆಟ್ರೊ ನಿಲ್ದಾಣದೊಳಗೆ ಹೋಗುವಾಗ ಜನರಿಗೆ ತೊಂದರೆ ಆಗಿತ್ತು. ಹೀಗಾಗಿ, ಈ ವರ್ಷ ಡಿ. 31ರಂದು ರಾತ್ರಿ 11 ಗಂಟೆಯಿಂದ 2 ಗಂಟೆಯವರೆಗೆ ನಿಲ್ದಾಣದ ಬಾಗಿಲುಗಳನ್ನು ಬಂದ್ ಮಾಡಲು ಸೂಚಿಸಲಾಗಿದೆ’ ಎಂದು ಕಮಿಷನರ್ ದಯಾನಂದ್ ಹೇಳಿದರು.

‘ಸಾರ್ವಜನಿಕರ ಸುರಕ್ಷತೆಗಾಗಿ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಎಂ.ಜಿ.ರಸ್ತೆ ನಿಲ್ದಾಣದ ಬದಲು ಸಮೀಪದ ಟ್ರಿನಿಟಿ ವೃತ್ತ ಹಾಗೂ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಮೂಲಕ ಜನರು ಪ್ರಯಾಣಿಸಬಹುದು’ ಎಂದು ತಿಳಿಸಿದರು.

ವಾಹನಗಳ ಸಂಚಾರಕ್ಕೆ ನಿರ್ಬಂಧ

- ಎಂ.ಜಿ. ರಸ್ತೆ ಅನಿಲ್ ಕುಂಬ್ಳೆ ವೃತ್ತದಿಂದ ಮೆಯೊಹಾಲ್ ಬಳಿಯ ರೆಸಿಡೆನ್ಸಿ ರಸ್ತೆ ಜಂಕ್ಷನ್
- ಬ್ರಿಗೇಡ್ ರಸ್ತೆ (ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್)
- ಚರ್ಚ್‌ಸ್ಟ್ರೀಟ್ (ಬ್ರಿಗೇಡ್ ರಸ್ತೆ ಜಂಕ್ಷನ್‌ನಿಂದ ಮ್ಯೂಸಿಯಂ ಜಂಕ್ಷನ್)
- ಮ್ಯೂಸಿಯಂ ರಸ್ತೆ (ಎಂ.ಜಿ.ರಸ್ತೆ ಜಂಕ್ಷನ್‌ನಿಂದ ಹಳೇ ಮದ್ರಾಸ್ ರಸ್ತೆಯ ಎಸ್‌ಬಿಐ ವೃತ್ತ)
- ರೆಸ್ಟ್ ಹೌಸ್ ರಸ್ತೆ (ಮ್ಯೂಸಿಯಂ ರಸ್ತೆ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆ ಜಂಕ್ಷನ್)
- ರೆಸಿಡೆನ್ಸಿ ರಸ್ತೆ ಜಂಕ್ಷನ್‌ನಿಂದ ಎಂ.ಜಿ.ರಸ್ತೆ ಜಂಕ್ಷನ್

(ಮೇಲಿನ ಎಲ್ಲ ರಸ್ತೆಗಳಲ್ಲಿ ಡಿ. 31ರಂದು ಸಂಜೆ 4 ಗಂಟೆಯಿಂದ ರಾತ್ರಿ 3 ಗಂಟೆಯವರೆಗೆ ಎಲ್ಲ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ)

ಆಕ್ಸ್‌ಫರ್ಡ್ ಡಿಕ್ಷನರಿ ‘‘ರಿಜ್’’ ಅನ್ನು ವರ್ಷದ ಪದವಾಗಿ ಆಯ್ಕೆ ಮಾಡಿದೆ.



ಸಿಎಸ್‌ಆರ್ ಬಾಕ್ಸ್ ಸಂಸ್ಥೆಯ ಪ್ರತಿನಿಧಿಗಳು ಆರೋಗ್ಯ ಇಲಾಖೆ ಜತೆಗೆ ಒಪ್ಪಂದ ಮಾಡಿಕೊಂಡರು. ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ಹಾಗೂ ಡಾ. ಧನಂಜಯ್ ಭಾಗವಹಿಸಿದ್ದರು.

‘ಆರೋಗ್ಯ ಕೇಂದ್ರಗಳು ಮೇಲ್ದರ್ಜೆಗೆ’

ಬೆಂಗಳೂರು: ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಸಿಎಸ್‌ಆರ್ ಬಾಕ್ಸ್ ಸಂಸ್ಥೆಯ ಜತೆಗೆ ಆರೋಗ್ಯ ಇಲಾಖೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಮ್ಮುಖದಲ್ಲಿ ಒಪ್ಪಂದ ಪ್ರಕ್ರಿಯೆ ನಡೆಯಿತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ದಿನೇಶ್ ಗುಂಡೂರಾವ್, ‘ಸಿಎಸ್‌ಆರ್ ಬಾಕ್ಸ್ ಸಂಸ್ಥೆಯು ಈಗಾಗಲೇ ₹ 3 ಕೋಟಿ ಸಿಎಸ್‌ಆರ್ ಅನುದಾನದಲ್ಲಿ ರಾಯಚೂರು ಜಿಲ್ಲೆಯ 10 ಸರ್ಕಾರಿ ಆರೋಗ್ಯ ಕೇಂದ್ರಗಳ ಮೂಲಸೌಕರ್ಯ ವೃದ್ಧಿಗೆ ನೆರವಾಗಿದ್ದು, ಈ ಕಾರ್ಯ ಪ್ರಗತಿಯಲ್ಲಿದೆ’ ಎಂದರು.

‘ನೂತನ ಒಪ್ಪಂದದ ಅನುಸಾರ ಸಂಸ್ಥೆಯು ಸಿಎಸ್‌ಆರ್ ಅಡಿ ₹100 ಕೋಟಿಯಲ್ಲಿ 200 ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಮೂಲಸೌಕರ್ಯ ಒದಗಿಸುತ್ತದೆ. ಇದರಿಂದ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಸಿಗಲಿದೆ’ ಎಂದರು.

‘ಸಿಎಸ್‌ಆರ್ ನಿಧಿಯನ್ನು ಸಮರ್ಪಕವಾಗಿ ಬಳಸಲು, ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲು ಹಾಗೂ ಖಾಸಗಿ ಕಂಪನಿಗಳ ಜತೆಗೆ ಬಾಂಧವ್ಯ ವೃದ್ಧಿಸಲು ಇಲಾಖೆಯ ಉಪನಿರ್ದೇಶಕರೊಬ್ಬರನ್ನು ರಾಜ್ಯಮಟ್ಟದ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಇದರಿಂದ ಸಿಎಸ್‌ಆರ್ ಅನುದಾನ ಸದ್ಬಳಕೆ ಆಗುವ ವಿಶ್ವಾಸವಿದೆ’ ಎಂದು ಹೇಳಿದರು.

ಜ.26ಕ್ಕೆ ‘ತಪಸ್-ಸಾಧನ’ ಪರೀಕ್ಷೆ

ಬೆಂಗಳೂರು: ನೀಟ್, ಐಐಟಿ, ಜೆಇಇ ತರಬೇತಿ ನೀಡಲು ರಾಷ್ಟ್ರೋತ್ಥಾನ ಸಂಸ್ಥೆ ನಡೆಸುವ ‘ತಪಸ್-ಸಾಧನ’ 2ನೇ ಹಂತದ ಪರೀಕ್ಷೆ ಜ.26ಕ್ಕೆ ನಡೆಯಲಿದೆ.

ಈಗಾಗಲೇ ಮೊದಲ ಹಂತದ ಪರೀಕ್ಷೆ ಮುಗಿದಿದ್ದು, 46 ಕೇಂದ್ರಗಳಲ್ಲಿ ಎರಡನೇ ಹಂತದ ಪರೀಕ್ಷೆ ನಡೆಯಲಿದೆ. ಆಯ್ಕೆಯಾದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಪಸ್ (ಐಐಟಿ-ಜೆಇಇ ತರಬೇತಿ) ಹಾಗೂ ವಿದ್ಯಾರ್ಥಿನಿಯರಿಗೆ ಸಾಧನಾ (ನೀಟ್) ತರಬೇತಿ ನೀಡಲಾಗುತ್ತದೆ ಎಂದರು.

ಬಿಜೆಪಿ ತಂಡ ಸಿದ್ಧ: ಮಹೇಶ್

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಸಮರ್ಥ ತಂಡ ರಚನೆಯಾಗಿದೆ ಎಂದು ಪಕ್ಷದ ಉಪಾಧ್ಯಕ್ಷ ಎನ್.ಮಹೇಶ್ ಸೋಮವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಸಾಮಾಜಿಕ, ಭೌಗೋಳಿಕ ಆಯಾಮಗಳನ್ನು ಒಳಗೊಂಡ ವ್ಯವಸ್ಥಿತ ತಂಡ ರಚಿಸಲಾಗಿದೆ. 2024 ರ ಲೋಕಸಭಾ ಚುನಾವಣೆಯನ್ನು ಬಿಜೆಪಿ ಸಮರ್ಥವಾಗಿ ಎದುರಿಸಲಿದೆ ಎಂದರು.

ಅಪಘಾತ: ಹತ್ಯೆ ಪ್ರಕರಣ ದಾಖಲು

ಬೆಂಗಳೂರು: ಪಾನಮತ್ತ ಚಾಲನೆಯಿಂದ ಅಪಘಾತವಾಗಿ ಯಾರಾದರೂ ಮೃತಪಟ್ಟರೆ ಆರೋಪಿ ಚಾಲಕನ ವಿರುದ್ಧ ಐಪಿಸಿ 304 (ಕೊಲೆ ಉದ್ದೇಶವಿಲ್ಲದೆ ನಡೆದ ಹತ್ಯೆ) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಪಘಾತ ಉಂಟು ಮಾಡಿದ ಚಾಲಕ, ಮೃತರು ಹಾಗೂ ಗಾಯಾಳುಗಳ ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗುವುದು. ಚಾಲಕ ಮದ್ಯ ಕುಡಿದಿದ್ದು ಖಾತ್ರಿಯಾಗುತ್ತಿದ್ದಂತೆ ಐಪಿಸಿ 304 ಸೆಕ್ಷನ್ ಸೇರಿಸಲಾಗುವುದು. ಇತ್ತೀಚೆಗೆ ಸಂಭವಿಸಿದ್ದ 8 ಅಪಘಾತ ಪ್ರಕರಣಗಳಲ್ಲಿ ಈಗಾಗಲೇ ಈ ಕ್ರಮ ಕೈಗೊಳ್ಳಲಾಗಿದೆ’ ಎಂದರು.

‘ಹೊಸ ವರ್ಷಾಚರಣೆ ಸಂದರ್ಭದಲ್ಲಿ ಮದ್ಯ ಕುಡಿದು ಚಾಲನೆ ಮಾಡುವವರನ್ನು ಪತ್ತೆ ಮಾಡಿ ಕ್ರಮ ಜರುಗಿಸಲಾಗುವುದು’ ಎಂದು ಹೇಳಿದರು.

ಭಾರಿ ವಾಹನಗಳಿಗೆ ನಿರ್ಬಂಧ: ‘ಡಿ. 31ರಂದು ಸಂಜೆ 4 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ’ ಎಂದು ಅನುಚೇತ್ ತಿಳಿಸಿದರು.

‘ಪ್ರಜಾವಾಣಿ’ಯ ನಾಗರಾಜ ಸೇರಿ 29 ಮಂದಿಗೆ ಪ್ರೆಸ್‌ಕ್ಲಬ್ ಪ್ರಶಸ್ತಿ

ಬೆಂಗಳೂರು: ‘ಪ್ರಜಾವಾಣಿ’ ಡೆಪ್ಯೂಟಿ ಎಡಿಟರ್ ಎಂ. ನಾಗರಾಜ ಸೇರಿ 29 ಪತ್ರಕರ್ತರನ್ನು ಜೀವಮಾನ ಸಾಧನೆ ಪ್ರಶಸ್ತಿಗೆ ಬೆಂಗಳೂರು ಪ್ರೆಸ್‌ಕ್ಲಬ್ ಆಯ್ಕೆ ಮಾಡಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ (ವರ್ಷದ ವ್ಯಕ್ತಿ ಪ್ರಶಸ್ತಿ), ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ (ವಿಶೇಷ ಪ್ರಶಸ್ತಿ), ಕಾರ್ಮಿಕ ಸಚಿವ ಸಂತೋಷ್ ಲಾಡ್, ಏಷ್ಯಾ ಬಾಸ್ಕೆಟ್ ಬಾಲ್ ಫೆಡರೇಷನ್ ಅಧ್ಯಕ್ಷ ಕೆ. ಗೋವಿಂದರಾಜು ಅವರನ್ನು ಪ್ರೆಸ್‌ಕ್ಲಬ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮಾಧ್ಯಮ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿರುವ ಕೆ. ಸದಾಶಿವ ಶೆಣೈ, ಆರ್. ಶಂಕರ್, ಕೂಡ್ಲಿ ಗುರುರಾಜ, ಕೆ. ಕೆ.ಮೂರ್ತಿ, ರೂಪಾ ಆರ್. ರಾವ್, ಬಿ.ಎಸ್. ಸತೀಶ್‌ಕುಮಾರ, ರಾಕೇಶ್ ಪ್ರಕಾಶ್, ಬಿ.ಎನ್. ರಮೇಶ್, ಎಚ್.ವಿ. ಕಿರಣ್, ಪಿ.ಕೆ. ಚನ್ನಕೃಷ್ಣ, ವಿಜಯ್‌ಕುಮಾರ್ ಮಲಗಿಹಾಳ್, ಮನೋಜ್‌ಕುಮಾರ್, ಪಿ. ಮುತ್ತು, ಶ್ರೀಕಂಠ ಶರ್ಮ ಆರ್, ಸಿದ್ದೇಶ್ ಕುಮಾರ್ ಎಚ್.ಪಿ, ಅಫ್ಶಾನಾ ಯಾಸ್ಮಿನ್, ಎಂ.ಚಂದ್ರಶೇಖರ್, ಕೆ.ಎಸ್. ಭಾಸ್ಕರ್, ಸುಭಾಷ್ ಹೂಗಾರ್, ಪ್ರಸನ್ನ ಕುಮಾರ್ ಲೂಯಿಸ್, ಎಚ್.ಡಿ. ಶಂಕರೇಗೌಡ, ಕೆ.ಎಸ್. ಜನಾರ್ದನಾಚಾರಿ, ಲಿಂಗರಾಜು ಡಿ. ನೊಣವಿನಕೆರೆ, ಮೋಹನ್ ರಾವ್ ಸಾವಂತ್. ಜಿ, ಅನಂತರಾಮು ಸಂಕ್ಲಾಪುರ್, ಕೌಶಿಕ್.ಆರ್, ಲಕ್ಷ್ಮಿಸಾಗರ ಸ್ವಾಮಿಗೌಡ, ಚಿದಾನಂದ ಪಟೇಲ ಅವರನ್ನು ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರೆಸ್‌ಕ್ಲಬ್ ಆವರಣದಲ್ಲಿ ಡಿ.31ರ ಬೆಳಗ್ಗೆ 11:30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ, ಸಚಿವ ಜಮೀರ್ ಅಹಮದ್ ಖಾನ್ ಭಾಗವಹಿಸುವರು ಎಂದು ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ತಿಳಿಸಿದ್ದಾರೆ.



ಹಳೇ ಮದ್ರಾಸ್ ರಸ್ತೆಯಲ್ಲಿ ನಿರ್ಮಿಸಲಾಗಿದ್ದ ‘ರ‍್ಯಾಪಿಡ್ ರಸ್ತೆ’ಯಲ್ಲಿ ಕಾಣಿಸಿಕೊಂಡಿದ್ದ ಬಿರುಕು

ಭರವಸೆಗಳ ಸುರಿಮಳೆ ಕಾಣದ ಅಭಿವೃದ್ಧಿ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ 2023ರ ಆರಂಭದಿಂದ ಅಂತ್ಯದವರೆಗೆ ಅಭಿವೃದ್ಧಿ ಯೋಜನೆಗಳ ಭರವಸೆಯ ಸುರಿಮಳೆಯನ್ನೇ ಕಂಡರೂ, ಆ ಯೋಜನೆಗಳು-ಕಾರ್ಯಗತವಾಗುವ ಮುನ್ಸೂಚನೆಯೂ ವರ್ಷದ ಅಂತ್ಯಕ್ಕೆ ಕಂಡುಬರಲಿಲ್ಲ.

ವಾಹನ ದಟ್ಟಣೆ ನಿಯಂತ್ರಣ, ಸಿಗ್ನಲ್ ಮುಕ್ತ ಸಂಚಾರ, ಮೇಲ್ಸೇತುವೆ, ಸುರಂಗ ಮಾರ್ಗ, ಎಲಿವೇಟೆಡ್ ಕಾರಿಡಾರ್, 25 ವರ್ಷದ ದೂರದೃಷ್ಟಿಯ ಅಭಿವೃದ್ಧಿ ಕಾಮಗಾರಿಗಳು, ಕಾಂಕ್ರೀಟ್ ರಸ್ತೆಗಳು, ಗುಂಡಿ ಮುಕ್ತ ರಸ್ತೆಗಳು... ಹೀಗೆ ನೂರಾರು ಭರವಸೆಗಳನ್ನು ಅಧಿಕಾರದಲ್ಲಿದ್ದವರು, ಅಧಿಕಾರಕ್ಕೆ ಬಂದವರು ವರ್ಷದ ಆರಂಭದಿಂದ ಕೊನೆಯವರೆಗೂ ನೀಡಿದ್ದರು. ಇವುಗಳಲ್ಲಿ ಒಂದೂ ಅನುಷ್ಠಾನವಾಗಲಿಲ್ಲ.

‘ಬ್ರ್ಯಾಂಡ್ ಬೆಂಗಳೂರು’ ಹೆಸರಿನಲ್ಲೂ ನೂರಾರು ಯೋಜನೆಗಳನ್ನು ಪ್ರಕಟಿಸಲಾಯಿತಾದರೂ ಅವೆಲ್ಲ ಇನ್ನೂ ಸಭೆ, ಸಮಾರಂಭ, ಚರ್ಚೆಯ ಹಂತದಲ್ಲೇ ಉಳಿದಿವೆ. ಮಾಡಿರುವ ಕೆಲಸಕ್ಕೆ ಗುತ್ತಿಗೆದಾರರಿಗೆ ಹಣ ಪಾವತಿಯಾಗದ್ದರಿಂದ ಅವರು ಪ್ರತಿಭಟನೆ ನಡೆಸಿದರು. ಕೆಲಸ ಸ್ಥಗಿತವೂ ಆಯಿತು. ಹಲವು ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ.

ನಗರದ ಎಲ್ಲ ಭಾಗಕ್ಕೂ ಕುಡಿಯಲು ಕಾವೇರಿ ನೀರು, ಒಳಚರಂಡಿ ನೀರಿನ ವ್ಯವಸ್ಥೆ ನೀಡುತ್ತೇನೆ ಎಂದು ಭರವಸೆ ನೀಡುತ್ತಲೇ ಇದೆ ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ). ಹೊಸ ನಿವೇಶನಗಳ ಹಂಚಿಕೆಗೆ ಆಸಕ್ತಿ ತೋರಿದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಈ ವರ್ಷ ಒಂದೇ ಒಂದು ಯೋಜನೆಯನ್ನೂ ಅನುಷ್ಠಾನಗೊಳಿಸಲಿಲ್ಲ, ನಾಗರಿಕರಿಗೆ ನಿವೇಶನ ಹಂಚಲಿಲ್ಲ.

ಚುನಾವಣೆ ವರ್ಷವಾದ್ದರಿಂದ ಮೂರ್ನಾಲ್ಕು ತಿಂಗಳು ಚುನಾವಣೆಯ ಚಟುವಟಿಕೆಗಳಲ್ಲೇ ಕಳೆದು ಹೋಯಿತು. ಆದರೂ ಒಂದು ಸರ್ಕಾರದ ಅಂತ್ಯ ಹಾಗೂ ಮತ್ತೊಂದು ಸರ್ಕಾರದ ಆರಂಭದ ನಡುವೆ ಸಿಲುಕಿಕೊಂಡ ಬೆಂಗಳೂರು ಅಭಿವೃದ್ಧಿ ಕಾಮಗಾರಿಗಳು ಯಾವ ಪ್ರಗತಿಯನ್ನೂ ಕಾಣಲಿಲ್ಲ. ಭರವಸೆಗಳ ಬೃಹತ್ ಪ್ರಕಾಶಮಾನದಲ್ಲೇ ಅಭಿವೃದ್ಧಿ ಕಾಣಲು ಸಾಧ್ಯವಾಗಿಲ್ಲ.



ಇಂದಿರಾ ಕ್ಯಾಂಟೀನ್

2023 ರ ಪ್ರಮುಖ ಬೆಳವಣಿಗೆಗಳು

ಜನವರಿ

- ಸ್ಯಾಂಕಿ ರಸ್ತೆ ಮೇಲ್ಸೇತುವೆಗೆ ಸ್ಥಳೀಯ ನಾಗರಿಕರ ವಿರೋಧ.
- ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣರಾಜ್ಯೋತ್ಸವ
- ದೇಶದ ಪ್ರಥಮ ‘ರ‍್ಯಾಪಿಡ್ ರಸ್ತೆ’ ಎಂದು ಬಿಬಿಎಂಪಿ ಬಿಂಬಿಸಿದ್ದ ರಸ್ತೆ ಒಂದು ತಿಂಗಳಲ್ಲೇ ಬಿರುಕು
- ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಕಾಮಗಾರಿ ಪ್ರಾರಂಭ



ಸ್ಯಾಂಕಿ ಕೆರೆ ತಂಡದ ಸದಸ್ಯರಿಂದ ‘ಸ್ಯಾಂಕಿ ಫ್ಲೈ ಓವರ್ ಯೋಜನೆ’ಗೆ ವಿರೋಧ

ಫೆಬ್ರುವರಿ

- ಬಿಡಿಎ ನಾಡಪ್ರಭು ಕೆಂಪೇಗೌಡ ಬಡಾವಣೆ: ಸಿಎ ನಿವೇಶನ ಪರಿವರ್ತನೆ ಪ್ರಕರಣದ ವರದಿ– 31 ಎಂಜಿನಿಯರ್ ಮೇಲೆ ಕಾನೂನು ಕ್ರಮಕ್ಕೆ ಶಿಫಾರಸು
- ಎಂ.ಸಿ. ಲೇಔಟ್‌ನಲ್ಲಿ 300 ಹಾಸಿಗೆಗಳ ಪಾಲಿಕೆಗಳ ವ್ಯಾಪ್ತಿಯಲ್ಲಿ ಅತಿ ದೊಡ್ಡ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರಂಭ
- ಜ್ಞಾನಭಾರತಿ ಆವರಣದಲ್ಲಿ ತ್ಯಾಜ್ಯ; ಬಿಬಿಎಂಪಿಯಿಂದ 5 ನೋಟಿಸ್

ಮಾರ್ಚ್

- ವಿಶ್ವಸಂಸ್ಥೆಯಿಂದ ಬೆಂಗಳೂರಿಗೆ ‘ಆರೋಗ್ಯಕರ ನಗರಗಳ ಪಾಲುದಾರಿಕೆ’ ಪ್ರಶಸ್ತಿ
- ರೇಸ್‌ಕೋರ್ಸ್‌ಗೆ ಅಂಬರೀಶ್ ಹೆಸರು: ಬಿಬಿಎಂಪಿ ಅನುಮೋದನೆ
- ಪುಟಾಣಿ ರೈಲು, ಬೋಟಿಂಗ್ ಸೇರಿ ನವೀಕರಣಗೊಂಡ ಬಾಲಭವನಕ್ಕೆ ಚಾಲನೆ
- ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿ: 19 ವಿಧಾನಸಭೆ ಕ್ಷೇತ್ರಗಳು ಸೂಕ್ಷ್ಮ

ಏಪ್ರಿಲ್

- ಪಿಯುಸಿ: ಬಿಬಿಎಂಪಿ ಕಾಲೇಜಿಗೆ ಶೇ 63.18 ಫಲಿತಾಂಶ
- ವಿಧಾನಸಭೆ ಚುನಾವಣೆಗೆ ಮನೆಯಿಂದ ಮತ: ಮತದಾನಕ್ಕೆ ಮುನ್ನ 33 ಮಂದಿ ಮರಣ

ಮೇ

- ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನಲ್ಲಿ 97 ಲಕ್ಷ ಮತದಾರರು, 8802 ಮತಗಟ್ಟೆಗಳು
- ಜನಸ್ನೇಹಿ, ಭ್ರಷ್ಟಾಚಾರ ರಹಿತ ಬಿಬಿಎಂಪಿ: ಡಿಸಿಎಂ ಶಿವಕುಮಾರ್ ಭರವಸೆ

ಜೂನ್

- ಮಕ್ಕಳಿಗೆ ರಸ್ತೆ ಬದಿ ಗಿಡ ಬೆಳೆಸುವ ‘ಜವಾಬ್ದಾರಿ ಸ್ಪರ್ಧೆ’.
- ಹೊಸದಾಗಿ 50 ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲು ಸಿಎಂ ಸೂಚನೆ
- ಪಾಲಿಕೆ ವಿಭಜನೆ, ಒಂದೇ ವೇದಿಕೆಯಡಿ ಎಲ್ಲ ಇಲಾಖೆಗಳಿಗೆ ‘ಗ್ರೇಟರ್ ಬೆಂಗಳೂರು’– ಬಿಬಿಎಂಪಿ ಪುನರ್ ರಚನೆಗೆ ತಜ್ಞರ ಸಮಿತಿ
- ₹50 ಸಾವಿರ ಕೋಟಿ ವೆಚ್ಚದಲ್ಲಿ ಸುರಂಗ ಮಾರ್ಗ ನಿರ್ಮಿಸಲು ಚಿಂತನೆ

ಜುಲೈ

- ಶಾಲೆ ಕಟ್ಟಡ ಪೂರ್ಣಗೊಳ್ಳದೆ ಬಿಲ್ ಪಾವತಿ ಮಾಡಿದ ಐವರು ಎಂಜಿನಿಯರ್‌ಗಳ ಅಮಾನತು
- 65 ಕಿ.ಮೀ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಡೆವಲಪರ್‌ಗಳಿಂದ ಹಣ: ಡಿಸಿಎಂ ಡಿ.ಕೆ. ಶಿವಕುಮಾರ್
- ಬಿಬಿಎಂಪಿ ದಕ್ಷಿಣ ವಲಯದಲ್ಲಿ 80 ಕಟ್ಟಡಗಳು ಅನಧಿಕೃತ; ನಕ್ಷೆ ಉಲ್ಲಂಘನೆ– ಕಟ್ಟಡ ತೆರವು
- ರಸ್ತೆ ನಾಮಫಲಕಗಳಲ್ಲಿ ‘ಕ್ಯೂಆರ್ ಕೋಡ್ ರೋಡ್ ರೀಡರ್’ ಯೋಜನೆ ಜಾರಿ.
- ‘ಬ್ರ್ಯಾಂಡ್ ಬೆಂಗಳೂರು’: 70 ಸಾವಿರಕ್ಕೂ ಹೆಚ್ಚು ಸಲಹೆ

ಆಗಸ್ಟ್

- ಸರ್ಕಾರದಿಂದ ₹25 ಸಾವಿರ ಕೋಟಿ ಬಾಕಿ, ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಗುತ್ತಿಗೆದಾರರು: ಅಧ್ಯಕ್ಷ ಕೆಂಪಣ್ಣ ಆರೋಪ
- ಬಿಬಿಎಂಪಿ ಕೇಂದ್ರ ಕಚೇರಿಯ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಬೆಂಕಿ. ಒಂಬತ್ತು ಮಂದಿಗೆ ತೀವ್ರ ಗಾಯ, ಮುಖ್ಯ ಎಂಜಿನಿಯರ್ ಶಿವಕುಮಾರ್ ಸಾವು.
- ಶಿವರಾಮ ಕಾರಂತ ಬಡಾವಣೆ ಬಳಿ ಐಟಿ ಹಬ್: ಡಿಸಿಎಂ ಘೋಷಣೆ
- ಷರತ್ತುಗಳನ್ನೇ ಉಲ್ಲಂಘಿಸಿದ ಜಯನಗರದ ಪ್ರತಿಷ್ಠಿತ ಕಾಸ್ಮೊಪಾಲಿಟನ್ ಕ್ಲಬ್‌ಗೆ ಬಿಡಿಎ ನೋಟಿಸ್.
- ಕಾಂಗ್ರೆಸ್‌ನ 12 ಶಾಸಕರ ಕ್ಷೇತ್ರದಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ತಲಾ ₹45 ಕೋಟಿ ವೆಚ್ಚಕ್ಕೆ ಸರ್ಕಾರ ಅನುಮತಿ.

ಸೆಪ್ಟೆಂಬರ್

- ಬಿಬಿಎಂಪಿ ಪ್ರತ್ಯೇಕ ಆರೋಗ್ಯ ಜಿಲ್ಲೆ: ಸಚಿವ ದಿನೇಶ್ ಗುಂಡೂರಾವ್ ಘೋಷಣೆ
- ಶಾಲೆ, ಕಾಲೇಜು, ದೇವಾಲಯ ಆವರಣದಲ್ಲಿ ಏಕಬಳಕೆ ಪ್ಲಾಸ್ಟಿಕ್ ನಿಷೇಧಕ್ಕೆ ಸೂಚನೆ
- ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಚುನಾವಣೆ. ಅಧ್ಯಕ್ಷರಾಗಿ ಅಮೃತ್‌ರಾಜ್ ಅವಿರೋಧ ಆಯ್ಕೆ.
- ಬಿಬಿಎಂಪಿ ಗುತ್ತಿಗೆದಾರರಿಗೆ ಶೇ 75ರಷ್ಟು ಬಿಲ್ ಪಾವತಿಗೆ ನಿರ್ಧಾರ
- ಸಾವಿರಾರು ಪಿಒಪಿ ಗಣೇಶ ಮೂರ್ತಿಗಳ ವಿಸರ್ಜನೆ

ಅಕ್ಟೋಬರ್

- ಮೂರು ವರ್ಷದ ನಂತರ ಬೀದಿನಾಯಿಗಳ ಗಣತಿ. ಡ್ರೋನ್ ಮೂಲಕ ವಿವಿಧೆಡೆ ಗಣತಿ.
- ಎಲ್ಲ ಆಸ್ತಿಗಳ ತೆರಿಗೆ ಮರುಪರಿಶೀಲನೆ; ಕಟ್ಟಡಗಳ ವಾಸ್ತವ ಅಳತೆ ದಾಖಲು ಹಾಗೂ ಆಸ್ತಿ ದಾಖಲೆಗಳ ಡಿಜಿಟಲೀಕರಣಕ್ಕೆ ನಿರ್ಧಾರ
- ವಾರ್ಡ್‌ಗಳ ಮರುವಿಂಗಡಣೆ. 243ರಿಂದ 225ಕ್ಕೆ ನಿಗದಿ. ‘ಬಸನಗುಡಿ ವಾರ್ಡ್’ ಹೆಸರು ಬದಲಾವಣೆಗೆ ವಿರೋಧ
- ‘ಕೆರೆ ಮಿತ್ರ’ ಹಾಗೂ ‘ಹಸಿರು ಮಿತ್ರ’ರಾಗಲು ನಾಗರಿಕರಿಗೆ ಅವಕಾಶ.

ನವೆಂಬರ್

- ನಗರದ ಹೊರವಲಯದಲ್ಲಿ ನಾಲ್ಕು ದಿನ ಭಯ ಹುಟ್ಟಿಸಿದ್ದ ಚಿರತೆಗೆ ಗುಂಡು ಹಾರಿಸಿ ಹತ್ಯೆ
- ನಗರದ ಪ್ರಥಮ ಹವಾಮಾನ ಕ್ರಿಯಾಯೋಜನೆ (ಸಿಎಪಿ) ಕರಡು ಸಿದ್ಧತೆ ಸಜ್ಜು
- ಪಾರಂಪರಿಕ ಜಾಗಗಳು, ಹಸಿರು ವನಗಳ ಬಗ್ಗೆ ಸಮೀಕ್ಷೆಗೆ ಸೂಚನೆ
- ಬಿಬಿಎಂಪಿ ಸಂಘದ ವತಿಯಿಂದ ನೇಪಾಳದ ಕಠ್ಮಂಡುವಿನಲ್ಲಿ ‘ಅಂತರ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ’

ಡಿಸೆಂಬರ್

- ಒಂಬತ್ತು ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಕಾಮಗಾರಿ ಆರಂಭಿಸಲು ಸರ್ಕಾರ ಅನುಮೋದನೆ
- ಅರ್ಧಕ್ಕೆ ನಿಂತಿದ್ದ ಈಜಿಪುರ ಎಲಿವೇಟೆಡ್ ಕಾರಿಡಾರ್ ಯೋಜನೆ ಕಾಮಗಾರಿಗೆ ಚಾಲನೆ
- ಆಸ್ತಿಗಳ ದಾಖಲೆಗಳ ಡಿಜಿಟಲೀಕರಣಕ್ಕೆ ನಿರ್ಧಾರ
- ಇಂದಿರಾ ಕ್ಯಾಂಟೀನ್‌ನಲ್ಲಿ ಮುದ್ದೆ ಸೊಪ್ಪಿನ ಸಾರು ಸೇರಿದಂತೆ ಹೊಸ ಮೆನುಗೆ ಅನುಮತಿ
- 2019–20ರಿಂದ 2022–23ನೇ ಸಾಲಿನಲ್ಲಿ ನಡೆದಿದ್ದ ಕಾಮಗಾರಿಗಳ ಅಕ್ರಮ ತನಿಖೆಗೆ ರಚಿಸಿದ್ದ ನಾಲ್ಕು ವಿಶೇಷ ತನಿಖಾ ಸಮಿತಿ (ಎಸ್‌ಐಟಿ) ರದ್ದು
- ₹754 ಕೋಟಿ ವೆಚ್ಚದಲ್ಲಿ 61 ಕಿ.ಮೀ ರಸ್ತೆ ವೈಟ್ ಟಾಪಿಂಗ್‌ಗೆ ಟೆಂಡರ್
- ಬಿಬಿಎಂಪಿ ಶಾಲೆಗಳಲ್ಲಿ ಶಿಕ್ಷಣ– ಶಿಕ್ಷಣ ಇಲಾಖೆಗೆ ಜವಾಬ್ದಾರಿ

29ಕ್ಕೆ ಸಂವಿಧಾನ ಸಮರ್ಪಣೆ ದಿನ

ಕೆ.ಆರ್.ಪುರ: ಸಂವಿಧಾನ ಸಮರ್ಪಣಾ ದಿನ ನಿಮಿತ್ತ ಸಂವಿಧಾನ ರಕ್ಷಣೆ ಮತ್ತು ಪ್ರಜಾಪ್ರಭುತ್ವ ಉಳಿವಿಗಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಜಿಲ್ಲಾಮಟ್ಟದ ಜಾಗೃತಿ ಸಮಾವೇಶ ಡಿ.29ರಂದು ಬೆಂಗಳೂರು ನಗರದ ವಸಂತನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಬೆಂಗಳೂರು ವಿಭಾಗೀಯ ಉಪ ಪ್ರಧಾನ ಸಂಚಾಲಕ ಮಣಿಪಾಲ್ ರಾಜಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ರಾಜ್ಯ ಆದೇಶದಂತೆ ಸಂವಿಧಾನ ರಕ್ಷಣೆ ಮತ್ತು ಪ್ರಜಾ ಪ್ರಭುತ್ವ ಉಳಿವಿಗಾಗಿ ಜಿಲ್ಲಾಮಟ್ಟದ ಜಾಗೃತಿ ಸಮಾವೇಶ ನಡೆಯಲಿವೆ. ಸಮಾವೇಶದಲ್ಲಿ ಸಾಹಿತಿಗಳು, ಚಿಂತಕರು, ಲೇಖಕರು ಪಾಲ್ಗೊಳ್ಳಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕೋರಿದರು.

‘ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಕ್ರಮಕ್ಕೆ ಆಗ್ರಹ’

ಬೆಂಗಳೂರು: ‘ಮುಸ್ಲಿಂ ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಜರುಗಿಸಬೇಕು’ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಎಂ) ಆಗ್ರಹಿಸಿದೆ.

ಅಲ್ಪಸಂಖ್ಯಾತರ ವಿರುದ್ಧದ ಕೀಳುಮಟ್ಟದ ಹೇಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಯು. ಬಸವರಾಜು ಒತ್ತಾಯಿಸಿದ್ದಾರೆ.

ವಿದೇಶಗಳಿಗೆ ಹೆಚ್ಚು ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಈ ನವೆಂಬರ್‌ನಲ್ಲಿ ಅತೀ ಹೆಚ್ಚು ಪ್ರಯಾಣಿಕರು ವಿದೇಶಗಳಿಗೆ ಪ್ರಯಾಣಿಸಿದ್ದಾರೆ.

ನವೆಂಬರ್ ತಿಂಗಳಲ್ಲಿ 3,98,792 ಪ್ರಯಾಣಿಕರು ಟರ್ಮಿನಲ್–2ರಿಂದ ವಿದೇಶ ಪ್ರಯಾಣ ಮಾಡಿದ್ದಾರೆ. 2022ರ ನವೆಂಬರ್ ತಿಂಗಳಿಗೆ ಹೋಲಿಸಿದರೆ ಈ ಬಾರಿ ಪ್ರಯಾಣಿಕರ ಸಂಖ್ಯೆ ಶೇ 8.6ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರದ ವಿಮಾನ ನಿಲ್ದಾಣ ಪ್ರಾಧಿಕಾರ ವರದಿ ತಿಳಿಸಿದೆ.

ಕೆಂಪೇಗೌಡ ವಿಮಾನ ನಿಲ್ದಾಣದಿಂದ ಈ ನವೆಂಬರ್‌ನಲ್ಲಿ 30,75,234 ಪ್ರಯಾಣಿಕರು ದೇಶದ ವಿವಿಧ ನಗರಗಳಿಗೆ ಸಂಚರಿಸಿದ್ದಾರೆ.

ಇದೇ ವರ್ಷ ವಿಮಾನ ಸಂಚಾರ ಆರಂಭಿಸಿದ ಶಿವಮೊಗ್ಗ ವಿಮಾನ ನಿಲ್ದಾಣಕ್ಕೂ ಹೆಚ್ಚು ವಿಮಾನ ಸಂಚರಿಸುತ್ತಿವೆ. ಆಗಸ್ಟ್‌ನಲ್ಲಿ ಕೇವಲ 145 ಪ್ರಯಾಣಿಕರು ಶಿವಮೊಗ್ಗಕ್ಕೆ ಪ್ರಯಾಣ ಬೆಳೆಸಿದ್ದಾರೆ. ಅಕ್ಟೋಬರ್‌ನಲ್ಲಿ 3,338 ಪ್ರಯಾಣಿಕರು, ನವೆಂಬರ್‌ನಲ್ಲಿ 4,622 ಪ್ರಯಾಣಿಕರು ಶಿವಮೊಗ್ಗಕ್ಕೆ ಪ್ರಯಾಣ ಬೆಳೆಸಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣದಿಂದ ನವೆಂಬರ್ ತಿಂಗಳಲ್ಲಿ ಹುಬ್ಬಳ್ಳಿಗೆ 31,447 ಪ್ರಯಾಣಿಕರು, ಬೆಳಗಾವಿಗೆ 32,059 ಪ್ರಯಾಣಿಕರು ಸಂಚರಿಸಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 44.7ರಷ್ಟು ಹೆಚ್ಚಳವಾಗಿದೆ.



ಬ್ರಹ್ಮರಥೋತ್ಸವ

ನೆಲಮಂಗಲದ ಸೊಂಡೆಕೊಪ್ಪ ರಸ್ತೆಯಲ್ಲಿರುವ ಬಯಲು ಉದ್ಭವ ಗಣೇಶನ (ಕಡಲೇಕಾಯಿ ಪರಿಷೆ) ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಅಂಚೆಪಾಳ್ಯದ ಟೋಲ್‌ಗೇಟ್ ಬಳಿ ಘಟನೆ • ಕಾರಣ ನಿಗೂಢ

ಹೆದ್ದಾರಿಯಲ್ಲಿ ಸುಟ್ಟ ಕಾರು ಚಾಲಕ ಸಜೀವ ದಹನ

ಪ್ರಜಾವಾಣಿ ವಾರ್ತೆ

ಪೀಣ್ಯ– ದಾಸರಹಳ್ಳಿ: ಸಮೀಪದ ಅಂಚೆಪಾಳ್ಯ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರೊಂದು ಬೆಂಕಿಯಿಂದ ಹೊತ್ತಿ ಉರಿದಿದ್ದು, ಕಾರಿನಲ್ಲಿ ಸಿಲುಕಿ ಚಾಲಕ ಅನಿಲ್‌ಕುಮಾರ್ (48) ಸಜೀವವಾಗಿ ದಹನವಾಗಿದ್ದಾರೆ.

‘ಜಾಲಹಳ್ಳಿ ಬಳಿಯ ಶೆಟ್ಟಿಹಳ್ಳಿ ನಿವಾಸಿ ಅನಿಲ್‌ಕುಮಾರ್, ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಮಾರುತಿ ಎಕ್ಸ್‌ಎಲ್–6 ಕಾರಿನಲ್ಲಿ (ಕೆಎ 04 ಎನ್‌ಬಿ 5879) ಮಂಗಳವಾರ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಹೇಳಿದರು.

‘ಅನಿಲ್‌ಕುಮಾರ್ ಅವರು ಕೆಲಸ ನಿಮಿತ್ತ ನೆಲಮಂಗಲಕ್ಕೆ ಹೋಗಿದ್ದರು. ಕೆಲಸ ಮುಗಿಸಿಕೊಂಡು ವಾಪಸು ಶೆಟ್ಟಿಹಳ್ಳಿಯತ್ತ ರಾಷ್ಟ್ರೀಯ ಹೆದ್ದಾರಿ ಮೂಲಕ ಕಾರಿನಲ್ಲಿ ಬರುತ್ತಿದ್ದರು. ಅಂಚೆಪಾಳ್ಯದ ಟೋಲ್‌ಗೇಟ್ ಬಳಿ ಕಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿತ್ತು.’



ರಸ್ತೆಯಲ್ಲಿ ಹೊತ್ತಿ ಉರಿಯುತ್ತಿದ್ದ ಕಾರು

‘ಬೆಂಕಿ ಕಂಡು ಗಾಬರಿಗೊಂಡಿದ್ದ ಅನಿಲ್‌ಕುಮಾರ್, ಕಾರು ನಿಲ್ಲಿಸಿ ಇಳಿಯಲು ಮುಂದಾಗಿದ್ದರು. ಆದರೆ, ಕಾರಿನ ಬಾಗಿಲುಗಳ ಲಾಕ್ ಆಗಿದ್ದವು. ಎಷ್ಟೇ ಪ್ರಯತ್ನಿಸಿದರೂ ಬಾಗಿಲು ತೆರೆಯಲು ಸಾಧ್ಯವಾಗಿರಲಿಲ್ಲ. ಹೊರಗೆ ಬರಲಾರದೇ ಅನಿಲ್‌ಕುಮಾರ್ ಕೂಗಾಡುತ್ತಿದ್ದರು. ಅಷ್ಟರಲ್ಲೇ ಬೆಂಕಿ ಕೆನ್ನಾಲಗೆ ಹೆಚ್ಚಾಗಿ, ಇಡೀ ಕಾರಿಗೆ ಆವರಿಸಿತ್ತು. ಅದೇ ಬೆಂಕಿಯಲ್ಲಿ ಸುಟ್ಟು ಅನಿಲ್‌ಕುಮಾರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಉರಿಯುತ್ತಿದ್ದ ಕಾರು ಕಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದರು. ಸ್ಥಳದಲ್ಲಿದ್ದ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಹೇಳಿದರು.

ಸಾವಿನಲ್ಲಿ ಅನುಮಾನ: ‘ಕಾರಿನಲ್ಲಿ ಯಾವ ಕಾರಣಕ್ಕೆ ಬೆಂಕಿ ಹೊತ್ತಿಕೊಂಡಿತು ? ಕಾರಿನ ಲಾಕ್ ಏಕೆ ತೆರೆಯಲಿಲ್ಲ ? ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಸ್ಥಳಕ್ಕೆ ಭೇಟಿ ನೀಡಿದ್ದ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು, ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಅವರು ವರದಿ ನೀಡಿದ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ಪೊಲೀಸರು ತಿಳಿಸಿದರು.

‘ಅನಿಲ್‌ಕುಮಾರ್ ಸಾವು ಆಕಸ್ಮಿಕವೋ ಅಥವಾ ಬೇರೆ ಯಾವುದಾದರೂ ಬೇರೆ ಕಾರಣವಿದೆಯಾ ? ಕಾರಿನಲ್ಲಿ ಏನಾದರೂ ದೋಷವಿತ್ತೆ ? ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಕಾರಿನ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಹೇಳಿದರು.

ಸಂಚಾರ ದಟ್ಟಣೆ: ಕಾರು ಬೆಂಕಿಯಿಂದ ಹೊತ್ತಿ ಉರಿಯುತ್ತಿದ್ದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಇದರಿಂದಾಗಿ 5 ಕಿ.ಮೀ. ವರೆಗೂ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಪ್ರತ್ಯೇಕ ಅಪಘಾತ ಇಬ್ಬರು ಸಾವು

ಬೆಂಗಳೂರು: ಚಿಕ್ಕಪೇಟೆ ಹಾಗೂ ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

ವಿಶ್ವೇಶ್ವರಯ್ಯ ಬಡಾವಣೆಯ ನಿವಾಸಿ ಕುಮಾರ್ (32) ಹಾಗೂ ಓಕಳೀಪುರ ನಿವಾಸಿ ಸತೀಶ್ (40) ಮೃತರು. ಎರಡೂ ಅಪಘಾತ ಸಂಬಂಧ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

‘ಅಡುಗೆ ಕೆಲಸ ಮಾಡುತ್ತಿದ್ದ ಕುಮಾರ್ ಸೋಮವಾರ ರಾತ್ರಿ ದ್ವಿಚಕ್ರ ವಾಹನದಲ್ಲಿ ಮುದ್ದಯ್ಯನಪಾಳ್ಯ ಮೂಲಕ ಹೊರಟಿದ್ದರು. ಇದೇ ಸಂದರ್ಭದಲ್ಲಿ ದ್ವಿಚಕ್ರ ವಾಹನಕ್ಕೆ ಗೂಡ್ಸ್ ವಾಹನ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಕುಮಾರ್ ಮೃತಪಟ್ಟಿದ್ದಾರೆ’ ಎಂದು ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸರು ತಿಳಿಸಿದರು.

‘ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದ ಸತೀಶ್, ಸ್ನೇಹಿತನ ಜೊತೆ ದ್ವಿಚಕ್ರ ವಾಹನದಲ್ಲಿ ಮಂಗಳವಾರ ಬೆಳಿಗ್ಗೆ ಹೊರಟಿದ್ದರು. ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ದ್ವಿಚಕ್ರ ವಾಹನಕ್ಕೆ, ಲಾರಿ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡು ಸತೀಶ್ ಮೃತಪಟ್ಟಿದ್ದಾರೆ. ಸ್ನೇಹಿತ ಗಾಯಗೊಂಡಿದ್ದಾರೆ’ ಎಂದು ಚಿಕ್ಕಪೇಟೆ ಸಂಚಾರ ಪೊಲೀಸರು ಹೇಳಿದರು.

ಕಾರು ಗುದ್ದಿ ಮಗು ಸಾವು ಚಾಲಕನಿಗೆ 4 ತಿಂಗಳು ಸಜೆ

ಬೆಂಗಳೂರು: ಕಾರು ಗುದ್ದಿ ಎರಡು ವರ್ಷದ ಮಗು ಬೇಬಿ ಮಿನಿಯಾ ಮೃತಪಟ್ಟಿದ್ದ ಪ್ರಕರಣದಲ್ಲಿ ಚಾಲಕ ಮೊಹಮ್ಮದ್ ಇಶಾಕ್‌ಗೆ (44) ನಾಲ್ಕು ತಿಂಗಳ ಸಾದಾ ಶಿಕ್ಷೆ ಹಾಗೂ ₹ 10 ಸಾವಿರ ದಂಡ ವಿಧಿಸಿ 6ನೇ ಎಂಎಂಟಿಸಿ ಸಂಚಾರ ನ್ಯಾಯಾಲಯ ಆದೇಶ ಹೊರಡಿಸಿದೆ.

ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಠಾಣೆ ವ್ಯಾಪ್ತಿಯ ರಾಮಯ್ಯ ರೆಡ್ಡಿ ಕಾಲೊನಿಯಲ್ಲಿ 2023ರ ಸೆಪ್ಟೆಂಬರ್ 21ರಂದು ಅಪಘಾತ ಸಂಭವಿಸಿತ್ತು. ‘ಗಂಡು ಮಗು ಬೇಬಿ ಮಿನಿಯಾ, ಖಾಲಿ ನಿವೇಶನದಲ್ಲಿ ಆಟವಾಡುತ್ತಿದ್ದ. ಇದೇ ಸ್ಥಳಕ್ಕೆ ಬಂದಿದ್ದ ಆರೋಪಿ ಮೊಹಮ್ಮದ್ ಇಶಾಕ್, ಹಿಮ್ಮುಖವಾಗಿ ಕಾರು ಚಲಾಯಿಸಿದ್ದರು. ಮಗುವಿಗೆ ಕಾರು ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಮಗುವನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆಸ್ಪತ್ರೆಯಲ್ಲಿ ಮಗು ಮೃತಪಟ್ಟಿತ್ತು’ ಎಂದು ಪೊಲೀಸರು ಹೇಳಿದರು.

‘ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿತ್ತು. ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು’ ಎಂದರು.



ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣ ಗೌಡ ಅವರು ಪತ್ನಿ ವಿಶಾಲಾಕ್ಷಿ ಅವರೊಂದಿಗೆ ‘ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ’ ಸ್ವೀಕರಿಸಿದರು. ಹುಕ್ಕೇರಿಯ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕಸಾಪ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗಶೆಟ್ಟಿ, ಪದ್ಮನಿ ನಾಗರಾಜು, ಸಾಹಿತಿ ಹಂ.ಪ. ನಾಗರಾಜಯ್ಯ, ಕಸಾಪ ಅಧ್ಯಕ್ಷ ಮಹೇಶ ಜೋಶಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಶಿವಲಿಂಗೇಗೌಡ ಮತ್ತು ಸಾಹಿತಿ ದೊಡ್ಡರಂಗೇಗೌಡ ಭಾಗವಹಿಸಿದ್ದರು.

ಪ್ರತಿಯೊಬ್ಬರಿಗೂ ಕೇಂದ್ರದ ಯೋಜನೆ ತಲುಪಿಸಲು ಮನವಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೈಗೊಂಡಿದ್ದ ಜನಪರ ಯೋಜನೆಗಳು ಪ್ರತಿಯೊಬ್ಬ ವ್ಯಕ್ತಿಗೂ ತಲುಪಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕರೆ ನೀಡಿದರು.

ಕೆ.ಆರ್.ಪುರ ಕ್ಷೇತ್ರದ ಬಿಬಿಎಂಪಿ ಕಚೇರಿ ಬಳಿ ಬಿಜೆಪಿ ಕಾರ್ಯಕರ್ತರು ಹಮ್ಮಿಕೊಂಡಿದ್ದ ನಮ್ಮ ಸಂಕಲ್ಪ ವಿಕಸಿತ ಭಾರತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಯೋಜನೆಗಳು ಜನರ ಮನೆ ಬಾಗಿಲಿಗೆ ತಲುಪಬೇಕು. ಈ ನಿಟ್ಟಿನಲ್ಲಿ ಬಿಜೆಪಿ ಕಾರ್ಯಕರ್ತರು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು ಎಂದರು.

ಶಾಸಕ ಬೈರತಿ ಬಸವರಾಜ ಮಾತನಾಡಿ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎರಡು ಅವಧಿ ಪೂರೈಸಲಿದೆ. ರಾಜ್ಯ ಅಧ್ಯಕ್ಷರು ನಮಗೆ ರಾಜ್ಯ ಉಪಾಧ್ಯಕ್ಷ ಹುದ್ದೆ ಕೊಟ್ಟಿದ್ದಾರೆ. ಪ್ರಾಮಾಣಿಕವಾಗಿ ಪಕ್ಷ ಸಂಘಟನೆಗೆ ಒತ್ತು ನೀಡುತ್ತೇನೆ. ಮುಂದಿನ ದಿನಗಳಲ್ಲಿ ಜಿಲ್ಲಾ ಪ್ರವಾಸ ಕೈಗೊಳ್ಳಲಾಗುವುದು ಎಂದರು.

ಬಿಜೆಪಿ ಮುಖಂಡರಾದ ಸಚ್ಚಿದಾನಂದಮೂರ್ತಿ, ರಾಜ್ಯ ಮಾಜಿ ಮಹಿಳಾ ಅಧ್ಯಕ್ಷೆ ಗೀತಾ ವಿವೇಕಾನಂದ, ಪಿ.ಜೆ.ಅಂಥೋಣಿಸ್ವಾಮಿ, ಕಲ್ಕೆರೆ ಕೃಷ್ಣಮೂರ್ತಿ ಇದ್ದರು.

ಹೆಚ್ಚು ಕೆಲಸಕ್ಕೆ ಒತ್ತಡ: ಸಹೋದ್ಯೋಗಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೆಚ್ಚು ಕೆಲಸ ಮಾಡುವಂತೆ ಒತ್ತಡ ಹೇರುತ್ತಿದ್ದಾನೆ’ ಎಂಬ ಕಾರಣಕ್ಕೆ ಗುಲ್ಫಾಮ್ ಉರುಫ್ ಗುಲ್ಲು ಅವರನ್ನು ಕೊಲೆ ಮಾಡಿದ್ದ ಆರೋಪಿ ಮೊಹಮ್ಮದ್ ದಿಲ್ಖುಷ್‌ನನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಉತ್ತರ ಪ್ರದೇಶದ ಗುಲ್ಫಾಮ್ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ದೇವರ ಚಿಕ್ಕನಹಳ್ಳಿ ಮುಖ್ಯರಸ್ತೆಯಲ್ಲಿರುವ ಅಲಯನ್ಸ್ ಫ್ಯಾಬ್ರಿಕೇಷನ್ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಇದೇ ಮಳಿಗೆಯಲ್ಲಿ ಆರೋಪಿ ದಿಲ್ಖುಷ್ ಸಹ ಕೆಲಸಕ್ಕಿದ್ದ’ ಎಂದು ಪೊಲೀಸರು ಹೇಳಿದರು.

‘ಗುಲ್ಫಾಮ್ ಹಾಗೂ ದಿಲ್ಖುಷ್, ಒಂದೇ ರಾಜ್ಯದವರು. ಕೆಲಸದ ವಿಚಾರವಾಗಿ ಇಬ್ಬರೂ ಪರಸ್ಪರ ಜಗಳ ಮಾಡುತ್ತಿದ್ದರು. ‘ಕೆಲಸದಲ್ಲಿ ನಿನಗೆ ಅನುಭವ ಹೆಚ್ಚಿದೆ. ಹೀಗಾಗಿ, ನಿತ್ಯವೂ ನೀನು ಹೆಚ್ಚು ಕೆಲಸ ಮಾಡಬೇಕು’ ಎಂದು ದಿಲ್ಖುಷ್ ಮೇಲೆ ಗುಲ್ಫಾಮ್ ಒತ್ತಡ ಹೇರುತ್ತಿದ್ದರು. ‘ಹೆಚ್ಚು ಕೆಲಸ ಮಾಡುವುದಿಲ್ಲ’ ಎಂಬುದಾಗಿ ದಿಲ್ಖುಷ್ ಹೇಳುತ್ತಿದ್ದ’ ಎಂದು ತಿಳಿಸಿದರು.

‘ಕೆಲಸದ ವಿಚಾರವಾಗಿ ಇಬ್ಬರ ನಡುವೆ ವೈಮನಸ್ಸು ಮೂಡಿತ್ತು. ಡಿ.18ರಂದು ಮಲಗಿದ್ದ ಗುಲ್ಫಾಮ್ ತಲೆ ಮೇಲೆ ಆರೋಪಿ ಕಲ್ಲು ಎತ್ತಿ ಹಾಕಿದ್ದ. ತೀವ್ರ ಗಾಯಗೊಂಡು ಗುಲ್ಫಾಮ್ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದರು.

ಗೋಣಿಚೀಲದಲ್ಲಿ ಮೃತದೇಹ: ‘ಗೋಣಿ ಚೀಲದಲ್ಲಿ ಮೃತದೇಹ ಇರಿಸಿದ್ದ ಆರೋಪಿ, ಮಳಿಗೆ ಬಳಿಯೇ ಎಸೆದಿದ್ದ. ನಂತರ, ತನ್ನೂರಿಗೆ ಹೋಗಿದ್ದ. ಗುಲ್ಫಾಮ್ ನಾಪತ್ತೆಯಾಗಿದ್ದ ಬಗ್ಗೆ ಸಂಬಂಧಿಕರು ದೂರು ನೀಡಿದ್ದರು. ಡಿ. 21 ರಂದು ಚೀಲದಲ್ಲಿ ಮೃತದೇಹ ಪತ್ತೆ ಯಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಹೆಚ್ಚು ಕೆಲಸ ಮಾಡು ಎಂದಿದ್ದಕ್ಕೆ ಗುಲ್ಫಾಮ್‌ನನ್ನು ಕೊಂದಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದರು.

ಅಪರಾಧ ಸುದ್ದಿ

ಮನೆಗೆ ನುಗ್ಗಿ ಸುಲಿಗೆ: ಆರೋಪಿ ಸೆರೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಮನೆಯೊಂದಕ್ಕೆ ನುಗ್ಗಿ ಸುಲಿಗೆ ಮಾಡಿದ್ದ ಆರೋಪದಡಿ ಜಿ. ಗಣೇಶ್ ಅಲಿಯಾಸ್ ಗಣಿಯನ್ನು (34) ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ದಂಪತಿ ವಾಸವಿರುವ ಮನೆಗೆ ಡಿ. 17ರಂದು ರಾತ್ರಿ ಮನೆಗೆ ನುಗ್ಗಿದ್ದ ಆರೋಪಿ ಗಣಿ, ತಾನೊಬ್ಬ ಪೊಲೀಸ್ ಎಂದಿದ್ದ. ಡ್ರಗ್ಸ್ ಮಾರಾಟ ಪ್ರಕರಣ ದಾಖಲಿಸುವುದಾಗಿ ಬೆದರಿಸಿದ್ದ. ಎಟಿಎಂ ಕಾರ್ಡ್ ಮೂಲಕ ₹ 2.50 ಲಕ್ಷ ಸುಲಿಗೆ ಮಾಡಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

‘ಕೆಲ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ದಂಪತಿಗಳು ಹಾಗೂ ಯುವಕ–ಯುವತಿಯನ್ನು ಹಿಂಬಾಲಿಸುತ್ತಿದ್ದ ಆರೋಪಿ, ಅವರ ಮನೆಗೆ ನುಗ್ಗಿ ಕೃತ್ಯ ಎಸಗುತ್ತಿದ್ದನೆಂದು ಗೊತ್ತಾಗಿದೆ. ಕೆಲ ಬಾರಿ ಮಾರಕಾಸ್ತ್ರ ಸಮೇತ ಮನೆಗೆ ನುಗ್ಗುತ್ತಿದ್ದ. ಈತನ ಬಂಧನದಿಂದ ಹುಳಿಮಾವು, ಮಡಿವಾಳ, ಬೆಳ್ಳಂದೂರು ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಗಳು ಪತ್ತೆಯಾಗಿವೆ’ ಎಂದರು.

ಕಬ್ಬನ್ ಉದ್ಯಾನ ಅಥವಾ ಯಶವಂತಪುರದ ಬಳಿ ಸ್ಥಳ ನಿಗದಿ ಸಾಧ್ಯತೆ

ದೇಶದಲ್ಲೇ ಎತ್ತರದ ಗೋಪುರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾನೆತ್ತರದಲ್ಲಿ ನಿಂತು ಬೆಂಗಳೂರು ಸೌಂದರ್ಯ ಕಣ್ತುಂಬಿಕೊಳ್ಳಲು ಸಾಧ್ಯವಾಗುವಂತಹ ದೇಶದ ಅತೀ ಎತ್ತರದ ವೀಕ್ಷಣಾ ಗೋಪುರವನ್ನು ಕಬ್ಬನ್ ಉದ್ಯಾನ ಅಥವಾ ಯಶವಂತಪುರದ ಬಳಿ ನಿರ್ಮಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಬೆಂಗಳೂರಿನಲ್ಲಿ ಮಂಗಳವಾರ 'ಬಿಗ್ ಬ್ಯಾನ್ಯನ್ ಗ್ರೂಪ್' ವೀಕ್ಷಣಾ ಗೋಪುರ ನಿರ್ಮಾಣ ಕುರಿತು ಆಯೋಜಿಸಿದ್ದ ಪ್ರಾತ್ಯಕ್ಷಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವೀಕ್ಷಿಸಿದರು.

ಚೀನಾದ ಶಾಂಘೈನಲ್ಲಿನ 'ಶಾಂಘೈ ಟವರ್' ಯೋಜನೆಯನ್ನು ಪ್ರೇರಣೆಯಾಗಿಟ್ಟುಕೊಂಡು ಆಸ್ಟ್ರಿಯಾದ ಕೂಪ್ ಹಿಮ್ಮೆಲ್ಬ್ (ಎಲ್) ಎಯು ಸಂಸ್ಥೆಯು ವಿಶ್ವ ವಿನ್ಯಾಸ ಸಂಸ್ಥೆ ಸಹಯೋಗದಲ್ಲಿ ಸ್ಕೈಡೆಕ್ (ವೀಕ್ಷಣಾ ಗೋಪುರ) ನಿರ್ಮಿಸಲು ವಿನ್ಯಾಸ ಸಿದ್ಧಪಡಿಸಿದೆ. 10 ಎಕರೆ



ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅತಿ ಎತ್ತರದ ವೀಕ್ಷಣಾ ಗೋಪುರದ ಮಾದರಿ

ಜಾಗದಲ್ಲಿ 360 ಮೀಟರ್ ಎತ್ತರದ ವೀಕ್ಷಣಾ ಗೋಪುರ ನಿರ್ಮಿಸಲು ಸಿದ್ಧತೆ ನಡೆದಿವೆ. ಯೋಜನೆ ಕಾರ್ಯಗತವಾದರೆ ನಾಗರಿಕರು ಆಕಾಶದಿಂದ ಕಾಣುವ ಬೆಂಗಳೂರಿನ ಸೌಂದರ್ಯವನ್ನು ಸವಿಯಬಹುದು.

ಶಾಂಘೈ ಟವರ್ 600 ಮೀಟರ್ ಎತ್ತರದಲ್ಲಿದ್ದು, ಬೆಂಗಳೂರಿನ ಗೋಪುರ ಅಷ್ಟು ಎತ್ತರದಲ್ಲಿ ನಿರ್ಮಾಣವಾಗದಿದ್ದರೂ ದೇಶದ ಅತಿ ಎತ್ತರದ ವೀಕ್ಷಣಾ ಗೋಪುರವಾಗಲಿದೆ. ಗೋಪುರ ನಿರ್ಮಾಣಕ್ಕೆ ತಗಲುವ ವೆಚ್ಚ, ಅಗತ್ಯ ಸೌಲಭ್ಯಗಳ ನಿರ್ಮಾಣ ಕುರಿತು ಸರ್ಕಾರ ಕಾರ್ಯ ಯೋಜನೆ ರೂಪಿಸುತ್ತಿದೆ.

ತಮಿಳುನಾಡಿದ ರಾಮೇಶ್ವರದ ಗೋಪುರ 323 ಮೀಟರ್ ಎತ್ತರವಿದೆ. ಗುಜರಾತ್‌ನ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಏಕತಾ ಪ್ರತಿಮೆ ನಂತರ 182 ಮೀಟರ್ ಎತ್ತರವಿದೆ. ಈಗ ಮಾಡಿರುವ ನಿರ್ಧಾರದಂತೆ ಬೆಂಗಳೂರಿನಲ್ಲಿ 360 ಮೀಟರ್ ಗೋಪುರಕ್ಕೆ ಸರ್ಕಾರ ಸಮ್ಮತಿಸಿದರೆ ದೇಶದಲ್ಲೇ ಎತ್ತರದ ವಿಕ್ಷಣಾ ಗೋಪುರ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

ಗೋಪುರದ ತಳಭಾಗದಲ್ಲಿ ವಾಣಿಜ್ಯ ಮಳಿಗೆಗಳು, ಆಹಾರ, ಆಟ, ವಿಶ್ರಾಂತಿ ಕೊಠಡಿ, ಶೌಚಾಲಯಗಳು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.

ಸದ್ಯ ಜಗತ್ತಿನಲ್ಲಿ ದುಬೈನ ಬುರ್ಜ್ ಖಲೀಫಾ (828 ಮೀಟರ್), ಶಾಂಘೈನ ಶಾಂಘೈ ಟವರ್ (632 ಮೀಟರ್), ಚೀನಾದ ಶೆಂಜೆನ್‌ನ ಪಿಂಗ್ ಆನ್ ಫೈನಾನ್ಸ್ ಸೆಂಟರ್ (599 ಮೀಟರ್), ಚೀನಾದ ಗುಂವಾಂಗ್ಯುವಿನ ಕ್ಯಾಂಟನ್ ಟವರ್ (597 ಮೀಟರ್), ದಕ್ಷಿಣ ಕೊರಿಯಾದ ಲಾಟ್ಟೆ ವರ್ಲ್ಡ್ ಟವರ್ (555 ಮೀಟರ್) ವಿಶ್ವದ ಎತ್ತರದ ವೀಕ್ಷಣಾ ಗೋಪುರಗಳಾಗಿವೆ.

ಲತಾ ರಜನಿಕಾಂತ್ ಖುದ್ದು ಹಾಜರು

ನಕಲಿ ದಾಖಲೆ ಪ್ರಕರಣ: ನ್ಯಾಯಾಲಯದಿಂದ ಜಾಮೀನು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಚ್ಚಾಡಿಯನ್ ಚಲನಚಿತ್ರಕ್ಕೆ ಸಂಬಂಧಿಸಿದಂತೆ ಉಂಟಾದ ನಷ್ಟ ತುಂಬಿಕೊಟ್ಟಿಲ್ಲ' ಎಂಬ ಆರೋಪದ ಬಗ್ಗೆ ಮಾಧ್ಯಮಗಳು ಸುದ್ದಿ ಪ್ರಕಟಿಸದಂತೆ ನ್ಯಾಯಾಲಯದಿಂದ ನಿರ್ಬಂಧಕ ಆದೇಶ ಪಡೆಯಲು ನಕಲಿ ದಾಖಲೆ ಸಲ್ಲಿಸಿದ ಪ್ರಕರಣದಲ್ಲಿ ನಟ ರಜನಿಕಾಂತ್ ಪತ್ನಿ ಲತಾ ನಗರದ ಎಸಿಎಂಎಂ ನ್ಯಾಯಾಲಯಕ್ಕೆ ಮಂಗಳವಾರ ಖುದ್ದು ಹಾಜರಾಗಿ ಜಾಮೀನು ಪಡೆದುಕೊಂಡರು.

'ನಕಲು ಮಾಡಿದ ಆರೋಪದಡಿಯ ನನ್ನ ವಿರುದ್ಧದ ಆರೋಪಗಳನ್ನು ಕೈ ಬಿಡಬೇಕು' ಎಂದು ಕೋರಿ ಲತಾ ರಜನಿಕಾಂತ್ ನಗರದ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

'ಈ ಅರ್ಜಿ ಪುರಸ್ಕರಿಸಿದ ನ್ಯಾಯಾಧೀಶ ಆನಂದ ಕರಿಯಮ್ಮನವರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದರು. ₹1 ಲಕ್ಷದ ಮೊತ್ತಕ್ಕೆ ವೈಯಕ್ತಿಕ ಬಾಂಡ್ ಮತ್ತು ಇಬ್ಬರ ಭದ್ರತಾ ಖಾತರಿ ಒದಗಿಸಬೇಕು. ₹25 ಸಾವಿರ ನಗದು ಪಾವತಿಸಬೇಕು. ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು. ನ್ಯಾಯಾಲಯದ ವಿಚಾರಣೆಗೆ ತಪ್ಪದೇ ಹಾಜರಾಗಬೇಕು' ಎಂಬ ಷರತ್ತು ವಿಧಿಸಿ ವಿಚಾರಣೆಯನ್ನು 2024ರ ಜನವರಿ 6ಕ್ಕೆ ಮುಂದೂಡಿದರು.

'2024ರ ಜನವರಿ 6 ಅಥವಾ ಅದಕ್ಕೂ ಮೊದಲು ಲತಾ ರಜನಿಕಾಂತ್ ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕು' ಎಂದು ನ್ಯಾಯಾಲಯ ಇದೇ 2ರಂದು ಆದೇಶಿಸಿತ್ತು.

ಪೆರಿಯಾರ್ ವಿ.ವಿ ಕುಲಪತಿ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ಪೆರಿಯಾರ್ ವಿಶ್ವವಿದ್ಯಾಲಯದ ಕುಲಪತಿ ಆರ್. ಜಗನ್ನಾಥನ್ ಅವರನ್ನು ಹಣ ದುರುಪಯೋಗ ಆರೋಪದ ಪ್ರಕರಣದಲ್ಲಿ ತಮಿಳುನಾಡು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಪೆರಿಯಾರ್ ವಿಶ್ವವಿದ್ಯಾನಿಲಯ ನೌಕರರ ಸಂಘದ (ಪಿಯುಇಯು) ಕಾನೂನು ಸಲಹೆಗಾರ ಐ. ಇಳಂಗೋವನ್ ಅವರು ನೀಡಿದ ದೂರಿನ ಮೇರೆಗೆ ಜಗನ್ನಾಥನ್ ಅವರನ್ನು ಮಂಗಳವಾರ ಸಂಜೆ ವಿ.ವಿ ಆವರಣದಿಂದ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಗನ್ನಾಥನ್ ವಿರುದ್ಧ ಇನ್ನೂ ಕೆಲವು ದೂರುಗಳಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಲಪತಿ ಅವರು ರಿಜಿಸ್ಟ್ರಾರ್ ಜೊತೆಗೂಡಿ ವಿ.ವಿ ಅನುದಾನವನ್ನು ದುರುಪಯೋಗಪಡಿಸಿಕೊಂಡು, ತಮ್ಮ ಹೆಸರಿನಲ್ಲಿ ಪೆರಿಯಾರ್ ವಿಶ್ವವಿದ್ಯಾಲಯದ ತಂತ್ರಜ್ಞಾನ ಉದ್ಯಮಶೀಲತೆ ಮತ್ತು ಸಂಶೋಧನಾ ಪ್ರತಿಷ್ಠಾನ ಸ್ಥಾಪಿಸಿದ್ದಾರೆ ಎಂದು ಇಳಂಗೋವನ್ ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ.

2021ರ ಜೂನ್‌ನಲ್ಲಿ ಸೇಲಂನ ಪೆರಿಯಾರ್ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಜಗನ್ನಾಥನ್ ಅವರನ್ನು ಅಂದಿನ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ನೇಮಕ ಮಾಡಿದ್ದರು. ಕೃಷಿ ತಜ್ಞರಾದ ಜಗನ್ನಾಥನ್ ಅವರು ಕೊಯಮತ್ತೂರಿನ ತಮಿಳುನಾಡು ಕೃಷಿ ವಿಶ್ವವಿದ್ಯಾಲಯದ (ಟಿಎನ್‌ಎಯು) ಡೀನ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ.

'ನಂದಿ'ಗೆ ನಿರ್ಬಂಧ

ಚಿಕ್ಕಬಳ್ಳಾಪುರ: ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ನಂದಿಗಿರಿಧಾಮಕ್ಕೆ ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಪ್ರವಾಸಿಗರು, ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಡಿ.31ರ ಸಂಜೆ 6ರಿಂದ 2024ರ ಜ.1ರ ಬೆಳಿಗ್ಗೆ 6ರವರೆಗೆ ಪ್ರವೇಶ ನಿಷೇಧಿಸಲಾಗಿದೆ. ಗಿರಿಧಾಮದಲ್ಲಿನ ಅತಿಥಿಗೃಹಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸುವುದನ್ನು ರದ್ದುಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಆದೇಶದಲ್ಲಿ ತಿಳಿಸಿದ್ದಾರೆ.

ಚಿಕ್ಕಬಳ್ಳಾಪುರ: ಮೈಮೇಲೆ ಸಗಣಿ ನೀರು ಸುರಿದುಕೊಂಡು 'ಅತಿಥಿ'ಗಳ ಪ್ರತಿಭಟನೆ

ಚಿಕ್ಕಬಳ್ಳಾಪುರ: ಪಂಜಿನ ಮೆರವಣಿಗೆ, ಅನ್ನದಾನ, ಕರವಸ್ತ್ರ ಮಾರಾಟ, ಮಾಸ್ಕ್ ವಿತರಿಸುವ ಮೂಲಕ ಹೋರಾಟ ನಡೆಸುತ್ತಿರುವ ಅತಿಥಿ ಉಪನ್ಯಾಸಕರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಸಗಣಿ ನೀರು ಮೈಮೇಲೆ ಸುರಿದುಕೊಂಡು ಪ್ರತಿಭಟಿಸಿದರು.

ಮೊದಲಿಗೆ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಮುನಿರಾಜು ಅವರು ಮೈಮೇಲೆ ಸಗಣಿ ನೀರು ಸುರಿದುಕೊಂಡರು. ನಂತರ ಉಳಿದವರು ಅವರನ್ನು ಅನುಸರಿಸಿದರು.

'ನಮ್ಮದು 2 ದಶಕದ ಹೋರಾಟ. ಉನ್ನತ ಶಿಕ್ಷಣ ಸಚಿವರು ಜಿಲ್ಲೆಯವರೇ ಆದರೂ ಸಮಸ್ಯೆಗೆ ಪರಿಹಾರ ದೊರೆಯುತ್ತಿಲ್ಲ. ಇನ್ನಾದರೂ ಮುಖ್ಯಮಂತ್ರಿ ಮತ್ತು ಸಚಿವರು ನಮ್ಮ ಬೇಡಿಕೆ ಈಡೇರಿಕೆಯತ್ತ ಗಮನಹರಿಸಬೇಕು. ಕಾಯಂ ಸಾಧ್ಯವಿಲ್ಲದಿದ್ದರೆ ದಯಾಮರಣ ಭಿಕ್ಷೆ ನೀಡಲಿ' ಎಂದು ಮುನಿರಾಜು ಹೇಳಿದರು.

ಪ್ರತಾಪಸಿಂಹ ವಿರುದ್ಧ ಎಫ್‌ಐಆರ್

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇರೆಗೆ ಸಂಸದ ಪ್ರತಾಪಸಿಂಹ ವಿರುದ್ಧ ನಗರದ ದೇವರಾಜ ಪೊಲೀಸ್ ಠಾಣೆಯಲ್ಲಿ ಮಂಗಳವಾರ ರಾತ್ರಿ ಎಫ್‌ಐಆರ್ ದಾಖಲಾಗಿದೆ.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ. ವಿಜಯಕುಮಾರ್ ನೀಡಿದ ದೂರು ಆಧರಿಸಿ ಭಾರತೀಯ ದಂಡ ಸಂಹಿತೆ 504 (ಉದ್ದೇಶಪೂರ್ವಕವಾಗಿ ನಿಂದಿಸಿ ಶಾಂತಿಭಂಗ ಉಂಟುಮಾಡುವುದು), 153 (ಕೋಮುಗಳ ನಡುವೆ ದ್ವೇಷ ಹುಟ್ಟಿಸುವುದು) ಅಡಿ ಸಂಸದರ ವಿರುದ್ಧ ಪ್ರಕರಣವನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

'ಹುಣಸೂರಿನಲ್ಲಿ ನಡೆದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಮಾಧ್ಯಮಗಳ ಎದುರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 'ಸೋಮಾರಿ ಸಿದ್ಧ' ಎಂದು ಏಕವಚನದಲ್ಲಿ ಮಾತನಾಡಿ, ಜಾತಿ ಜಾತಿಗಳ ನಡುವೆ ದ್ವೇಷ ಹರಡಿಸುವ ಕೆಲಸ ಮಾಡಿದ್ದಾರೆಂದು ಸುಳ್ಳು ಆರೋಪ ಮಾಡಿದ್ದಾರೆ. ಅವರ ವಿರುದ್ಧ ಕ್ರಮವಹಿಸಬೇಕು' ಎಂದು ವಿಜಯಕುಮಾರ್ ದೂರಿನಲ್ಲಿ ಹೇಳಿದ್ದಾರೆ.

5,500 ದೈಹಿಕ ಶಿಕ್ಷಣ ಶಿಕ್ಷಕರ ನೇಮಕಕ್ಕೆ ಸಿದ್ಧತೆ: ಸಚಿವ

ಪ್ರಜಾವಾಣಿ ವಾರ್ತೆ

ಸೊರಬ (ಶಿವಮೊಗ್ಗ): 'ರಾಜ್ಯದಲ್ಲಿನ ಪ್ರಾಥಮಿಕ ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ತಲಾ 2,000 ಮತ್ತು ಪ್ರೌಢಶಾಲೆಗಳಿಗೆ 1,500 ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಲು ಸಿದ್ಧತೆ ನಡೆದಿದೆ. ಈ ಸಂಬಂಧ ಹಣಕಾಸು ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.



ಮಧು ಬಂಗಾರಪ್ಪ

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯಿಂದ ಸೊರಬದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ಥ್ರೋಬಾಲ್ ಟೂರ್ನಿಗೆ ಮಂಗಳವಾರ ಚಾಲನೆ ನೀಡಿ ಮಾತನಾಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹಣಕಾಸು ಇಲಾಖೆಯ ಜವಾಬ್ದಾರಿ ಹೊಂದಿರುವುದರಿಂದ ನಾವು ಸಲ್ಲಿಸಿರುವ ಪ್ರಸ್ತಾವಕ್ಕೆ ಶೀಘ್ರವೇ ಒಪ್ಪಿಗೆ ದೊರೆಯುವ ವಿಶ್ವಾಸವಿದೆ. ನಂತರ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು' ಎಂದರು.

'ಚಿತ್ರಕಲಾ ಶಿಕ್ಷಕರ ನೇಮಕಾತಿಗೂ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯಲ್ಲಿ 40 ಸಾವಿರ ಶಿಕ್ಷಕರ ಹುದ್ದೆ ಖಾಲಿ ಇದ್ದು, ಅವುಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು' ಎಂದು ತಿಳಿಸಿದರು.

ರಾಗಿ ಮಾಲ್ಟ್ ವಿತರಣೆ: 'ಶಾಲಾ ವಿದ್ಯಾರ್ಥಿಗಳಿಗೆ ವಾರದಲ್ಲಿ ಮೂರು ದಿನ ಹಾಲಿನ ಜೊತೆಗೆ ರಾಗಿ ಮಾಲ್ಟ್ ಬೆರೆಸಿ ವಿತರಿಸಲು ನಿರ್ಧರಿಸಲಾಗಿದೆ. ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಹಾಗೂ ಸಂಶೋಧನಾ ಸಂಸ್ಥೆಯಿಂದ (ಸಿಎಫ್‌ಟಿಆರ್‌ಐ) ರಾಗಿ ಮಾಲ್ಟ್ ಗುಣಮಟ್ಟದ ಬಗ್ಗೆ ವರದಿ ಪಡೆದ ನಂತರ ಯೋಜನೆ ಜಾರಿಗೊಳ್ಳಲಿದೆ. 1.80 ಕೋಟಿ ವಿದ್ಯಾರ್ಥಿಗಳು ಇದರ ಲಾಭ ಪಡೆಯಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4 ರಿಂದ 6ರಂತೆ ರಾಜ್ಯದಲ್ಲಿ ಒಟ್ಟು 3,000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಆರಂಭಿಸಲು ತೀರ್ಮಾನಿಸಲಾಗಿದೆ' ಎಂದರು.

ವಿಜಯಪುರ: ಹೆಚ್ಚು ಚಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಚಳಿ ಪ್ರಭಾವ ತೀವ್ರಗೊಂಡಿದ್ದು ವಿಜಯಪುರ ಜಿಲ್ಲೆಯಲ್ಲಿ ಮಂಗಳವಾರ ಅತ್ಯಂತ ಕನಿಷ್ಠ ಉಷ್ಣಾಂಶ 10.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ತಣ್ಣನೆ ವಾತಾವರಣ ಹಗಲು ವೇಳೆಯಲ್ಲೂ ಜನರ ಮೈನಡುಗಿಸುತ್ತಿದೆ.

ಕರಾವಳಿ, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡು ಭಾಗದ ಜಿಲ್ಲೆಗಳಲ್ಲಿ ಸಾಮಾನ್ಯಕಿಂತಲೂ ಉಷ್ಣಾಂಶ ಕುಸಿದಿದ್ದು, ಇದರಿಂದ ಚಳಿ ಪ್ರಭಾವ ಹೆಚ್ಚಿದೆ. ಹಾಸನ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ತಾಪಮಾನ ಕುಸಿದು ಮೈಕೊರೆಯುವ ಚಳಿ ವಾತಾವರಣ ಕಂಡುಬರುತ್ತಿದೆ.

ಮುಂದಿನ 48 ಗಂಟೆಗಳಲ್ಲಿ ಉತ್ತರ ಒಳನಾಡಿನ ಕೆಲವು ಭಾಗದಲ್ಲಿ ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಕೆಲವು ಭಾಗದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ ಕಂಡುಬರಲಿದ್ದು, ಗರಿಷ್ಠ ಉಷ್ಣಾಂಶ 29 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 16 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಮೈಸೂರು ರೇಸ್

ಮಿಸ್ಟಿಕ್ ಬಾಂಡ್ ಗೆಲ್ಲುವ ನಿರೀಕ್ಷೆ

ಮಿದಾತ್ರಿ ಮೋಟರ್ಸ್ ಕಪ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ಟಿಕ್ ಬಾಂಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಇಂತಿವೆ:

1ನೇ ರೇಸ್: ಶೀಈಸ್ ಅನ್‌ಸ್ಟಾಪಬಲ್ 6, ಆಬುಶನ್ 1, ಫೈರ್‌ಬೋಲ್ಟ್ 3
2ನೇ ರೇಸ್: ಪರ್ಫೆಕ್ಟ್ ಎಂಪ್ರೆಸ್ 4, ಗ್ರೇಟ್ ಹೋಪ್ 3, ಕೊಯೊಟೆ ಗರ್ಲ್ 5
3ನೇ ರೇಸ್: ನ್ಯಾಚುರಲ್ ಪ್ಲೈ 5, ಡಿ ಅಡ್ಮಿರಲ್ 6, ಬಾಕಸ್ 8
4ನೇ ರೇಸ್: ಡಿ ಥರ್ಟೀನ್ ಟ್ವೆಲ್ವ್ 8, ವಿಂಡ್ ಪವರ್ 3, ಸ್ಟಾರ್ ಸ್ಪೇಕ್ 4
5ನೇ ರೇಸ್: ಮಿಸ್ಟಿಕ್ ಬಾಂಡ್ 3, ಟಾಮ್ ಕ್ರೂಸರ್ 2, ಟಾರೆಕ್ 1
6ನೇ ರೇಸ್: ಗ್ಯಾಮಾ 8, ಸೆಗೆರಾ 1, ಐರನ್ ಕ್ಲಾಡ್ 3
7ನೇ ರೇಸ್: ಸ್ಪಿರಿಚ್ಯುಯಲ್ ಫೋರ್ಸ್ 1, ಮಾರ್ಚ್ ಟು ವಿಕ್ಟರಿ 5, ನ್ಯಾಚುರಲ್ ಒನ್ 3


ಉತ್ತಮ ಬೆಟ್: ಶೀಈಸ್ ಅನ್‌ಸ್ಟಾಪಬಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಪ್ರಧಾನಿ ನರೇಂದ್ರ ಮೋದಿ ಯೂಟ್ಯೂಬ್ ಚಾನೆಲ್

2 ಕೋಟಿ ದಾಟಿದ ಚಂದಾದಾರರ ಸಂಖ್ಯೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವೈಯಕ್ತಿಕ ಯೂಟ್ಯೂಬ್ ಚಾನೆಲ್‌ನ ಚಂದಾದಾರರ ಸಂಖ್ಯೆ ಮಂಗಳವಾರ ಎರಡು ಕೋಟಿ ದಾಟಿದೆ.



ನರೇಂದ್ರ ಮೋದಿ

ಮೋದಿ ಅವರ ಚಾನೆಲ್‌ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊಗಳು 450 ಕೋಟಿಗೂ ಹೆಚ್ಚು ವೀಕ್ಷಣೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

64 ಲಕ್ಷ ಚಂದಾದಾರರನ್ನು ಹೊಂದಿರುವ ಬ್ರೆಜಿಲ್‌ನ ಮಾಜಿ ಅಧ್ಯಕ್ಷ ಜೈರ್ ಬೋಲ್ಸನಾರೊ ಎರಡನೇ ಸ್ಥಾನದಲ್ಲಿದ್ದಾರೆ.

ವಿಡಿಯೊಗಳ ವೀಕ್ಷಣೆಯ ವಿಚಾರದಲ್ಲಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಚಾನೆಲ್ ಎರಡನೇ ಸ್ಥಾನದಲ್ಲಿದೆ. ಅವರ ಚಾನೆಲ್‌ನ ವಿಡಿಯೊಗಳು 22.4 ಕೋಟಿ ವೀಕ್ಷಣೆಗಳನ್ನು ಪಡೆದಿವೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು 7.89 ಲಕ್ಷ ಚಂದಾದಾರರನ್ನು ಹಾಗೂ ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗಾನ್ 3.16 ಲಕ್ಷ ಚಂದಾದಾರರನ್ನು ಹೊಂದಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಚಾನೆಲ್ 35 ಲಕ್ಷಕ್ಕೂ ಅಧಿಕ ಚಂದಾದಾರರನ್ನು ಹೊಂದಿದೆ.

2007ರಲ್ಲಿ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಯೂಟ್ಯೂಬ್ ಚಾನೆಲ್ ಆರಂಭಿಸಿದ್ದರು ಎಂದು ಮೂಲಗಳು ಹೇಳಿವೆ.

'ಯೋಗ ವಿಥ್ ಮೋದಿ' ಎಂಬ ಯೂಟ್ಯೂಬ್ ಚಾನೆಲ್ ಕೂಡ 73 ಸಾವಿರಕ್ಕಿಂತಲೂ ಹೆಚ್ಚು ಚಂದಾದಾರರನ್ನು ಹೊಂದಿದೆ.

ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಕೋವಿಡ್ ವಾರ್ಡ್: ಸಂಪುಟ ಉಪ ಸಮಿತಿ ಸಭೆಯಲ್ಲಿ ನಿರ್ಧಾರ

ಕೋವಿಡ್: ಏಳು ದಿನ ಪ್ರತ್ಯೇಕವಾಸ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ದೃಢಪಟ್ಟವರಿಗೆ ಏಳು ದಿನಗಳ ಪ್ರತ್ಯೇಕವಾಸವನ್ನು ಕಡ್ಡಾಯಗೊಳಿಸಲು ಮಂಗಳವಾರ ನಡೆದ ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಸಂಪುಟ ಉಪ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ.

'ಜೆಎನ್.1 ಉಪ ತಳಿಯ ಕೊರೊನಾ ವೈರಾಣು ಸೋಂಕಿನ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿರುವುದರಿಂದ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಲು ಸಂಪುಟ ಉಪ ಸಮಿತಿ ಸಭೆ ನಡೆಸಿದ್ದು, ಕಡ್ಡಾಯ ಪ್ರತ್ಯೇಕ ವಾಸ ಸೇರಿದಂತೆ ಹಲವು ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಸಂಪುಟ ಉಪ ಸಮಿತಿ ಅಧ್ಯಕ್ಷರೂ ಆಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸುದ್ದಿಗಾರರಿಗೆ ತಿಳಿಸಿದರು.

ಕಡ್ಡಾಯ ಪ್ರತ್ಯೇಕವಾಸದಲ್ಲಿರುವ ಸರ್ಕಾರಿ ಅಥವಾ ಖಾಸಗಿ ಕಂಪನಿಗಳ ನೌಕರರಿಗೆ ಏಳು ದಿನಗಳ ರಜೆ ನೀಡಬೇಕು. ತೀವ್ರ ನಿಗಾ ಘಟಕ (ಐಸಿಯು) ಅಥವಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಕೋವಿಡ್ ಬಾಧಿತರಿಗೆ ಸಂಪೂರ್ಣ ಗುಣಮುಖರಾಗುವವರೆಗೂ ರಜೆ ನೀಡಬೇಕು. ಈ ಸಂಬಂಧ ಶೀಘ್ರದಲ್ಲಿ ಮಾರ್ಗಸೂಚಿ ಹೊರಡಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ಮಕ್ಕಳಲ್ಲಿ ಈ ಸೋಂಕು ವೇಗವಾಗಿ ಹರಡುವ ಸಾಧ್ಯತೆ ಇದೆ ಎಂಬ ವರದಿಗಳಿವೆ. ಈ ಕಾರಣದಿಂದ ಜ್ವರ, ನೆಗಡಿ ಸೇರಿದಂತೆ ಆರೋಗ್ಯದ ಸಮಸ್ಯೆ ಇರುವ ಮಕ್ಕಳ ನ್ನು ಶಾಲೆಗೆ ಕಳುಹಿಸದಂತೆ ಪೋಷಕರಿಗೆ ಸೂಚನೆ ನೀಡಲಾಗುವುದು. ಮಕ್ಕಳಿಗೆ ಮನೆಯಲ್ಲೇ ಆರೈಕೆ ನೀಡುವ ಕುರಿತು ಮಾರ್ಗಸೂಚಿಯಲ್ಲಿ ಸ್ಪಷ್ಟಪಡಿಸಲಾಗುವುದು ಎಂದು ತಿಳಿಸಿದರು.



ದಿನೇಶ್ ಗುಂಡೂರಾವ್

ಕೋವಿಡ್ ವಾರ್ಡ್: ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಪ್ರತ್ಯೇಕ ವಾರ್ಡ್‌ಗಳನ್ನು ಮೀಸಲಿಡಲಾಗುವುದು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಮತ್ತು ರಾಜೀವ್ ಗಾಂಧಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಕೋವಿಡ್ ವಾರ್ಡ್‌ಗಳೊಂದಿಗೆ ಐಸಿಯು ಹಾಸಿಗೆ ಹಾಗೂ ಪ್ರತ್ಯೇಕವಾಸದ ಹಾಸಿಗೆಗಳನ್ನು ಮೀಸಲಿಡಲಾಗುವುದು ಎಂದು ತಿಳಿಸಿದರು.

ಕೋವಿಡ್ ಶಂಕೆಯ ಮೇಲೆ ಆಸ್ಪತ್ರೆಗೆ ಬರುವ ಎಲ್ಲರನ್ನೂ ಸಿ.ಟಿ ಸ್ಕ್ಯಾನಿಂಗ್‌ಗೆ ಒಳಪಡಿಸುವಂತಿಲ್ಲ. ಕೋವಿಡ್ ದೃಢಪಟ್ಟವರಿಗೆ ಮಾತ್ರ ಪರೀಕ್ಷೆ ನಡೆಸುವಂತೆ ಸೂಚಿಸಲಾಗಿದೆ. ಸೋಂಕಿತರ ಸಂಪರ್ಕದಲ್ಲಿದ್ದವರು, ಪ್ರತ್ಯೇಕ ವಾಸದಲ್ಲಿರುವವರ ಮೇಲೂ ನಿಗಾ ಇರಿಸಲಾಗುವುದು ಎಂದು ಹೇಳಿದರು.

ಸಂಪುಟ ಉಪ ಸಮಿತಿ ಸದಸ್ಯರಾದ ಡಾ.ಎಚ್.ಸಿ. ಮಹದೇವಪ್ಪ, ಡಾ.ಶರಣ ಪ್ರಕಾಶ ಪಾಟೀಲ, ಡಾ.ಎಂ.ಸಿ. ಸುಧಾಕರ್, ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ರವಿ ಸಭೆಯಲ್ಲಿದ್ದರು.

'ಏಳು ಸಾವು'

'ರಾಜ್ಯದಲ್ಲಿ ಇತ್ತೀಚಿನ ಕೆಲವು ದಿನಗಳಲ್ಲಿ ಕೋವಿಡ್‌ನಿಂದ ಏಳು ಮಂದಿ ಮೃತಪಟ್ಟಿದ್ದಾರೆ. ಅವರಲ್ಲಿ ನಾಲ್ವರು ಕೋವಿಡ್ ಲಸಿಕೆ ಪಡೆದಿರಲಿಲ್ಲ. ಮೃತಪಟ್ಟ ಮೂವರಲ್ಲಿ ಜೆಎನ್.1 ಉಪ ತಳಿಯ ವೈರಾಣು ಪತ್ತೆಯಾಗಿದೆ' ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಜೆಎನ್.1 ಉಪ ತಳಿಯ ವೈರಾಣುವಿನ ಸೋಂಕಿನ ಬಗ್ಗೆ ಆತಂಕಪಡುವ ಅಗತ್ಯವಿಲ್ಲ. ಹೊಸ ವರ್ಷಾಚರಣೆ ಸೇರಿದಂತೆ ಯಾವುದೇ ಸಭೆ, ಸಮಾರಂಭಗಳಿಗೆ ನಿರ್ಬಂಧ ಹೇರುವುದಿಲ್ಲ ಎಂದರು.

30 ಸಾವಿರ ಡೋಸ್‌ಗೆ ಮನವಿ

ಆರೋಗ್ಯ ಇಲಾಖೆಯ ಸಿಬ್ಬಂದಿ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಫ್ಲೂ ಲಸಿಕೆ ನೀಡಲು ನಿರ್ಧರಿಸಲಾಗಿದೆ ಎಂದು ಸಚಿವ ದಿನೇಶ್ ಹೇಳಿದರು. ಇನ್ನೊಂದು ಡೋಸ್ ಕೋವಿಡ್ ಲಸಿಕೆ ಪಡೆಯಲು ಅವಕಾಶ ಕಲ್ಪಿಸುವ ಸಲುವಾಗಿ 30,000 ಡೋಸ್ ಕೋವಿಡ್ ಲಸಿಕೆ ಪೂರೈಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು ಎಂದರು.

ಕೋವಿಡ್: 6 ಸಾವಿರ ದಾಟಿದ ಪರೀಕ್ಷೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 6,403 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ 74 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಂಕಿತರಲ್ಲಿ ಇಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

ಸೋಂಕು ದೃಢ ಪ್ರಮಾಣ ಶೇ 1.15ರಷ್ಟು ವರದಿಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 464ಕ್ಕೆ ಏರಿಕೆಯಾಗದೆ. ಸೋಂಕಿತರಲ್ಲಿ 423 ಮಂದಿ ಮನೆ ಆರೈಕೆಗೆ ಒಳಗಾದರೆ, 41 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 25 ಮಂದಿಗೆ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸೋಂಕಿತರಲ್ಲಿ 44 ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಪರೀಕ್ಷೆಗಳ ಸಂಖ್ಯೆ 2 ಸಾವಿರದ ಗಡಿ (2,104) ದಾಟಿದೆ. ಹೊಸದಾಗಿ 57 ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 376ಕ್ಕೆ ಏರಿಕೆಯಾಗಿದೆ. ಮೈಸೂರು (32) ಹೊರತುಪಡಿಸಿ ಉಳಿದೆಡೆ ಸಕ್ರಿಯ ಪ್ರಕರಣಗಳು ಒಂದಂಕಿಯಲ್ಲಿವೆ.

ಮರಣ ಪ್ರಕರಣಗಳಲ್ಲಿ ಇಬ್ಬರೂ 51 ವರ್ಷದವರಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ ದೃಢಪಟ್ಟ ಮರಣ ಪ್ರಕರಣದಲ್ಲಿ ತೀವ್ರ ಉಸಿರಾಟದ ಸಮಸ್ಯೆ ಕಾರಣ ವ್ಯಕ್ತಿ ಡಿ.22ರಂದು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ, ಡಿ.23ರಂದು ಮೃತಪಟ್ಟಿದ್ದಾರೆ. ಅವರು ಹೃದಯ, ಶ್ವಾಸಕೋಶ ಸಂಬಂಧಿ ಸಮಸ್ಯೆಯನ್ನೂ ಎದುರಿಸುತ್ತಿದ್ದರು.

ಮೈಸೂರಿನಲ್ಲಿ ದೃಢಪಟ್ಟ ಮರಣ ಕೋವಿಡ್ ಪ್ರಕರಣದಲ್ಲಿ ವ್ಯಕ್ತಿ ಡಿ.20ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿ, ಡಿ.25ರಂದು ಮೃತಪಟ್ಟಿದ್ದಾರೆ. ಉಸಿರಾಟದ ಸಮಸ್ಯೆ ಜತೆಗೆ ಅಧಿಕ ರಕ್ತದೊತ್ತಡದಂತಹ ಸಮಸ್ಯೆಯನ್ನು ಹೊಂದಿದ್ದರು.

ದೇಶದಲ್ಲಿ ಹೊಸದಾಗಿ 412 ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಮಂಗಳವಾರ 412 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 4,170ಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದರೊಂದಿಗೆ ದೇಶದಲ್ಲಿ ಪತ್ತೆಯಾದ ಒಟ್ಟು ಪ್ರಕರಣಗಳ ಸಂಖ್ಯೆ 4.50 ಕೋಟಿಯಾಗಿದ್ದು, 4.44 ಕೋಟಿ ಜನರು ಚೇತರಿಸಿಕೊಂಡಿದ್ದಾರೆ. ಚೇತರಿಕೆ ಪ್ರಮಾಣ ಶೇ 98.81ರಷ್ಟಿದೆ. ಒಟ್ಟು 5,33,337 ಮಂದಿ ಸಾಂಕ್ರಾಮಿಕದಿಂದ ಮೃತಪಟ್ಟಿದ್ದಾರೆ ಎಂದು ತಿಳಿಸಿದೆ.

ಈವರೆಗೆ ದೇಶದಾದ್ಯಂತ 220.76 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ.

ಜೆಎನ್.1 ಸೋಂಕಿತರ ಸಂಖ್ಯೆ 69ಕ್ಕೆ ಏರಿಕೆ: ಮತ್ತೆ ಆರು ಜನರಲ್ಲಿ ಕೊರೊನಾ ವೈರಾಣುವಿನ ಹೊಸ ಉಪ ತಳಿ ಜೆಎನ್.1 ಸೋಂಕು ಕಾಣಿಸಿಕೊಂಡಿದೆ. ಇದರೊಂದಿಗೆ ಜೆಎನ್.1 ಸೋಂಕಿತರ ಸಂಖ್ಯೆ 69ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಂಕಿತರ ಪೈಕಿ ಬಹುತೇಕರು ಮನೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಏರಿಕೆಯಾಗಿಲ್ಲ ಎಂದಿದ್ದಾರೆ.

'ಸೋಂಕು ಅಪಾಯಕಾರಿಯಾಗಿ ಉಲ್ಬಣಗೊಳ್ಳದಿದ್ದರೂ ರಾಜ್ಯಗಳು ಪರೀಕ್ಷೆ ಹೆಚ್ಚಿಸಿ ಕಣ್ಗಾವಲು ವ್ಯವಸ್ಥೆಯನ್ನು ಚುರುಕುಗೊಳಿಸಬೇಕಾದ ಅಗತ್ಯವಿದೆ' ಎಂದು ನೀತಿ ಆಯೋಗದ ಸದಸ್ಯ ಡಾ.ವಿ.ಕೆ.ಪಾಲ್ ಹೇಳಿದ್ದಾರೆ.

ಕಪ್ಪು ಶಿಲೀಂಧ್ರ: ಭರವಸೆ ಮೂಡಿಸಿದ 3ಡಿ ಇಂಪ್ಲಾಂಟ್

ಪ್ರಜಾವಾಣಿ ವಾರ್ತೆ ಪಿಟಿಐ


ಚೆನ್ನೈ: ಬ್ಲಾಕ್ ಫಂಗಸ್‌ನಿಂದ (ಕಪ್ಪು ಶಿಲೀಂಧ್ರ) ಬಳಲುತ್ತಿರುವವರಿಗೆ ಲೋಹದ 'ತ್ರಿಡಿ' ಮುದ್ರಿತ ಇಂಪ್ಲಾಂಟ್ ಅನ್ನು ಭಾರತೀಯ ತಂತ್ರಜ್ಞಾನ ಸಂಸ್ಥೆ-ಮದ್ರಾಸ್ (ಐಐಟಿ-ಎಂ) ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

ಕೋವಿಡ್-19 ಸಾಂಕ್ರಾಮಿಕ ನಂತರ ಬ್ಲಾಕ್ ಫಂಗಸ್‌ನಿಂದ ಬಳಲುತ್ತಿರುವವರ ಸಂಖ್ಯೆ ಏರಿಕೆಯಾಗಿದೆ. ಈ ಇಂಪ್ಲಾಂಟ್‌ಗಳನ್ನು ಕೈಗೆಟುಕುವ ದರದಲ್ಲಿ ಲಭಿಸುವಂತೆ ಅಭಿವೃದ್ಧಿಪಡಿಸಲಾಗಿದೆ. ಈ ಹೊಸ ತಂತ್ರಜ್ಞಾನ, ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ರೋಗಿಗಳಿಗೆ ನೆರವಾಗಲಿದೆ ಎನ್ನುವ ನಿರೀಕ್ಷೆ ಮೂಡಿದೆ.

'ಮ್ಯೂಕೋರ್ಮಿ ಕೋಸಿಸ್' ಎಂದೂ ಕರೆಯಲ್ಪಡುವ ಶಿಲೀಂಧ್ರವು ಸಾಮಾನ್ಯವಾಗಿ ಮುಖದ ಅಂಗಾಂಶಗಳನ್ನು ಆಕ್ರಮಿಸಿಕೊಂಡು, ವಿರೂಪಗೊಳಿಸುತ್ತದೆ. ತೀವ್ರ ಸ್ವರೂಪದ ಪ್ರಕರಣಗಳಲ್ಲಿ ರೋಗಿಗಳ ಮೂಗು, ಕಣ್ಣು ಅಥವಾ ಸಂಪೂರ್ಣ ಮುಖಕ್ಕೆ ಹಾನಿಯಾದ ನಿದರ್ಶನಗಳಿವೆ. ಕೋವಿಡ್-19 ಸಾಂಕ್ರಾಮಿಕದ ನಂತರ ಸುಮಾರು 60 ಸಾವಿರ ಭಾರತೀಯರು ಕಪ್ಪು ಶಿಲೀಂಧ್ರ ಸಮಸ್ಯೆ ಎದುರಿಸುತ್ತಿರುವ ವರದಿ ಇದೆ. ಇಂತಹ ಸನ್ನಿವೇಶದಲ್ಲಿ ಈ ಹೊಸ ತಂತ್ರಜ್ಞಾನವು ಅಂತಹವರ ಪಾಲಿಗೆ ಒಂದಿಷ್ಟು ಭರವಸೆಯ ಬೆಳಕನ್ನೂ ಮೂಡಿಸಿದೆ.

ಚೆನ್ನೈನ ದಂತ ಶಸ್ತ್ರಚಿಕಿತ್ಸಕರೊಬ್ಬರ ನವೋದ್ಯಮ 'ಥ್ಲೋರಿಯೊಎಕ್ಸ್ ಇನ್ನೋವೇಶನ್ ಲ್ಯಾಬ್ಸ್' ಸಹಭಾಗಿತ್ವದಲ್ಲಿ ಐಐಟಿಎಂ ಸಂಶೋಧಕರು ಲೋಹ ತ್ರಿಡಿ ಮುದ್ರಿತ ಇಂಪ್ಲಾಂಟ್ ಅನ್ನು ರೋಗಿಗಳಿಗೆ ಅಳವಡಿಸುವ ಕಾರ್ಯವನ್ನು ಕೈಗೊಳ್ಳುವ ಯೋಜನೆ ರೂಪಿಸಿದ್ದಾರೆ. ಈ ನವೋದ್ಯಮ ಸಂಸ್ಥೆಯು ಶಸ್ತ್ರಚಿಕಿತ್ಸೆ ನಿಭಾಯಿಸಿದರೆ, ಐಐಟಿಎಂ 3ಡಿ ವಿನ್ಯಾಸ ಮತ್ತು ಮುದ್ರಣವನ್ನು ನಿರ್ವಹಿಸಲಿದೆ.

ಆರ್ಥಿಕವಾಗಿ ದುರ್ಬಲ ವರ್ಗದ ರೋಗಿಗಳಿಗೆ ಲೋಹದ 3ಡಿ ಮುದ್ರಿತ ಸುಮಾರು 50 ಇಂಪ್ಲಾಂಟ್‌ಗಳನ್ನು ಈಗಾಗಲೇ ಅಳವಡಿಸಲಾಗಿದೆ. ದುಬಾರಿ ಇಂಪ್ಲಾಂಟ್‌ಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದ ರೋಗಿಗಳನ್ನು ಗುರುತಿಸಿ, ಅವರಿಗೆ ಇಂಪ್ಲಾಂಟ್‌ಗಳನ್ನು ಉಚಿತವಾಗಿ ಅಳವಡಿಸುವ ಸಲುವಾಗಿ ರೈಟ್2ಫೇಸ್ ಅಭಿಯಾನವನ್ನು ನಡೆಸಲಾಗುತ್ತಿದೆ.



3ಡಿ ಫೇಸ್ ಇಪ್ಲಾಂಟ್

> ಮ್ಯಾಕ್ಸಿಲೊಫೇಶಿಯಲ್ ಶಸ್ತ್ರಚಿಕಿತ್ಸೆಯು ಕಪ್ಪು ಶಿಲೀಂಧ್ರದ ರೋಗಿಗಳ ಮುಖದಲ್ಲಿ ಮತ್ತೆ ನಗು ಮೂಡಿಸಲಿದೆ
> **ಡಾ. ಕಾರ್ತಿಕ್ ಬಾಲಾಜಿ,** ಸಿಇಒ, ಥ್ಲೋರಿಯೊಎಕ್ಸ್ ಇನ್ನೋವೇಶನ್ ಲ್ಯಾಬ್ಸ್

> ಕಪ್ಪು ಶಿಲೀಂಧ್ರ ಸಮಸ್ಯೆಯಿಂದ ಬಳಲುತ್ತಿರುವ ಬಡ ಮತ್ತು ಅಗತ್ಯ ಇರುವ ರೋಗಿಗಳಿಗೆ ನೆರವಾಗುವ ಉದ್ದೇಶವನ್ನು ರೈಟ್2ಫೇಸ್ ಉಪಕ್ರಮ ಹೊಂದಿದೆ
> **ಡಾ.ಮುರುಗೈಯನ್ ಅಮೃತಲಿಂಗಂ,** ಸಹ ಪ್ರಾಧ್ಯಾಪಕ, ಐಐಟಿಎಂ

ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ವಿವಿಧೆಡೆ ದೂರು

ಮಂಡ್ಯ/ಚಾಮರಾಜನಗರ: ಶ್ರೀರಂಗಪಟ್ಟಣದಲ್ಲಿ ಸಂಕೀರ್ತನ ಯಾತ್ರೆ ವೇಳೆ ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದಡಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಹಿಳಾ ಹೋರಾಟಗಾರ್ತಿ ನಜ್ಮಾ ನಝೀರ್ ಚಿಕ್ಕನೇರಳೆ ದೂರು ನೀಡಿದ್ದಾರೆ. ಐಪಿಸಿ ಸೆಕ್ಷನ್ 294 (ಅಶ್ಲೀಲ ಪದಗಳ ಬಳಕೆ), 295 (ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲು ಉದ್ದೇಶಪೂರ್ವಕವಾಗಿ ನಡೆಸಿದ ಕೃತ್ಯ), 298 (ಧಾರ್ಮಿಕ ಭಾವನೆಗಳಿಗೆ ಧಕ್ಕೆ), 354 (ಮಹಿಳೆಯರ ಗೌರವಕ್ಕೆ ಧಕ್ಕೆ), 506 (ಜೀವ ಬೆದರಿಕೆ) ಅಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ಚಾಮರಾಜನಗರ ಪಟ್ಟಣ ಠಾಣೆಯಲ್ಲಿ ದೂರು ನೀಡಿದ ವುಮೆನ್ ಇಂಡಿಯಾ ಮೂವ್‌ಮೆಂಟ್‌ನ (ಡಬ್ಲ್ಯುಐಎಂ) ಜಿಲ್ಲಾ ಸಮಿತಿಯ ಅಧ್ಯಕ್ಷೆ ರೇಷ್ಮಾ ಬಾನು, 'ಕೂಡಲೇ ಪ್ರಭಾಕರ ಭಟ್ ಅವರನ್ನು ಬಂಧಿಸಬೇಕು' ಎಂದು ಆಗ್ರಹಿಸಿದರು.

ಮಂಗಳೂರಿನಲ್ಲೂ ದೂರು: 'ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ವಿಮೆನ್ ಇಂಡಿಯಾ ಮೂವ್‌ಮೆಂಟ್ (ವಿಮ್)ನವರು ಬೆಳ್ತಂಗಡಿ ಮತ್ತು ಉಡುಪಿ ಜಿಲ್ಲೆಯ ಕಾಪು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿಮ್ ಬೆಳ್ತಂಗಡಿ ಘಟಕ ಅಧ್ಯಕ್ಷೆ ಶಮಾ ಆಲಿ ಉಜಿರೆ, ಕಾರ್ಯದರ್ಶಿ ನಸೀಮಾ ಬೆಳ್ತಂಗಡಿ, ಕೋಶಾಧಿಕಾರಿ ಹಸೀನಾ ಬೆಳ್ತಂಗಡಿ, ಸದಸ್ಯರಾದ ವಕೀಲೆ ಅಸ್ಮಾ ಮತ್ತು ಸೌದಾ ಬೆಳ್ತಂಗಡಿ ಅವರು ಬೆಳ್ತಂಗಡಿ ಠಾಣೆಗೆ ಹಾಗೂ ನಾಝಿಯಾ ನಸ್ರುಲ್ಲ, ಹಾಜಿರ ಉಚ್ಚಿಲ, ನೌಶಿನ್, ವಹಿದಾ ಶರೀಫ್ ಕಾಪು ಠಾಣೆಗೆ ತೆರಳಿ ದೂರು ಸಲ್ಲಿಸಿದರು.

ಅಲ್ಲದೆ, ವಿಟ್ಲ ಕಾಂಗ್ರೆಸ್‌ನ ಮುಸ್ಲಿಂ ಮುಖಂಡರು ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ವಿಟ್ಲ ಠಾಣೆಗೆ ಪ್ರತ್ಯೇಕ ದೂರು ನೀಡಿದರು.


ಕೆಲಸಕ್ಕೆ ಗೈರು: ಕಾರ್ಮಿಕನಿಗೆ ಸರಪಳಿ

ಒಂದನೇ ಪುಟದಿಂದ

ಐದು ತಿಂಗಳ ಹಿಂದೆ ಕೆಲಸಕ್ಕೆ ಸೇರಿದ್ದ ಐಜೂರಿನ ವಾಟರ್ ಟ್ಯಾಂಕ್ ವೃತ್ತದ ನಿವಾಸಿ ವಸೀಂ, ಮುಂಗಡವಾಗಿ ₹1.50 ಲಕ್ಷ ಸಾಲ ಪಡೆದಿದ್ದರು. ಅನಿವಾರ್ಯ ಕಾರಣದಿಂದ ತಿಂಗಳಿಂದ ಕೆಲಸಕ್ಕೆ ಹೋಗಿರಲಿಲ್ಲ. ಒಂಬತ್ತು ದಿನದ ಹಿಂದೆ ಮತ್ತೆ ಕೆಲಸಕ್ಕೆ ಹೋಗಿದ್ದರು.

ಕೆಲಸ ಬಾರದ ವಸೀಂರನ್ನು ಕಂಡು ಕೆಂಡಾಮಂಡಲವಾಗಿದ್ದ ಕಾರ್ಖಾನೆ ಮಾಲೀಕ ಮತ್ತು ಮೇಲ್ವಿಚಾರಕ, ಆತನ ಕಾಲಿಗೆ ಸರಪಳಿ ಕಟ್ಟಿ ಕೂಡಿ ಹಾಕಿದ್ದರು. ಸಾಲ ತೀರುವವರೆಗೂ ಕೆಲಸ ಮಾಡಿಕೊಂಡು ಕಾರ್ಖಾನೆಯಲ್ಲಿಯೇ ಬಿದ್ದಿರುವಂತೆ ತಾಕೀತು ಮಾಡಿದ್ದರು. ಆತನನ್ನು ಒಂಬತ್ತು ದಿನದಿಂದ ಕೂಡಿ ಹಾಕಲಾಗಿತ್ತು. ಹೊರಗಡೆ ಹೋಗಲು ಸಹ ಬಿಡುತ್ತಿರಲಿಲ್ಲ ಎಂದು ಪೊಲೀಸರು ತಿಳಿಸಿದರು.

ಇತರ ಕಾರ್ಮಿಕರು ತಾಲ್ಲೂಕು ಆಡಳಿತಕ್ಕೆ ಮಾಹಿತಿ ನೀಡಿದ್ದರು. ಶಿರಸ್ತೇದಾರ್ ಶಬಿನ್ ತಾಜ್ ಡಿ. 25ರಂದು ದೂರು ನೀಡಿದ್ದರು. ಕಂದಾಯ ಇಲಾಖೆ, ಪೊಲೀಸ್ ಅಧಿಕಾರಿಗಳು ದಾಳಿ ನಡೆಸಿದ್ದರು.





ಶ್ರವಣದೋಷವುಳ್ಳ ಸವಾರರಿಗಾಗಿ ಹೆಲ್ಮೆಟ್

ಇ.ಎಸ್. ಸುಧೀಂದ್ರ ಪ್ರಸಾದ್

ಗಿಜಿಗಿಡುವ ವಾಹನ ದಟ್ಟಣೆಯಲ್ಲಿ ಸಾಮಾನ್ಯರಿಗೆ ನಡೆದಾಡುವುದೇ ತ್ರಾಸದಾಯಕವಾಗಿರುವಾಗ, ಕಿವಿ ಕೇಳಿಸದವರ, ಕಣ್ಣು ಕಾಣಿಸದವರ ಪಾಡು ಹೇಳತೀರದು. ಆದರೆ ವಾಹನ ಚಾಲನೆ ಸಂದರ್ಭದಲ್ಲಿ ಕಿವಿ ಕೇಳಿಸದವರಿಗೆ ಒಂದಷ್ಟರ ಮಟ್ಟಿಗೆ ನೆರವಾಗುವ ಹೆಲ್ಮೆಟ್ ಒಂದನ್ನು ಮಂಗಳೂರಿನ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಇಂಥದ್ದೊಂದು ಸಾಧನ ಪ್ರದರ್ಶನ ಕಂಡಿತು.

ಕಿವಿ ಕೇಳಿಸದ ದ್ವಿಚಕ್ರ ವಾಹನ ಸವಾರರಿಗೆ ನೆರವಾಗುವ ಹೆಲ್ಮೆಟ್ ಅನ್ನು ಈ ಕಾಲೇಜಿನ 3ನೇ ವರ್ಷದ ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ಪ್ರದರ್ಶಿಸಿದರು. ಜನರ ಗಮನ ಸೆಳೆದ ಈ ಸಾಧನದ ಮಾದರಿಯನ್ನು ಎನ್. ಸಾತ್ವಿಕ್ ಶೆಟ್ಟಿ ಹಾಗೂ ನಿಧಿ ಅಭಿವೃದ್ಧಿಪಡಿಸಿದ್ದಾರೆ.

‘ಕಿವಿ ಕೇಳಿಸದವರು ಅಥವಾ ಮಂದವಾಗಿ ಕೇಳಿಸುವವರಿಗೆ ವಾಹನ ಚಾಲನೆ ಮಾಡುವುದು ತೀರಾ ಸಮಸ್ಯೆ. ಹೆಲ್ಮೆಟ್ ಇರುವಾಗಂತೂ ಅದು ಇನ್ನೂ ಕಷ್ಟದ ಕೆಲಸ. ಈ ಸಮಸ್ಯೆಗೆ ಪರಿಹಾರದ ಮೊದಲ ಹೆಜ್ಜೆ ಎಂಬಂತೆ ಈ ಹೆಲ್ಮೆಟ್ ಅಭಿವೃದ್ಧಿಪಡಿಸಲಾಗಿದೆ’ ಎಂದೆನ್ನುತ್ತಾರೆ ಸಾತ್ವಿಕ್ ಶೆಟ್ಟಿ.

‘ಇದು ಸಾಧಾರಣ ಹೆಲ್ಮೆಟ್‌ನಂತೆಯೇ ಇದೆ. ಅದರೊಳಗೆ 6 ಚಾನಲ್‌ನ ಮೈಕ್ರೊಫೋನ್ ಅಳವಡಿಸಲಾಗಿದೆ. ಜತೆಗೆ ಅದಕ್ಕೆ ಪೂರಕವಾಗಿ ಆರು ವೈಬ್ರೇಟರ್‌ಗಳನ್ನು ಅಳವಡಿಸಲಾಗಿದೆ. ವಾಹನದ ಅಕ್ಕಪಕ್ಕದ ಶಬ್ದಗಳನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ನಿಖರ ದಿಕ್ಕಿನಿಂದ ಬರುತ್ತಿರುವ ಶಬ್ದದ ಮಾಹಿತಿಯನ್ನು ಈ ಹೆಲ್ಮೆಟ್ ಬಳಕೆದಾರರಿಗೆ ನೀಡಲಿದೆ’ ಎಂದು ತಿಳಿಸಿದರು.

‘ಉದಾಹರಣೆಗೆ ವಾಹನ ಸವಾರರ ಹಿಂದಿನಿಂದ ಬಲಭಾಗದಲ್ಲಿ ವಾಹನವೊಂದು ಹಿಂದಿಕ್ಕುವ ಪ್ರಯತ್ನದಲ್ಲಿದ್ದು, ಹಾರ್ನ್ ಮಾಡಿದರೆ, ಅದರ ನಿಖರ ದಿಕ್ಕನ್ನು ಗ್ರಹಿಸಿ ಹೆಲ್ಮೆಟ್ ಒಳಗೆ ಅಳವಡಿಸಿರುವ ಸೆನ್ಸರ್‌ಗೆ ಮಾಹಿತಿ ನೀಡುತ್ತದೆ. ಆ ಮಾಹಿತಿ ಆಧರಿಸಿ ಆ ದಿಕ್ಕಿನೆಡೆಗೆ ಇರುವ ಸೆನ್ಸರ್ ವೈಬ್ರೇಟ್ ಆಗುತ್ತದೆ. ಅದರಿಂದ ವಾಹನದ ದಿಕ್ಕನ್ನು ಅರಿಯಲು ಸಾಧ್ಯವಾಗುತ್ತದೆ’ ಎಂದು ವಿವರಿಸಿದರು.

‘ಇತರ ವಾಹನಗಳ ಶಬ್ದ ಹಾಗೂ ಅದರ ದಿಕ್ಕನ್ನು ಗ್ರಹಿಸಿ, ನಿಖರ ಮಾಹಿತಿ ನೀಡಲು ಕೃತಕ ಬುದ್ಧಿಮತ್ತೆಯನ್ನು ಬಳಸಲಾಗಿದೆ. ಈ ಯೋಜನೆಗೆ ನ್ಯೂ ಏಜ್ ಇನ್‌ಕ್ಯುಬೇಷನ್ ನೆಟ್‌ವರ್ಕ್ (ಎನ್‌ಎಐಎನ್) ಮೂಲಕ ಅನುದಾನ ದೊರೆತಿದೆ. ಯೋಜನೆಗೆ ಸಹ್ಯಾದ್ರಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಜೆ.ಬಿ.ಜನಾರ್ದನ ಸ್ವಾಮಿ ಮಾರ್ಗದರ್ಶಕರಾಗಿದ್ದಾರೆ ಎಂದು ಸಾತ್ವಿಕ್ ತಿಳಿಸಿದರು.



ಶ್ರವಣದೋಷವುಳ್ಳವರಿಗೆ ಹೆಲ್ಮೆಟ್

ಕೊಳೆಯುವ ಪ್ಲಾಸ್ಟಿಕ್ ಶೋಧ

ನೇಸರ ಕಾಡನಕುಪ್ಪೆ

ಪರಿಸರ ಮಾಲಿನ್ಯಕ್ಕೆ ಅತಿ ದೊಡ್ಡ ಕೊಡುಗೆಯನ್ನು ನೀಡುತ್ತಿರುವುದು ಪ್ಲಾಸ್ಟಿಕ್. ಪ್ಲಾಸ್ಟಿಕ್ ನೂರಾರು ವರ್ಷಗಳಾದರೂ ಕೊಳೆಯದೇ ಮಣ್ಣಿನಲ್ಲೇ ಉಳಿಯುವ ಗುಣಲಕ್ಷಣವನ್ನು ಹೊಂದಿರುವುದು ಅತಿ ದೊಡ್ಡ ಶಾಪವೆಂದೇ ಪರಿಗಣಿಸಲಾಗಿದೆ. ಆದರೆ, ಇದೀಗ ಕೊಳೆಯಬಲ್ಲ ಪ್ಲಾಸ್ಟಿಕ್‌ನ ಶೋಧವಾಗಿದೆ. ಇದು ತನ್ನ ನಿಗದಿತ ಅವಧಿ ಮುಗಿದ ಬಳಿಕ ಬಹುಬೇಗ ಕೊಳೆಯುವ ಲಕ್ಷಣವನ್ನು ಹೊತ್ತು ಬಂದಿದೆ.

ಪ್ಲಾಸ್ಟಿಕ್‌ನ ಶೋಧವಾಗಿ ಬಹುತೇಕ 100 ವರ್ಷಗಳು ಮುಗಿದಿವೆ. ಪ್ಲಾಸ್ಟಿಕ್‌ನ ಸಂಶೋಧನೆಯಾದಾಗ ಅದನ್ನು ಅತಿ ದೊಡ್ಡ ವಿಸ್ಮಯವೆಂದೇ ಕರೆಯಲಾಗಿತ್ತು. ಬಹುಕಾಲ ಬಾಳಿಕೆ ಬರುವ, ಮಣ್ಣಿನಲ್ಲಿ ಬಟ್ಟೆ ಅಥವಾ ಕಾಗದದ ಹಾಗೆ ಕರಗದ ಅಥವಾ ಕೊಳೆಯದ ಈ ವಸ್ತು ಅತಿ ಅಗ್ಗದ, ಜನಸಾಮಾನ್ಯರಿಗೆ ಅನುಕೂಲಕಾರಿಯಾದ ವಸ್ತುವೆಂದು ಗಣನೆಗೆ ಒಳಪಟ್ಟಿತ್ತು.

> ಇದೀಗ ಅಮೆರಿಕದ ‘ನಾರ್ತ್‌ವೆಸ್ಟರ್ನ್ ಯೂನಿವರ್ಸಿಟಿ’ಯ ರಸಾಯನ ವಿಜ್ಞಾನಿಗಳು ಕೊಳೆಯಬಲ್ಲ ಪ್ಲಾಸ್ಟಿಕ್ ಕಂಡುಹಿಡಿದಿದ್ದಾರೆ. ಈಗಾಗಲೇ ಅತಿ ಹೆಚ್ಚು ಬಳಕೆಯಲ್ಲಿರುವ ನೈಲಾನ್–6 ಪ್ಲಾಸ್ಟಿಕ್ ಅನ್ನು ಕೊಳೆಯುವಂತೆ ತಯಾರಿಸಿದ್ದಾರೆ.

ನಿಗದಿತ ಪ್ಲಾಸ್ಟಿಕ್ ಸಾಂದ್ರತೆಯಿದ್ದರೆ ಮಾತ್ರ ಪ್ಲಾಸ್ಟಿಕ್ ಅನ್ನು ಮರುಬಳಕೆ ಮಾಡಬಹುದು. ಇಲ್ಲವಾದಲ್ಲಿ ಅದನ್ನು ತ್ಯಾಜ್ಯವಾಗಿ ಅನಿವಾರ್ಯವಾಗಿ ಬಿಸಾಡಲೇಬೇಕು. ಇದೇ ಕಾರಣಕ್ಕೆ ನಿಗದಿತ ಮೈಕ್ರಾನ್‌ಗಳಲ್ಲೇ ಪ್ಲಾಸ್ಟಿಕ್ ಚೀಲ ಇತ್ಯಾದಿ ವಸ್ತುಗಳನ್ನು ತಯಾರಿಸಬೇಕೆಂದು ವಿಶ್ವದಾದ್ಯಂತ ಹಲವು ದೇಶಗಳಲ್ಲಿ ಕಟ್ಟುನಿಟ್ಟಿನ ಕಾನೂನು ತರಲಾಗಿದೆ.

ಕಾನೂನು ಇದ್ದರೂ ಅದನ್ನು ಜಾರಿ ಮಾಡುವುದು ಕಷ್ಟ. ಎಷ್ಟೇ ನಿಯಂತ್ರಣ ಹೇರಿದರೂ ಜನರು ಪ್ಲಾಸ್ಟಿಕ್ ಬಳಕೆಯನ್ನು ಬಿಡುತ್ತಿಲ್ಲ. ಈ ಇತಿಮಿತಿಗಳನ್ನು ಅರಿತುಕೊಂಡಿದ್ದ ವಿಜ್ಞಾನಿಗಳು ಕೊಳೆಯಬಲ್ಲ ಪ್ಲಾಸ್ಟಿಕ್‌ನ ಶೋಧಕಾರ್ಯದಲ್ಲಿ ಬಹು ಕಾಲದಿಂದಲೂ ತೊಡಗಿಸಿಕೊಂಡಿದ್ದರು. ಇದೀಗ ಅಮೆರಿಕದ ‘ನಾರ್ತ್‌ವೆಸ್ಟರ್ನ್ ಯೂನಿವರ್ಸಿಟಿ’ಯ ವಿಜ್ಞಾನಿಗಳು ಕೊಳೆಯಬಲ್ಲ ಪ್ಲಾಸ್ಟಿಕ್ ಕಂಡುಹಿಡಿದಿದ್ದಾರೆ. ಈಗಾಗಲೇ ಅತಿ ಹೆಚ್ಚು ಬಳಕೆಯಲ್ಲಿರುವ ನೈಲಾನ್–6 ಪ್ಲಾಸ್ಟಿಕ್ ಅನ್ನು ಕೊಳೆಯುವಂತೆ ತಯಾರಿಸಿದ್ದಾರೆ.

ಸಾಮಾನ್ಯವಾಗಿ ದಿನಬಳಕೆಗೆ ಬಳಸುವ ಪ್ಲಾಸ್ಟಿಕ್ ಚೀಲಗಳು, ಬಟ್ಟೆಗಳು, ಕಾರ್ಪೆಟ್, ಪ್ಯಾಕೇಜ್ ಉದ್ಯಮದಲ್ಲಿ ಮತ್ತು ಮೀನುಗಾರಿಕೆಯಲ್ಲಿ ಬಳಸುವ ಬಲೆಗಳಲ್ಲಿ ಅತಿ ಮುಖ್ಯವಾಗಿ ನೈಲಾನ್–6 ಅನ್ನು ಬಳಸಲಾಗುತ್ತದೆ. ಭೂಮಿಯ ಮೇಲಿನ ಮಣ್ಣಿನ ಮಾಲಿನ್ಯದಲ್ಲಿ ಶೇ 90ರಷ್ಟು ಇದರಿಂದಲೇ ಉಂಟಾಗುತ್ತಿದೆ. ಅಲ್ಲದೇ, ನೀರು ಕೂಡ ಇದರಿಂದಲೇ ಮಲಿನವಾಗುತ್ತಿದೆ. ನದಿ ಹಾಗೂ ಸಮುದ್ರಗಳ ತಳದಲ್ಲಿ ಪ್ಲಾಸ್ಟಿಕ್ ಪದರಗಳು ಶೇಖರವಾಗಿದ್ದು, ಸರಿಪಡಿಸಲಾಗದಂತೆ ಈಗಾಗಲೇ ಹಾನಿಯಾಗಿದೆ. ಪ್ರತಿ ವರ್ಷ 1 ಮಿಲಿಯನ್ ಪೌಂಡ್ ನೈಲಾನ್ ಬಲೆ ಸಮುದ್ರದ ಪಾಲಾಗುತ್ತಿದೆ. ಇವೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ನೈಲಾನ್–6 ಅನ್ನು ವಿಜ್ಞಾನಿಗಳು ಸಂಶೋಧನೆಗೆ ಒಳಪಡಿಸಿದ್ದಾರೆ.

ಇಟ್ರಿಯಂ ಲೋಹ ಬಳಕೆ

ಭೂಮಿಯಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಲಭ್ಯವಿರುವ ‘ಇಟ್ರಿಯಂ’ ಎಂಬ ಲೋಹವನ್ನು ಪ್ಲಾಸ್ಟಿಕ್ ಉತ್ಪಾದನೆಗೆ ಬಳಸಿಕೊಳ್ಳುವುದೇ ಈ ಸಂಶೋಧನೆಯ ಸಾರಾಂಶ. ಈ ಲೋಹವನ್ನು ಪ್ಲಾಸ್ಟಿಕ್ ಉತ್ಪಾದನೆಯ ಸಮಯದಲ್ಲಿ ನಿಗದಿತ ಪ್ರಮಾಣದಲ್ಲಿ ಬೆರೆಸುವುದು. ಅಲ್ಲದೇ, ‘ಲ್ಯಾಂಥನಂ’ ಎಂಬ ಮತ್ತೊಂದು ಲೋಹವನ್ನು ಕಡಿಮೆ ಪ್ರಮಾಣದಲ್ಲಿ ಪ್ಲಾಸ್ಟಿಕ್‌ನೊಂದಿಗೆ ಬೆರೆಸುವುದು. ಇದರಿಂದ ಪ್ಲಾಸ್ಟಿಕ್‌ನ ಅಣುರಚನೆಯಲ್ಲಿ ದೊಡ್ಡ ಬದಲಾವಣೆಗಳಾಗುವುದನ್ನು ವಿಜ್ಞಾನಿಗಳಾದ ಟಾಬಿನ್ ಮಾರ್ಕ್ಸ್, ಲಿಂಡಾ ಜಿ. ಬ್ರಾಡ್‌ಬೆಲ್ಟ್ ಗುರುತಿಸಿದ್ದಾರೆ. ಇಟ್ರಿಯಂ ಬೆರೆಸಿದ ನೈಲಾನ್ – 6 ಗಟ್ಟಿಯಾಗಿಯೇ ಇರುತ್ತದೆ. ಆದರೆ, ಕೆಲವೇ ದಿನಗಳಲ್ಲಿ ಅದರ ಅಣುರಚನೆ ಶಿಥಿಲಗೊಳ್ಳುತ್ತದೆ. ಅಂದರೆ, ಇಟ್ರಿಯಂ ಬೆರೆಸಿದ ನೈಲಾನ್ – 6 ಕೆಲವು ದಿನಗಳಲ್ಲಿ ಶಿಥಿಲಗೊಂಡು ಬಳಕೆಗೆ ಅನರ್ಹಗೊಳ್ಳುತ್ತದೆ. ಬಳಿಕ ಅದನ್ನು ಬಿಸಾಡಬೇಕು. ಬಿಸಾಡಿದ ಬಳಿಕ ಅದು ಸಂಪೂರ್ಣ ಶಿಥಿಲಗೊಂಡು ಕೊಳೆತು ಹೋಗುತ್ತದೆ. ಹಾಗಾಗಿ, ಅದು ಮಣ್ಣಿನಲ್ಲಿ ಸೇರಿಕೊಳ್ಳುತ್ತದೆ. ‘ಈ ಹೊಸ ಬಗೆಯ ಪ್ಲಾಸ್ಟಿಕ್ ತಯಾರಿಯ ವೆಚ್ಚ ದುಬಾರಿಯೇನೂ ಅಲ್ಲ. ಹಾಗಾಗಿ, ಜನಸಾಮಾನ್ಯರಿಗೆ ಈ ಪ್ಲಾಸ್ಟಿಕ್ ಕೈಗೆಟುಕುವ ದರಕ್ಕೆ ದೊರಕುತ್ತದೆ’ ಎಂದು ಟಾಬಿನ್ ಹೇಳಿದ್ದಾರೆ.

ಬೇಕಿದೆ ಮತ್ತಷ್ಟು ಸಂಶೋಧನೆ

ಇದು ಅತಿ ಪ್ರಮುಖ ಸಂಶೋಧನೆಯಾದರೂ ಮತ್ತಷ್ಟು ಸಂಶೋಧನೆ ಬೇಕಾಗಿದೆ. ಈ ಹೊಸ ಸಂಶೋಧನೆಯ ಬಳಿಕವೂ ಪ್ಲಾಸ್ಟಿಕ್ ಅನ್ನು ಸುಡುವುದು ಸಾಧ್ಯವಾಗುವುದಿಲ್ಲ. ಪ್ಲಾಸ್ಟಿಕ್ ಅನ್ನು ಸುಟ್ಟರೆ ಅತಿ ಅಪಾಯಕಾರಿ ರಾಸಾಯನಿಕಗಳು ಪರಿಸರವನ್ನು ಸೇರುತ್ತವೆ. ಅಲ್ಲದೇ, ಸಾಂಪ್ರದಾಯಿಕ ನೈಲಾನ್ – 6ಗೆ ಈಗ ಮತ್ತೆರಡು ಹೊಸ ಲೋಹದ ಧಾತುಗಳನ್ನು ಸೇರಿಸುತ್ತಿರುವುದರಿಂದ ಪ್ಲಾಸ್ಟಿಕ್ ಅನ್ನು ಸುಟ್ಟರೆ ಮತ್ತಷ್ಟು ಅಪಾಯಕಾರಿ ರಾಸಾಯನಿಕಗಳು ಗಾಳಿಯನ್ನು ಸೇರುತ್ತವೆ. ಆದ್ದರಿಂದ ನಮ್ಮ ಸಂಶೋಧನೆಯನ್ನು ಮುಂದಿನ ಪೀಳಿಗೆಯ ವಿಜ್ಞಾನಿಗಳು ಮುಂದುವರಿಸಬೇಕು. ಹೊಸ ವಿಧಾನಗಳನ್ನು ಕಂಡುಹಿಡಿಯಬೇಕು ಎಂದು ಟಾಬಿನ್ ಹಾಗೂ ಲಿಂಡಾ ಕಿವಿಮಾತು ಹೇಳಿದ್ದಾರೆ.

ಈ ಹೊಸ ವಿಧಾನದ ಮೂಲಕ ಪ್ಲಾಸ್ಟಿಕ್ ತಯಾರಿಸಲು ಸಿದ್ಧತೆ ಖಂಡಿತವಾಗಿಯೂ ಬೇಕಾಗುತ್ತದೆ. ಅಲ್ಲದೇ, ಸರ್ಕಾರಗಳ ಮಟ್ಟದಲ್ಲಿ ನೀತಿ, ನಿಯಮಗಳನ್ನು ರೂಪಿಸಬೇಕಾಗುತ್ತದೆ. ಈಗಾಗಲೇ ಜಾರಿಯಲ್ಲಿರುವ ಪ್ಲಾಸ್ಟಿಕ್ ಉತ್ಪಾದನಾ ವಿಧಾನಗಳಿಗೆ ತಿದ್ದುಪಡಿ ತಂದು ಹೊಸ ವಿಧಾನ ಅಳವಡಿಸಿಕೊಳ್ಳುವಂತೆ ಕಾರ್ಖಾನೆಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ಸರ್ಕಾರ ನೀಡಬೇಕು. ಮಾರ್ಗಸೂಚಿಗಳನ್ನು ತಯಾರಿಸಬೇಕು.

ಇಟ್ರಿಯಂ ಹಾಗೂ ಲ್ಯಾಂಥನಂ ಲೋಹಗಳ ಗಣಿಗಾರಿಕೆ ಹಾಗೂ ಸಂಸ್ಕರಣೆಯನ್ನು ಹೆಚ್ಚಿಸಿ, ಪ್ಲಾಸ್ಟಿಕ್ ಉತ್ಪಾದನೆಗೆ ಬೇಕಾಗುವಂತೆ ವಿಧಾನಗಳನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯವೂ ಎದುರಾಗಲಿದೆ. ಇವೆಲ್ಲವನ್ನೂ ಜಾರಿಗೆ ತಂದಲ್ಲಿ ಪರಿಸರ ಮಾಲಿನ್ಯವನ್ನು ನಿಯಂತ್ರಣಕ್ಕೆ ತರಬಹುದು. ಈಗಾಗಲೇ ಆಗಿರುವ ಹಾನಿಯನ್ನು ಸರಿಪಡಿಸಲು ಸಾಧ್ಯವಿಲ್ಲದೇ ಇದ್ದರೂ ಭವಿಷ್ಯದಲ್ಲಿ ಆಗಬಹುದಾದ ಹಾನಿಯನ್ನು ತಡೆಯುವುದು ಇದರಿಂದ ಸಾಧ್ಯವಾಗಬಹುದು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಕಲೆ: ಗಣೇಶ ಅರಳಿಕಟ್ಟಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಅಧ್ಯಾಯ–11 ಭಾರತದ ಋತುಗಳು

ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿರಿ

9) ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ ; ಉತ್ತರಪ್ರದೇಶದಲ್ಲಿ ಆಂಡೀಸ್ ; :ಕರ್ನಾಟಕದಲ್ಲಿ ಕಾಫಿ ತುಂತುರು: ....

ಉತ್ತರ:– ಕೇರಳದಲ್ಲಿ ‘ಮಾವಿನಹೊಯ್ಲು’

10) ನಮ್ಮ ದೇಶದ ಸರಾಸರಿ ಮಳೆಯ ಪ್ರಮಾಣ .ಸೆಂ.ಮಿ.ಗಳು

ಉತ್ತರ:– 118

11) ಮಾನ್ಸೂನ್ ಮಾರುತಗಳ ‘ನಿರ್ಗಮನ ಕಾಲ’ದ ಅವಧಿಯಲ್ಲಿ ಭಾರತವು ಶೇ ....ರಷ್ಟು ಮಳೆಯನ್ನು ಪಡೆಯುತ್ತದೆ.

ಉತ್ತರ:– 13

12) ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿಯ ವಾರ್ಷಿಕ ಸರಾಸರಿ ಮಳೆಯ ....ಸೆಂ.ಮೀ.ಗಳಷ್ಟಾಗಿದೆ. ಇದು ಮಳೆ ಭಾರತದಲ್ಲಿ ಅತಿಕಡಿಮೆ ಮಳೆಯನ್ನು ಪಡೆಯುವ ಪ್ರದೇಶವಾಗಿದೆ.

ಉತ್ತರ:– 8.3

13) ವಾರ್ಷಿಕ ಸುಮಾರು ....ಸೆಂ.ಮೀ. ಗಳಿಗಿಂತ ಹೆಚ್ಚು ಮಳೆ ಬೀಳುವ ಭಾಗಗಳನ್ನು ಅಧಿಕ ಮಳೆ ಬೀಳುವ ಪ್ರದೇಶಗಳೆಂದು ಗುರುತಿಸುತ್ತೇವೆ.

ಉತ್ತರ:– 250

ಅಧ್ಯಾಯ–12 ಭಾರತದ ಮಣ್ಣುಗಳು

1) ಭಾರತದಲ್ಲಿ ಕಂಡುಬರುವ ಮಣ್ಣನ್ನು ಎಷ್ಟು ವಿಧಗಳಗಿ ವಿಂಗಡಿಸಲಾಗಿದೆ, ಅವು ಯಾವುವು?

ಉತ್ತರ:– ಭಾರತದಲ್ಲಿ ಕಂಡು ಬರುವ ಮಣ್ಣನ್ನು ಆರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ (1) ಮೆಕ್ಕಲು ಮಣ್ಣು (2) ಕಪ್ಪು ಮಣ್ಣು (3) ಕೆಂಪು ಮಣ್ಣು (4) ಜಂಬಿಟ್ಟಿಗೆ ಮಣ್ಣು (5) ಮರುಭೂಮಿ ಮಣ್ಣು ಮತ್ತು (6)ಪರ್ವತ ಮಣ್ಣು

2) ಭಾರತದಲ್ಲಿ ಎಷ್ಟು ಪ್ರದೇಶದಲ್ಲಿ ಮೆಕ್ಕಲು ಮಣ್ಣು ಕಂಡು ಬರುತ್ತದೆ.

ಉತ್ತರ:– ಮೆಕ್ಕಲು ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು.

3) ಭಾರತದಲ್ಲಿ ಎಲ್ಲೆಲ್ಲಿ ಮೆಕ್ಕಲು ಮಣ್ಣನ್ನು ಹೆಚ್ಚಾಗಿ ನೋಡಬಹುದು?

ಉತ್ತರ:– ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ, ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ

4) ಮೆಕ್ಕಲು ಮಣ್ಣನ್ನು ಹೊಂದಿರುವ ಪ್ರದೇಶದಲ್ಲಿ ಯಾವೆಲ್ಲಾ ಬೆಳೆಗಳನ್ನು ನೋಡಬಹುದು?

ಉತ್ತರ:– ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

5) ಭಾರತದಲ್ಲಿರುವ ಮೆಕ್ಕಲು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:– ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣಿಗೆ ಮೆಕ್ಕಲು ಮಣ್ಣು ಎನ್ನುವರು. ಭಾರತದಲ್ಲಿ ಮೆಕ್ಕಲು ಮಣ್ಣು ಇತರ ಎಲ್ಲಾ ಬಗೆಯ ಮಣ್ಣುಗಳಿಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು. ಈ ಮಣ್ಣು ಸುಮಾರು 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ, ಹರಿಯಾಣ ಅಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯ ಭಾಗವನ್ನು ಆವರಿಸಿದೆ. ಅಲ್ಲದೆ ನರ್ಮದಾ ಮತ್ತು ತಪತಿ ನದಿಗಳ ಕಣಿವೆಗಳು, ಪರ್ಯಾಯ ಪ್ರಸ್ಥಭೂಮಿಯ ಎರಡು ಕಡೆಗಳಲ್ಲಿರುವ ತೀರ ಪ್ರದೇಶಗಳೂ ಸಹ ಮೆಕ್ಕಲು ಮಣ್ಣಿನಿಂದಲೇ ನಿರ್ಮಿತವಾಗಿವೆ. ಗೋಧಿ, ಭತ್ತ, ಕಬ್ಬು, ಹತ್ತಿ ಮತ್ತು ಸೆಣಬು ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಾಗಿವೆ.

6) ಯಾವ ಮಣ್ಣನ್ನು ರೆಗೂರ್ ಮಣ್ಣು ಎಂದು ಕರೆಯುವರು?

ಉತ್ತರ:– ಕಪ್ಪು

7) ನಮ್ಮ ದೇಶದಲ್ಲಿ ಕಪ್ಪು ಮಣ್ಣು ಎಷ್ಟು ಪ್ರದೇಶದಲ್ಲಿ ಹರಡಿದೆ?

ಉತ್ತರ:– ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶ

8) ಕಪ್ಪು ಮಣ್ಣು ಉತ್ಪತ್ತಿ ಹೇಗಾಗಿದೆ?

ಉತ್ತರ:– ಕಪ್ಪು ಮಣ್ಣು ಅಗ್ನಿ ಶಿಲೆಗಳ ಶಿಥಲಿಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದರೂ ತೇವಾಂಶ ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ.

9) ಕಪ್ಪುಮಣ್ಣಿನಲ್ಲಿ ಹೆಚ್ಚಾಗಿ ಬೆಳೆಯುವ ಬೆಳೆ ಯಾವುವು?

ಉತ್ತರ:– ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ನಿಂಬೆ, ದ್ರಾಕ್ಷಿ ಇತ್ಯಾದಿ

10) ಕಪ್ಪು ಮಣ್ಣು ಹೆಚ್ಚಾಗಿ ಎಲ್ಲೆಲ್ಲಿ ಕಾಣಸಿಗುತ್ತದೆ?

ಉತ್ತರ:– ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರ ಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಪ್ಪು ಮಣ್ಣು ಕಾಣ ಬರುತ್ತದೆ.

11) ಕಪ್ಪು ಮಣ್ಣಿನ ಬಗ್ಗೆ ವಿವರವಾಗಿ ವಿವರಿಸಿ

ಉತ್ತರ:– ಕಪ್ಪು ಮಣ್ಣನ್ನು ‘ರೇಗೂರ್ ಮಣ್ಣು’ ಎಂತಲೂ ಕರೆಯುತ್ತಾರೆ. ಈ ಮಣ್ಣು ಹತ್ತಿ ಬೆಳೆಗೆ ಬಹು ಸೂಕ್ತವಾಗಿರುವುದರಿಂದ ‘ಕಪ್ಪುಹತ್ತಿ ಬೆಳೆಯುವ ಮಣ್ಣು’ ಎಂತಲೂ ಕರೆಯವರು. ಇದು ಸುಮಾರು 5.46 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುತ್ತದೆ. ಕಪ್ಪು ಮಣ್ಣಿನ ಪ್ರದೇಶವನ್ನು ಡೆಕ್ಕನ್ ಟ್ರಾಪ್ ಎಂದು ಸಹಾ ಕರೆಯುತ್ತಾರೆ. ಈ ಮಣ್ಣು ಅಗ್ನಿ ಶಿಲೆಗಳ ಶಿಥಲೀಕರಣದಿಂದ ಉತ್ಪತ್ತಿಯಾಗಿದೆ. ಇದರಲ್ಲಿ ಜೇಡಿ ಮಣ್ಣಿನ ಕಣಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಮಣ್ಣು ಫಲವತ್ತಾಗಿದ್ದರು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಇದು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಮಣ್ಣು ಕಬ್ಬಿಣ, ಸುಣ್ಣ ಹಾಗೂ ಮೆಗ್ನೇಶಿಯಂ ಕಾರ್ಬೋನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿದೆ. ಇದು ಒಣ ಬೇಸಾಯಕ್ಕೆ ಸೂಕ್ತವಾಗಿದ್ದು ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ನಿಂಬೆ, ದ್ರಾಕ್ಷಿ ಈ ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳಾಗಿವೆ

12) ಪರ್ಯಾಯ ಪ್ರಸ್ಥಭೂಮಿಯಲ್ಲಿ ಯಾವ ಮಣ್ಣು ಹೆಚ್ಚು ವಿಸ್ತರವಾಗಿ ಹರಡಿದೆ?

ಉತ್ತರ:– ಕೆಂಪುಮಣ್ಣು

13) ಕೆಂಪು ಮಣ್ಣು ಎಷ್ಟು ಚದರ್ ಕಿ ಮೀ ನಲ್ಲಿ ಹರಡಿದೆ?

ಉತ್ತರ:– 5.18 ಲಕ್ಷ ಚದರ್ ಕಿ.ಮೀ

14) ಕೆಂಪು ಮಣ್ಣು ಹರಡಿರುವ ಪ್ರದೇಶವನ್ನು ಗುರುತಿಸಿ

ಉತ್ತರ:– ಕೆಂಪುಮಣ್ಣು ದಕ್ಷಿಣದಲ್ಲಿ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಮಧ್ಯಪ್ರದೇಶದ ಝಾನ್ಸಿಯವರೆಗೆ ಹಬ್ಬಿದೆ . ಅದೇ ರೀತಿ ಪಶ್ಚಿಮದಲ್ಲಿ ಗುಜರಾತಿನ ಕಚ್‌ನಿಂದ ಪೂರ್ವದಲ್ಲಿ ಜಾರ್ಖಂಡ್‌ನ ರಾಜಮಹಲ್‌ವರೆಗೆ ಹಬ್ಬಿದೆ.

15) ಕೆಂಪು ಮಣ್ಣಿನಲ್ಲಿ ಬೆಳೆಯಲಾಗುವ ಬೆಳೆಗಳೆಂದರೆ ಯಾವುವು?

ಉತ್ತರ:– ರಾಗಿ, ತಂಬಾಕು, ಹಾಗೂ ಎಣ್ಣೆಕಾಳುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ

16) ಕೆಂಪುಮಣ್ಣಿನ ಬಗ್ಗೆ ವಿವರವಾಗಿ ಬರೆಯಿರಿ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHEMATICS

CALCULUS

Basics in Calculus

10) Differentiate 10^x w.r.t ‘x’.

Soln: (.......Contd)

$$\frac{d}{dx}(\log_e y) = \frac{d}{dx}(x\log_e 10)$$

$$\frac{1}{y}.\frac{dy}{dx} = \log_e 10.1$$

$$\frac{dy}{dx} = y\log_e 10.1$$

$$\therefore \frac{dy}{dx} = 10^x.\log_e 10$$

11) $\mathbf{x^2 + y^2 = a^2}$

Soln: - **Given that** $x^2 + y^2 = a^2$

differentiating both sides w.r.t x, we have

$$\frac{d}{dx}(x^2) + \frac{d}{dx}(y^2) = \frac{d}{dx}(a^2)$$

$$2x + 2y\frac{dy}{dx} = 0$$

$$2y\frac{dy}{dx} = -2x$$

$$\therefore \frac{dy}{dx} = -\frac{x}{y}$$

12) $\mathbf{x = \cos t; \quad y = \sin 2t}$

Soln: - $x = \cos t$ **and** $y = \sin 2t$

$$\frac{dx}{dt} = -\sin t \quad \text{and} \quad \frac{dy}{dt} = 2\cos 2t$$

$$\therefore \frac{dy}{dx} = \frac{2\cos 2t}{-\sin t}$$

13) **If** $\mathbf{y = x^2(2x^3 - 1)}$**; find** $\mathbf{y_2}$

Soln:- Given that $y = x^2(2x^3 - 1)$

$$y = 2x^5 - x^2$$

$$y_1 = 10x^4 - 2x \;\; \& \;\; y_2 = 40x^3 - 2$$

14) If $\mathbf{y = \frac{3x}{x+1}}$ **find** $\mathbf{\frac{d^2y}{dx^2}}$**.**

Soln: - Given $y = \frac{3x}{x+1}$

$$\frac{dy}{dx} = \frac{(x+1)3 - 3x(1)}{(x+1)^2} = \frac{3(x+1-x)}{(x+1)^2}$$

$$\Rightarrow \frac{dy}{dx} = 3(x+1)^{-2}$$

$$\frac{d^2y}{dx^2} = 3(-2)(x+1)^{-3}.1 = -\frac{6}{(x+1)^3}$$

15) State the geometric meaning of $\mathbf{\frac{dy}{dx}}$ **with reference to a curve** $y = f(x)$**.**

Soln: - $\frac{dy}{dx}$ **represents the slope of the tangent to the curve** $y = f(x)$ **at the point** $p(x, y)$**.**

16) Find the slope of the tangent for the curve $\mathbf{y = x^3}$ **at the point** $(2, 8)$

Soln: - Given $y = x^3$

we have $\frac{dy}{dx} = 3x^2$

$$\Rightarrow \therefore \left(\frac{dy}{dx}\right)_{(2,\,8)} = 3(2)^2 = 12$$

$$\therefore \text{Slope} = 12$$

17) What is the Derivative of Function of a function (Composite function)?

Soln:- Derivative of Function of a function (Composite function) is given by - Chain rule

If y is a function of u, u is a function of x then -

$$\frac{dy}{dx} = \frac{dy}{du}\cdot\frac{du}{dx}$$

18) Differentiate $\text{Cot}^3\left(\frac{x}{2}\right)$ **w.r.t ‘x’**

$$\text{Soln:- Let } y = \text{Cot}^3\left(\frac{x}{2}\right) = \left[\text{Cot}^3\left(\frac{x}{2}\right)\right]^3$$

$$\frac{dy}{dx} = \frac{d}{dx}\left[\text{Cot}\left(\frac{x}{2}\right)\right]^3 = 3\text{Cot}^2\left(\frac{x}{2}\right).\frac{d}{dx}\left[\text{Cot}\left(\frac{x}{2}\right)\right]$$

$$= 3\text{Cot}^2\left(\frac{x}{2}\right)\left[-\text{cosec}^2\left(\frac{x}{2}\right)\right]\frac{d}{dx}\left(\frac{x}{2}\right)$$

$$= -3\text{Cot}^2\left(\frac{x}{2}\right)\text{cosec}^2\left(\frac{x}{2}\right).\frac{1}{2}$$

$$= -\frac{3}{2}\text{Cot}^2\left(\frac{x}{2}\right)\text{cosec}^2\left(\frac{x}{2}\right)$$

19) Differentiate $\frac{1}{\sqrt[3]{2x+3}}$ **w.r.t ‘x’**

$$\text{Soln:- Let } y = \frac{1}{\sqrt[3]{2x+3}} = (2x+3)^{-\frac{1}{3}}$$

$$\frac{dy}{dx} = \frac{d}{dx}(2x+3)^{-\frac{1}{3}} = -\frac{1}{3}(2x+3)^{-\frac{1}{3}-1}.\frac{d}{dx}(2x+3)$$

$$= -\frac{1}{3(2x+3)^{\frac{4}{3}}}\times 2 = -\frac{2}{3\sqrt[3]{(2x+3)^4}}$$

20) Differentiate $\sin^n(ax)$ **w.r.t ‘x’.**

$$\text{Soln:- Let } y = \sin^n(ax)$$

$$\frac{dy}{dx} = n\sin^{n-1}(ax).\frac{d}{dx}(\sin ax)$$

$$= n\sin^{n-1}(ax).\cos(ax)\frac{d}{dx}(ax)$$

$$= n\sin^{n-1}(ax).\cos(ax)a$$

$$\therefore \frac{dy}{dx} = na\sin^{n-1}(ax).\cos(ax)$$

ಮಾರ್ಚ್ 11ರಿಂದ 5, 8 ಮತ್ತು 9ನೇ ತರಗತಿ ಪರೀಕ್ಷೆ

ಬೆಂಗಳೂರು: 2023–24ನೇ ಸಾಲಿನ 5, 8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳು (ಸಂಕಲನಾತ್ಮಕ ಮೌಲ್ಯಾಂಕನ/ಎಸ್‌ಎ–2) ಮಾರ್ಚ್ 11ರಿಂದ ಆರಂಭವಾಗಲಿವೆ.

5ನೇ ತರಗತಿಗೆ ಮಾರ್ಚ್ 11ರಿಂದ 14ರವರೆಗೆ, 8 ಹಾಗೂ 9ನೇ ತರಗತಿಗೆ ಮಾರ್ಚ್ 11ರಿಂದ 18ರವರೆಗೆ ಪರೀಕ್ಷೆಗಳು ನಡೆಯಲಿವೆ ಎಂದು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು ಹೇಳಿದೆ. ತಾತ್ಕಾಲಿಕ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಜಾಲತಾಣ http://kseab.karnataka.gov.in ನಲ್ಲಿ ಪ್ರಕಟಿಸಲಾಗಿದೆ.

ಎಸ್‌ಟಿ ಪಟ್ಟಿಯಿಂದ 'ವಾಲ್ಮೀಕಿ' ಹೊರಗೆ: ಪಿಐಎಲ್ ವಜಾ • ಇದು ಶಾಸನಸಭೆಯ ನೀತಿಯ ಭಾಗ: ನ್ಯಾಯಪೀಠ

ಮೀಸಲಾತಿ: ಮಧ್ಯಪ್ರವೇಶಕ್ಕೆ ಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಪಂಗಡದಿಂದ (ಎಸ್‌ಟಿ) ನಾಯಕ, ನಾಯ್ಕ್, ಬೇಡ, ಬೇಡರ, ವಾಲ್ಮೀಕಿ, ತಳವಾರ ಸಮುದಾಯಗಳನ್ನು ಕೈ ಬಿಡಬೇಕು' ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ 'ಡಾ.ಬಿ.ಆರ್. ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಒಕ್ಕೂಟ'ದ ಪರವಾಗಿ ಮಹೇಂದ್ರ ಕುಮಾರ್ ಮಿತ್ರಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ಈ ವಿಚಾರದಲ್ಲಿ ನ್ಯಾಯಾಲಯ ಮಧ್ಯ ಪ್ರವೇಶಿಸಲು ಬಯಸುವುದಿಲ್ಲ' ಎಂದು ಅರ್ಜಿ ತಿರಸ್ಕರಿಸಿದೆ.

ಮುಖ್ಯಾಂಶಗಳು

- ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ಪೀಠದ ಆದೇಶ
- 'ಕಡಲಿಗೂ ಒಂದು ದಂಡೆಯಿದೆ ಎನ್ನುವುದನ್ನು ಮರೆಯಬಾರದು'

'ಯಾವ ಸಮುದಾಯನ್ನು ಪರಿಶಿಷ್ಟ ಜಾತಿ ಅಥವಾ ಪಂಗಡವನ್ನಾಗಿ ಸೇರ್ಪಡೆ ಮಾಡಬೇಕು ಎಂಬುದು ಶಾಸನಸಭೆಯ ನೀತಿಯ ಭಾಗ. ಇದರ ಮೌಲ್ಯ ಮಾಪನವನ್ನು ನ್ಯಾಯಾಲಯ ಕೈಗೆತ್ತಿಕೊಳ್ಳಲು ಆಗದು. ಪಿಐಎಲ್ ವ್ಯಾಪ್ತಿಯು ಸಮುದ್ರದಷ್ಟು ವ್ಯಾಪಕವಾಗಿದೆ ಎಂಬುದು ಎಷ್ಟು ಸತ್ಯವೋ ಹಾಗೆಯೇ ಕಡಲಿಗೂ ಒಂದು ದಂಡೆಯಿದೆ ಎಂಬುದು ಅಷ್ಟೇ ಸತ್ಯ ಎನ್ನುವುದನ್ನು ಮರೆಯಬಾರದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.



'ಅಸಹಾಯಕ ಸಮುದಾಯಗಳನ್ನು ಮೇಲೆತ್ತಲು ಸಾಂವಿಧಾನಿಕ ನಿಬಂಧನೆಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಾಂವಿಧಾನಿಕ (ಪರಿಶಿಷ್ಟ ಪಂಗಡಗಳು) ಆದೇಶ ಕಾಯ್ದೆಯಲ್ಲಿ ಯಾವೆಲ್ಲಾ ಸಮುದಾಯಗಳನ್ನು ಸೇರ್ಪಡೆ ಮಾಡಬೇಕು ಮತ್ತು ಕೈಬಿಡಬೇಕು ಎಂಬುದಕ್ಕೆ ಶಾಸನ ರೂಪಿಸುವುದು ಸಂಸತ್‌ನ ವಿಶೇಷ ಅಧಿಕಾರವಾಗಿದೆ. ಈ ವಿಚಾರದಲ್ಲಿ ನ್ಯಾಯಾಲಯಗಳು ಸಂಸತ್ ಅಥವಾ ವಿಧಾನ ಮಂಡಲದ ಜೊತೆ ಅಭಿಪ್ರಾಯಗಳ ಪೈಪೋಟಿ ನಡೆಸಲಾಗದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಎಲ್ಲಿಯವರೆಗೆ ನಾಯಕ, ನಾಯ್ಕ್, ಬೇಡ, ಬೇಡರ, ವಾಲ್ಮೀಕಿ ಮತ್ತು ತಳವಾರ ಸಮುದಾಯಗಳು ಶಾಸನಾತ್ಮಕವಾಗಿ ಮುಂದುವರಿಯಲಿವೆಯೋ ಅಲ್ಲಿಯವರೆಗೆ ಆ ಸಮುದಾಯಗಳ ಸದಸ್ಯರು ಸಕ್ಷಮ ಪ್ರಾಧಿಕಾರದಿಂದ ಸಾಮಾಜಿಕ ಸ್ಥಿತಿಗತಿಯ ಪ್ರಮಾಣಪತ್ರ ಪಡೆಯಲು ಅರ್ಹರು. ಇದು ಶಿಕ್ಷಣ, ಉದ್ಯೋಗ, ಚುನಾವಣೆ ಮತ್ತು ಇತ್ಯಾದಿ ಮೀಸಲಾತಿಗೂ ಅನ್ವಯಿಸುತ್ತದೆ. ಇದೇ ಕಾರಣಕ್ಕಾಗಿಯೇ ಅವರು 1989ರ ಕಾಯ್ದೆ ಅಡಿ ದೌರ್ಜನ್ಯದಿಂದ ರಕ್ಷಣೆ ಪಡೆಯಲು ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ತಿಳಿಸಿದೆ.

ಕೋರಿಕೆ ಏನಿತ್ತು?: 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಅಡಿ ಪರಿಶಿಷ್ಟ ಜಾತಿಗಳ ಸದಸ್ಯರು ನೀಡಿದ ದೂರಿನ ಮೇರೆಗೆ ಪರಿಶಿಷ್ಟ ಪಂಗಡಗಳಿಂದ ಹೊರತಾದ ನಾಯಕ, ನಾಯ್ಕ್, ಬೇಡ, ಬೇಡರ, ವಾಲ್ಮೀಕಿ ಮತ್ತು ತಳವಾರ ಸಮುದಾಯಗಳ ವಿರುದ್ಧ ಪ್ರಕರಣ ದಾಖಲಿಸದಂತೆ ನಿರ್ದೇಶಿಸಬೇಕು.

ಈ ಸಮುದಾಯ ಗಳಿಗೆ ಪರಿಶಿಷ್ಟ ಪಂಗಡದ ಪ್ರಮಾಣಪತ್ರ ನೀಡದಂತೆ, ಅವರಿಗೆ ಶಿಕ್ಷಣ, ಉದ್ಯೋಗ, ಚುನಾವಣೆ ಅಥವಾ ಇತ್ಯಾದಿಗಳಲ್ಲಿ ಮೀಸಲಾತಿ ಸೌಕರ್ಯ ಕಲ್ಪಿಸಬಾರದು. ಭಾರತೀಯ ಮತ್ತು ರಾಜ್ಯ ಚುನಾವಣಾ ಆಯೋಗಗಳು ಈ ಸಮುದಾಯಗಳಿಗೆ ನೀಡಿದ ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ಸ್ವೀಕರಿಸದಂತೆ ನಿರ್ದೇಶಿಸಬೇಕು, ಅಲ್ಲದೆ, ಎಸ್‌ಸಿ-ಎಸ್‌ಟಿ ದೌರ್ಜನ್ಯ ನಿಷೇಧ ಕಾಯ್ದೆ ಅಡಿ ಇವರು ಪ್ರಕರಣ ದಾಖಲಿಸಲು ಮುಂದಾದರೆ ಅದನ್ನು ತಡೆಯಬೇಕು ಹಾಗೂ ಈ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳ ಸಮುದಾಯಗಳಿಂದ ಹೊರಗಿಡಬೇಕು' ಎಂದು ಅರ್ಜಿದಾರರು ಕೋರಿದ್ದರು

ಪಿಎಸ್‌ಐ ಅಕ್ರಮ: ಎಚ್‌ಡಿಕೆ, ಅಶ್ವತ್ಥ, ಯತ್ನಾಳಗೆ ಸಮನ್ಸ್

ಬೆಂಗಳೂರು: ಪಿಎಸ್‌ಐ 545 ಹುದ್ದೆಗಳ ನೇಮಕಾತಿ ಅಕ್ರಮ ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ಶಾಸಕರಾದ ಸಿ.ಎನ್. ಅಶ್ವತ್ಥನಾರಾಯಣ್, ಬಸನಗೌಡ ಪಾಟೀಲ ಯತ್ನಾಳ, ಮಾಜಿ ಶಾಸಕ ಬಸವರಾಜ ಧಡೇಸೂಗುರು ಸೇರಿದಂತೆ ಅವರಿಗೆ ಸಮನ್ಸ್ ಜಾರಿ ಮಾಡಲಾಗಿದೆ.

ಪಿಎಸ್‌ಐ ನೇಮಕಾತಿ ಅಕ್ರಮದ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ಏಕಸದಸ್ಯ ಆಯೋಗ ವಿಚಾರಣೆ ನಡೆಸುತ್ತಿದೆ. ಪ್ರಕರಣದ ಬಗ್ಗೆ ಮಾಹಿತಿ ಕಲೆಹಾಕುವುದಕ್ಕಾಗಿ ಸಮನ್ಸ್ ಜಾರಿ ಮಾಡಿರುವುದಾಗಿ ಗೊತ್ತಾಗಿದೆ.

ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದ ಆರೋಪದಡಿ ಕಾನ್‌ಸ್ಟೆಬಲ್ ಸಿ.ಎಸ್. ನಾಗೇಶ್ ಗೌಡನನ್ನು ಸಿಐಡಿ ಪೊಲೀಸರು ಬಂಧಿಸಿದ್ದರು. ಈತ, ಸಿ.ಎನ್. ಅಶ್ವತ್ಥನಾರಾಯಣ ಅವರ ಸಂಬಂಧಿ ಎಂಬುದಾಗಿ ಸುದ್ದಿಯಾಗಿತ್ತು. ಇದೇ ಸಂದರ್ಭದಲ್ಲಿ ಕುಮಾರಸ್ವಾಮಿ ಹಾಗೂ ಬಸನಗೌಡ ಪಾಟೀಲ ಯತ್ನಾಳ ಅವರು ಅಕ್ರಮದ ಬಗ್ಗೆ ಮಾತನಾಡಿದ್ದರು. ಅಕ್ರಮದಲ್ಲಿ ಕೊಪ್ಪಳ ಜಿಲ್ಲೆಯ ಕನಕಗಿರಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಬಸವರಾಜ ಧಡೇಸೂಗುರು ಭಾಗಿಯಾದ ಬಗ್ಗೆ ವಿಡಿಯೊಗಳು ಹರಿದಾಡಿದ್ದವು.

'ಪಿಎಸ್‌ಐ ಅಕ್ರಮದ ಬಗ್ಗೆ ಕುಮಾರಸ್ವಾಮಿ, ಅಶ್ವತ್ಥನಾರಾಯಣ್ ಹಾಗೂ ಅವರ ಸೋದರ ಸತೀಶ್, ಯತ್ನಾಳ, ಬಸವರಾಜ ಧಡೇಸೂಗುರು ಇತರರನ್ನು ವಿಚಾರಣೆ ನಡೆಸಬೇಕು' ಎಂದು ಕೋರಿ ಕೆಲ ವಕೀಲರು ಆಯೋಗಕ್ಕೆ ದೂರು ನೀಡಿದ್ದರು. ಅದನ್ನು ಆಧರಿಸಿ, ಎಲ್ಲರಿಗೂ ಇದೀಗ ಸಮನ್ಸ್ ನೀಡಲಾಗಿದೆ.

'ಬಿಜೆಪಿ, ಆರ್‌ಎಸ್‌ಎಸ್ ನಿಲುವು ಸ್ಪಷ್ಟಪಡಿಸಲಿ'

ಜಾಗತಿಕ ಲಿಂಗಾಯತ ಮಹಾಸಭಾ ಪ್ರಧಾನ ಕಾರ್ಯದರ್ಶಿ ಎಸ್‌.ಎಂ.ಜಾಮದಾರ ಆಗ್ರಹ

ಪ್ರಜಾವಾಣಿ ವಾರ್ತೆ



ಜಾಮದಾರ

ಬೆಳಗಾವಿ: 'ಲಿಂಗಾಯತರು ಹಿಂದೂಗಳಲ್ಲ. ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ ವೀರಶೈವ ಅಥವಾ ಲಿಂಗಾಯತ ಎಂದೇ ಬರೆಯಿಸಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾದ 24ನೇ ಮಹಾಧಿವೇಶನ ನಿರ್ಣಯ ಕೈಗೊಂಡಿದೆ. ಈ ಬಗ್ಗೆ ಬಿಜೆಪಿ, ಆರ್‌ಎಸ್‌ಎಸ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಪಂಚಾಚಾರ್ಯರು ತಮ್ಮ ನಿಲುವು ಸ್ಪಷ್ಟಪಡಿಸಬೇಕು' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಒತ್ತಾಯಿಸಿದರು.

'ವೀರಶೈವ ಮಹಾಸಭಾ ಸ್ಥಾಪನೆಯಾದ ದಿನದಿಂದ ರಾಜಕೀಯ ಅನುಕೂಲಕ್ಕೆ ತಕ್ಕಂತೆ ತನ್ನ ನಿಲುವು ಬದಲಿಸಿಕೊಳ್ಳುತ್ತಿದೆ. ದಾವಣಗೆರೆಯಲ್ಲಿ ನಡೆದ ಅಧಿವೇಶನದಲ್ಲಿ ಪಂಚಪೀಠಗಳ ಪೈಕಿ ಮೂವರು ಪಂಚಾಚಾರ್ಯರು ಭಾಗವಹಿಸಿದ್ದ ಸಂದರ್ಭ ಅಂಗೀಕರಿಸಿದ ನಿರ್ಣಯಗಳನ್ನು ನಾವೂ ಸ್ವಾಗತಿಸುತ್ತೇವೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಇದೇ ಪಂಚಾಚಾರ್ಯರು 2017ರಲ್ಲಿ ಲಿಂಗಾಯತರ ಸ್ವತಂತ್ರ ಧರ್ಮ ಹೋರಾಟ ವಿರೋಧಿಸಿದ್ದರು. 'ವೀರಶೈವ ಹಿಂದೂ ಧರ್ಮದ ಅವಿಭಾಜ್ಯ ಅಂಗ' ಎಂದಿದ್ದರು. ಈಗ ಅವರು ಈ ನಿರ್ಣಯ ಖಂಡಿಸುವರೇ? ಅದರ ವಿರುದ್ಧ ಹೋರಾಟ ನಡೆಸುವರೇ ಅಥವಾ ಸಮಸ್ತ ಲಿಂಗಾಯತರ ಭಾವನೆಗಳನ್ನು ಒಪ್ಪುವರೇ ಎಂಬುದನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು.

'2017ರಲ್ಲಿ ನಮ್ಮ ಹೋರಾಟ ಹತ್ತಿಕ್ಕಲು ಆಗಿನ ಮುಖ್ಯಮಂತ್ರಿ ಯಡಿಯೂರಪ್ಪ ಪಂಚಾಚಾರ್ಯರೊಂದಿಗೆ ಕೈಜೋಡಿಸಿದ್ದರು. ಆದರೆ, ದಾವಣಗೆರೆ ಅಧಿವೇಶನದಲ್ಲಿ ಅವರು, ಅವರ ಪುತ್ರ ಬಿ.ವೈ. ವಿಜಯೇಂದ್ರ ಭಾಷಣ ಮಾಡಿದ್ದರು. ಈಗ ನಿರ್ಣಯವನ್ನು ಯಡಿಯೂರಪ್ಪ ಒಪ್ಪುವರೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು' ಎಂದರು.

'ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಮಾನ್ಯತೆ ಪಡೆಯಲು 2017ರಲ್ಲಿ ಚಳವಳಿ ಕೈಗೊಂಡಾಗ ಕೇಂದ್ರ ಸಚಿವ ಅಮಿತ್ ಶಾ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಲಿಂಗಾಯತ ಧರ್ಮ ಹೋರಾಟ ವಿರೋಧಿಸಿದ್ದರು' ಎಂದರು.

'ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ಪಡೆಯುವ ಚಳವಳಿ ಮುಂದುವರಿದಿದೆ. ಸರ್ಕಾರದ ಗಮನ ಸೆಳೆಯಲು ಈಗ ನಾವು ಬೀದಿಗಿಳಿಯುವುದಿಲ್ಲ. ವಿಭಿನ್ನ ವಿಧಾನ ಅನುಸರಿಸುತ್ತೇವೆ' ಎಂದು ಹೇಳಿದರು.

'ಇದ್ದದ್ದು ಮೂರಲ್ಲ, ಒಂದೇ ಕುಟುಂಬ'

ದಾವಣಗೆರೆ: ವೀರಶೈವ-ಲಿಂಗಾಯತ ಮಹಾಸಭಾದ 24ನೇ ಅಧಿವೇಶನದಲ್ಲಿ ಪಾಲ್ಗೊಂಡಿದ್ದು ಮೂರು ಕುಟುಂಬಗಳಲ್ಲ. ಅಲ್ಲಿ ಇದ್ದಿದ್ದು ಒಂದೇ ಕುಟುಂಬ. ಅದು ವೀರಶೈವ-ಲಿಂಗಾಯತ ಕುಟುಂಬ' ಎಂದು ಅಧಿವೇಶನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ರಮೇಶ್ ಬಿ.ಜೆ ಅವರು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ತಿರುಗೇಟು ನೀಡಿದರು.

'ವೀರಶೈವ-ಲಿಂಗಾಯತ ಎನ್ನುವುದು ಒಂದೇ ಕುಟುಂಬ. ಯತ್ನಾಳ ಅವರೂ ಕೂಡ ಇದರ ಸದಸ್ಯರೇ. ಆದರೆ ಅಧಿವೇಶನಕ್ಕೆ ಬಂದಿಲ್ಲ. ಈ ರೀತಿಯ ಹೇಳಿಕೆಗಳು ಅವರಿಗೆ ಶೋಭೆ ತರುವುದಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಹೇಳಿದರು.

ಇವರು ಜಾತಿ ಕಾಲಂನಲ್ಲಿ ಏನು ಬರೆಸಿದ್ದಾರೆ –ಯತ್ನಾಳ

ವಿಜಯಪುರ: 'ಹಿಂದೂ' ಬಳಕೆ ಬೇಡ ಎನ್ನುವ ಇವರೆಲ್ಲ ತಮ್ಮ ಜಾತಿ ಕಾಲಂನಲ್ಲಿ ಏನು ಬರೆಸಿದ್ದಾರೆ? ಅವರ ಜಾತಿ ಕಾಲಂನಲ್ಲಿ 'ವೀರಶೈವ ಲಿಂಗಾಯತ' ಎಂದು ಬರೆಸಿಲ್ಲ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಂಗಳವಾರ ಕಿಡಿಕಾರಿದರು.

ವೀರಶೈವ-ಲಿಂಗಾಯತ ಮಹಾಸಭಾದ ನಿರ್ಣಯಗಳ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಈಗ ಪಂಚಮಸಾಲಿ ಸೇರಿ ಇತರ ಜನಾಂಗದವರಿಗೆ 'ವೀರಶೈವ ಲಿಂಗಾಯತ' ಎಂದು ಬರೆಸಲು ಹೇಳುತ್ತಿದ್ದಾರೆ. ಈ ಕಾರಣದಿಂದ ನಮಗೆ ಯಾವುದೇ ಸೌಲಭ್ಯಗಳು ಸಿಗಲ್ಲ' ಎಂದು ಹೇಳಿದರು.

'ಈ ದೇಶದಲ್ಲಿ ಇದ್ದೇವೆಯೆಂದರೆ ಮೊದಲು ನಾವು ಹಿಂದೂಗಳು. ವೀರಶೈವ ಲಿಂಗಾಯತ ಪ್ರತ್ಯೇಕ ಮಾಡಿ, ದೇಶದಲ್ಲಿ ಮತ್ತೊಂದು ಸಂಘರ್ಷಕ್ಕೆ ಅವಕಾಶ ಮಾಡಿಕೊಡಲ್ಲ' ಎಂದರು.

ಮರ್ಯಾದೆಗೆ ಅಂಜಿ ಮಗಳ ಕೊಂದ ತಂದೆ

ಪ್ರಜಾವಾಣಿ ವಾರ್ತೆ



ಅರ್ಚಿತಾ

ನಂಗಲಿ (ಕೋಲಾರ ಜಿಲ್ಲೆ): ಮುಳಬಾಗಿಲು ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ ಏಳು ತಿಂಗಳ ಹಿಂದೆ ನಡೆದಿದ್ದ 'ಮರ್ಯಾದೆಗೇಡು ಹತ್ಯೆ' ಈಗ ಬಹಿರಂಗವಾಗಿದೆ. ಪತಿ ಜತೆ ಸಂಸಾರ ನಡೆಸಲು ನಿರಾಕರಿಸಿದ್ದ ಮಗಳನ್ನು ಮರ್ಯಾದೆಗೆ ಅಂಜಿ ತೋಟದಲ್ಲಿ ಕೊಂದು, ಸುಟ್ಟು ಹಾಕಿದ್ದ ತಂದೆಯನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಥಮ ಪಿಯುಸಿ ಓದುತ್ತಿದ್ದ ಮರವೇಮನೆ ಗ್ರಾಮದ ಅರ್ಚಿತಾ (17) ಕೊಲೆಯಾದ ಯುವತಿ. ಮೇ 21ರಂದು ಗಂಡನ ಮನೆಯಿಂದ ಕರೆ ತರುವಾಗ ಆಕೆಯ ತಂದೆ ರವಿ, ತೋಟದ ಮನೆಗೆ ಕರೆದೊಯ್ದು ಬಡಿಗೆಯಿಂದ ಹೊಡೆದು ಕೊಂದಿದ್ದು, ಅಲ್ಲಿಯೇ ಸುಟ್ಟುಹಾಕಿದ್ದ.

ತಿಗಳ ಸಮುದಾಯದ ಅರ್ಚಿತಾ ತನ್ನ ಸಹೋದರ ಸಂಬಂಧಿ ಯುವಕನನ್ನೇ (ಚಿಕ್ಕಪ್ಪನ ಮಗ) ಪ್ರೀತಿಸುತ್ತಿದ್ದಳು. ಈ ವಿಚಾರ ಗೊತ್ತಾಗುತ್ತಲೇ ಪೋಷಕರು ವೇಮಗಲ್ ಬಳಿಯ ಜೋಡಿ ಕೃಷ್ಣಪುರ ಗ್ರಾಮದ ತಮ್ಮದೇ ಸಮುದಾಯದ ಯುವಕನೊಂದಿಗೆ ಮದುವೆ ಮಾಡಿಕೊಟ್ಟಿದ್ದರು. 'ಪತಿ ಜತೆ ಸಂಸಾರ ನಡೆಸಲು ನಿರಾಕರಿಸಿದ ಮಗಳನ್ನು ತಂದೆಯೇ ಹೋಗಿ ಮೇ 21ರಂದು ವಾಪಸ್ ಕರೆ ತಂದಿದ್ದ. ಗ್ರಾಮಕ್ಕೆ ಬರುವಾಗ ತೋಟದ ಮನೆಗೆ ಕರೆದೊಯ್ದು ಕೊಂದು ಹಾಕಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಮೂಗರ್ಜಿಯಿಂದ ಬಯಲು: ಅರ್ಚಿತಾ ಕಾಣಿಸುತ್ತಿಲ್ಲ ಎಂದು ನಂಗಲಿ ಪೊಲೀಸ್ ಠಾಣೆಗೆ ಮೂಗರ್ಜಿಯೊಂದು ಬಂದಿತ್ತು. ಪೊಲೀಸರು ತನಿಖೆ ಆರಂಭಿಸುತ್ತಿದ್ದಂತೆಯೇ, 'ಮಗಳು ಕಾಣೆಯಾಗಿದ್ದಾಳೆ' ಎಂದು ಯುವತಿಯ ತಂದೆ ಪೊಲೀಸರಿಗೆ ದೂರು ನೀಡಿದ್ದರು.

'ಯುವತಿಯ ತಂದೆಯನ್ನು ನಾಲ್ಕು ದಿನದ ಹಿಂದೆ ಠಾಣೆಗೆ ಕರೆಸಿ ವಿಚಾರಣೆ ನಡೆಸಿದಾಗ, ಮರ್ಯಾದೆಗೆ ಅಂಜಿ ಮಗಳನ್ನು ತಾನೇ ಕೊಂದಿದ್ದಾಗಿ ಯುವತಿಯ ತಂದೆ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅರ್ಚಿತಾಳನ್ನು ಕೊಂದು ಸುಟ್ಟು ಹಾಕಿದ ಸ್ಥಳಕ್ಕೆ ಎಫ್‌ಎಸ್‌ಎಲ್ ತಂಡದೊಂದಿಗೆ ತೆರಳಿದ ಪೊಲೀಸರಿಗೆ ಸುಟ್ಟ ಮೂಳೆಗಳು ಲಭಿಸಿವೆ.

'ಕೇಂದ್ರ ನಾಯಕರಿಗೂ ಪಾಲಿದೆಯೇ?'

ಒಂದನೇ ಪುಟದಿಂದ..

'ಯತ್ನಾಳ ಅವರು ಹಿಟ್ ಎಂಡ್ ರನ್ ಮಾಡಬಾರದು. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕೆಂಬ ಬದ್ಧತೆಯನ್ನು ಅವರು ಹೊಂದಿದ್ದರೆ ತಮ್ಮ ಆರೋಪವನ್ನು ತಾರ್ಕಿಕ ಅಂತ್ಯದೆಡೆಗೆ ಒಯ್ಯಬೇಕು. ಭ್ರಷ್ಟಾಚಾರದ ಬಗ್ಗೆ ತಮ್ಮ ಬಳಿ ಇರುವ ಎಲ್ಲ ಮಾಹಿತಿಯನ್ನು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದಲ್ಲಿ ರಚಿಸಲಾಗಿರುವ ತನಿಖಾ ಆಯೋಗಕ್ಕೆ ಒಪ್ಪಿಸಬೇಕು' ಎಂದೂ ಅವರು ಹೇಳಿದ್ದಾರೆ.

ಯತ್ನಾಳ ಅವರು ಬಿ.ಎಸ್. ಯಡಿಯೂರಪ್ಪ, ಅವರ ಪುತ್ರ ಬಿ.ವೈ ವಿಜಯೇಂದ್ರ ಹಾಗೂ ಹಿಂದಿನ ಸರ್ಕಾರದ ಸಂಪುಟದಲ್ಲಿದ್ದ ಕೆಲವು ಸಚಿವರ ವಿರುದ್ಧ ನಿರಂತರವಾಗಿ ಭ್ರಷ್ಟಾಚಾರದ ಆರೋಪ ಮಾಡುತ್ತಾ ಬಂದಿದ್ದಾರೆ. ಈ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ರಾಜ್ಯದ ಬಿಜೆಪಿ ನಾಯಕರು ಈ ಬಗ್ಗೆ ಮೌನವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ ಎಂದೂ ಅವರು ಕುಟುಕಿದ್ದಾರೆ.

'ಶಿಕ್ಷಕರ ಜೇಬಿಗೆ ಹೊರೆಯಾದ ಮೊಟ್ಟೆ


ಒಂದನೇ ಪುಟದಿಂದ...

ಈ ಹಣವನ್ನು ಶಾಲಾ ಶಿಕ್ಷಣ ಇಲಾಖೆ ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಸಮಿತಿಯ ಜಂಟಿ ಖಾತೆಗೆ ಹಾಕುತ್ತದೆ. ಅದರಲ್ಲಿ ಮೊಟ್ಟೆ ಬೇಯಿಸಲು ಇಂಧನ ವೆಚ್ಚ 30 ಪೈಸೆ, ಮೊಟ್ಟೆಯ ಗಟ್ಟಿಪದರ (ವೋಡು) ಸುಲಿದು ಕೊಡುವ ಬಿಸಿಯೂಟ ತಯಾರಕರು ಮತ್ತು ಸಹಾಯಕರಿಗೆ 30 ಪೈಸೆ, ಸಾಗಣೆ ವೆಚ್ಚ 20 ಪೈಸೆ ನೀಡಬೇಕಿದೆ. ಮೊಟ್ಟೆ ಖರೀದಿಗೆ ಉಳಿಯುವುದು ₹5.20 ಮಾತ್ರ.

ದರ–ಹೊಂದಾಣಿಕೆ ಕಷ್ಟ: ನವೆಂಬರ್‌ನಲ್ಲಿ ₹6 ಇದ್ದ ಮೊಟ್ಟೆಯ ಚಿಲ್ಲರೆ ಮಾರಾಟ ದರ ಪ್ರಸಕ್ತ ತಿಂಗಳು ₹7 ದಾಟಿದೆ. ಮೊಟ್ಟೆಯ ಬೇಡಿಕೆ ಹೆಚ್ಚುತ್ತಲೇ ಇದ್ದು, ದರ ಇನ್ನಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಇಂತಹ ಸಮಯದಲ್ಲಿ ಶಿಕ್ಷಕರು ಮೊಟ್ಟೆಯ ವ್ಯತ್ಯಾಸದ ಹಣ ಭರಿಸುವುದು ಕಷ್ಟವಾಗಿದೆ.

'ಕಡಿಮೆ ಮಕ್ಕಳು ಇರುವ ಶಾಲೆಗಳಲ್ಲಿ ಶಿಕ್ಷಕರು ಹೇಗೋ ತಾವೇ ನಿಭಾಯಿಸುತ್ತಾರೆ. ನಮ್ಮ ಶಾಲೆಯಲ್ಲಿ 300ಕ್ಕೂ ಹೆಚ್ಚು ಮಕ್ಕಳು ಇದ್ದಾರೆ. ತಿಂಗಳಿಗೆ ₹5 ಸಾವಿರ ಹೆಚ್ಚುವರಿ ಹೊಂದಾಣಿಕೆ ಮಾಡಬೇಕಿದೆ. ಕೆಲ ಪೋಷಕರು ಒಂದೆರಡು ಬಾರಿ ಸಹಾಯ ಮಾಡಿದರು. ಒಂದಷ್ಟು ವಾರ ಶಿಕ್ಷಕರೇ ಭರಿಸಿದ್ದೇವೆ' ಎನ್ನುತ್ತಾರೆ ಬೆಂಗಳೂರು ಗ್ರಾಮಾಂತರ ಹಿರಿಯ ಪ್ರಾಥಮಿಕ ಶಾಲೆಯೊಂದರ ಮುಖ್ಯ ಶಿಕ್ಷಕ.

'ವಾರದಲ್ಲಿ ಎರಡು ದಿನ ನಾವೇ ಅಂಗಡಿ ಹೋಗಿ ತೆಗೆದುಕೊಂಡು ಬರಬೇಕು. ಶಾಲೆಯಿಂದ ಅಂಗಡಿಗೆ 4.5 ಕಿ.ಮೀ ಆಗುತ್ತದೆ. ಶಾಲೆ ಬಳಿಗೆ ತಂದುಕೊಡಲು ಹೆಚ್ಚು ಹಣ ಕೇಳುತ್ತಾರೆ. ಕೆಲವೊಮ್ಮೆ ಹಲವು ಮೊಟ್ಟೆಗಳು ಒಡೆದು ಹೋಗುತ್ತವೆ. ಒಡೆದ, ಹಾಳಾದ ಮೊಟ್ಟೆಗಳಿಗೂ ಶಿಕ್ಷಕರೇ ಜವಾಬ್ದಾರರು' ಎನ್ನುತ್ತಾರೆ ಹೊಸನಗರ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯೊಂದರ ಶಿಕ್ಷಕ.



ಚಳಿಗಾಲ, ವರ್ಷಾಂತ್ಯದಲ್ಲಿ ಮೊಟ್ಟೆ ಧಾರಣೆ ಏರಿಕೆ ಸಹಜ. ಹಾಗಾಗಿ, ಸರಾಸರಿ ದರ ನಿಗದಿ ಮಾಡಿ 10 ತಿಂಗಳಿಗೆ ನೀಡಲಾಗುತ್ತದೆ. ಚಿಕ್ಕಿ, ಬಾಳೆಹಣ್ಣಿಗೂ ₹6 ಇದೆ. ಎಲ್ಲ ಅಂಶ ಪರಿಗಣಿಸಿದರೆ ಹೊರೆಯಾಗದು

ಬಿ.ಬಿ.ಕಾವೇರಿ, ಆಯುಕ್ತೆ, ಶಿಕ್ಷಣ ಇಲಾಖೆ

ಪ್ರತಿ ತಿಂಗಳು ಮಾರುಕಟ್ಟೆ ಧಾರಣೆಗೆ ಅನುಗುಣವಾಗಿ ಸರ್ಕಾರ ಹಣ ಬಿಡುಗಡೆ ಮಾಡಬೇಕು. ಟೆಂಡರ್ ಮೂಲಕವೇ ಶಾಲೆಗಳಿಗೆ ಮೊಟ್ಟೆ ಪೂರೈಸಬೇಕು

ಶಿವರಾಜ್ ಡಿ.ಪ್ರಭು

ಪೋಷಕ, ಸಾಮಾಜಿಕ ಕಾರ್ಯಕರ್ತ

ಮೊಟ್ಟೆ ಪೂರೈಸದ ಇಸ್ಕಾನ್

ಬೆಂಗಳೂರಿನ ಶಾಲೆಗಳಿಗೆ ಇಸ್ಕಾನ್ ಹೊರತುಪಡಿಸಿ, ಬಿಸಿಯೂಟ ಪೂರೈಸುವ ಇತರೆ ಸಂಸ್ಥೆಗಳು ಮೊಟ್ಟೆಯನ್ನೂ ಸರಬರಾಜು ಮಾಡುತ್ತಿವೆ. ಬೆಂಗಳೂರು ನಗರದ ಶೇ 70ರಷ್ಟು ಶಾಲೆಗಳಿಗೆ ಇಸ್ಕಾನ್ ಬಿಸಿಯೂಟ ಪೂರೈಸುತ್ತದೆ. ಇಂತಹ ಶಾಲೆ ಗಳ ಖಾತೆಗೆ ಶಾಲಾ ಶಿಕ್ಷಣ ಇಲಾಖೆ ಮೊಟ್ಟೆಯ ಹಣ ಹಾಕುತ್ತದೆ. ಶಿಕ್ಷಕರೇ ಮೊಟ್ಟೆ ದರದ ವ್ಯತ್ಯಾಸದ ಹೆಚ್ಚುವರಿ ಹಣ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ.

ಬಾಳೆಹಣ್ಣು, ಚಿಕ್ಕಿಗೆ ಆದ್ಯತೆ: ಬೇಡಿಕೆ ಸಲ್ಲಿಸುವ ಮಕ್ಕಳಿಗೆ ಕಡ್ಡಾಯವಾಗಿ ಮೊಟ್ಟೆ ನೀಡಬೇಕು ಎಂಬ ನಿಯಮವಿದ್ದರೂ, ದರ ಏರಿಕೆಯ ಕಾರಣ ಗ್ರಾಮೀಣ ಪ್ರದೇಶಗಳಲ್ಲಿ ಸುಲಭವಾಗಿ, ಕಡಿಮೆ ದರಕ್ಕೆ ದೊರೆಯುವ ಬಾಳೆಹಣ್ಣು ನೀಡಲು ಹೆಚ್ಚಿನ ಶಾಲೆಗಳು ಒಲವು ತೋರಿವೆ. ಹಲವು ಸರ್ಕಾರಿ ಶಾಲೆಗಳ ಶಿಕ್ಷಕರು ಮೇಲಧಿಕಾರಿಗಳ ಭಯದಿಂದ ತಾವೇ ಹಣ ಹಾಕಿ ಮೊಟ್ಟೆಯ ವ್ಯತ್ಯಾಸದ ದರ ಹೊಂದಾಣಿಕೆ ಮಾಡಿಕೊಂಡರೆ, ಕೆಲ ಶಾಲೆಗಳು ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚಿಕ್ಕಿ, ಬಾಳೆಹಣ್ಣು ನೀಡುತ್ತಿವೆ. ಕೆಲ ಅನುದಾನಿತ ಶಾಲೆಗಳಲ್ಲಿ ವಾರಕ್ಕೆ ಒಂದೇ ದಿನ ಮೊಟ್ಟೆ ನೀಡುತ್ತಿರುವ ಪ್ರಕರಣಗಳಿವೆ.

'ನಮ್ಮ ಶಾಲೆಯಲ್ಲಿ ಮೊಟ್ಟೆ ತಿನ್ನುವವರ ಸಂಖ್ಯೆ ಕಡಿಮೆ ಇರುವ ಕಾರಣ ಹೊಂದಾಣಿಕೆಯಾಗುತ್ತಿದೆ. ನೆರೆಯ ಶಾಲೆಗಳಲ್ಲಿ ಮೊಟ್ಟೆಗೆ ಬೇಡಿಕೆ ಇದ್ದರೂ, ಅನಿವಾರ್ಯವಾಗಿ ಬಾಳೆಹಣ್ಣು ನೀಡುತ್ತಿದ್ದಾರೆ' ಎನ್ನುತ್ತಾರೆ ಧಾರವಾಡದ ಸರ್ಕಾರಿ ಶಾಲೆಯೊಂದರ ಶಿಕ್ಷಕಿ.

'ಯುವ ನಿಧಿ' ನೋಂದಣಿಗೆ ಚಾಲನೆ ನೀಡಿದ ಸಿ.ಎಂ ಸಿದ್ದರಾಮಯ್ಯ

'ಮೋದಿ ಮಾತು ಸುಳ್ಳಾಗಿಸಿದ್ದೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಸ್ಥಿರತೆ ಕಾಯ್ದುಕೊಂಡೇ ಐದೂ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಆ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ ಮಾತನ್ನು ಸುಳ್ಳಾಗಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ನಡೆದ ಸಮಾರಂಭದಲ್ಲಿ 'ಯುವ ನಿಧಿ' ಯೋಜನೆ ಫಲಾನುಭವಿಗಳ ನೋಂದಣಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತಂದರೆ ಕರ್ನಾಟಕ ಸರ್ಕಾರ ದಿವಾಳಿಯಾಗುತ್ತದೆ ಎಂದು ಮೋದಿ ರಾಜಸ್ತಾನದಲ್ಲಿ ಹೇಳಿದ್ದರು. ಐದು ಗ್ಯಾರಂಟಿಗಳು ಜಾರಿಯಾದರೂ ರಾಜ್ಯವು ಆರ್ಥಿಕವಾಗಿ ಸದೃಢವಾಗಿದೆ' ಎಂದರು.

ಮೋದಿ ಅವರೇನು ಆರ್ಥಿಕ ತಜ್ಞರಾ? 12 ವರ್ಷ ಮುಖ್ಯಮಂತ್ರಿಯಾಗಿದ್ದು, 10 ವರ್ಷದಿಂದ ಪ್ರಧಾನಿಯಾಗಿರುವ ಮೋದಿ ಗ್ಯಾರಂಟಿಗಳನ್ನು ವಿರೋಧಿಸಿದ್ದರು. ಅದಕ್ಕೆ ತದ್ವಿರುದ್ಧವಾಗಿ ಛತ್ತೀಸ್‌ಗಢ, ರಾಜಸ್ತಾನ ಮತ್ತು ತೆಲಂಗಾಣದಲ್ಲಿ ಗ್ಯಾರಂಟಿಗಳನ್ನು ಪ್ರಕಟಿಸಿದ್ದರು ಎಂದು ಹೇಳಿದರು.

ಸುಳ್ಳುಗಾರ ಪ್ರಧಾನಿ: ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಜಿಸುವುದಾಗಿ ಮೋದಿ ಭರವಸೆ ನೀಡಿದ್ದರು. ಹತ್ತು ವರ್ಷಕ್ಕೆ 20 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಎಲ್ಲಿ ಉದ್ಯೋಗ ಸೃಷ್ಟಿಯಾಗಿದೆ? ಮೋದಿ ಈ ದೇಶ ಕಂಡ ಅತ್ಯಂತ ಸುಳ್ಳುಗಾರ ಪ್ರಧಾನಿ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

'ಯುವ ನಿಧಿ ಫಲಾನುಭವಿಗಳಿಗೆ ಆರು ತಿಂಗಳವರೆಗೆ ನಿರುದ್ಯೋಗ ಭತ್ಯೆಯ ಜತೆಗೆ ಕೌಶಲಾಭಿವೃದ್ಧಿ ತರಬೇತಿಯನ್ನೂ ನೀಡಲಾಗುವುದು. ಮಾತು ಕೊಟ್ಟಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು. ಹೂಡಿಕೆ ಆಕರ್ಷಿಸುವ ಮೂಲಕ ಖಾಸಗಿ ವಲಯದ ಉದ್ಯೋಗ ಸೃಜನೆಗೂ ಒತ್ತು ನೀಡಲಾಗುವುದು ಎಂದು ತಿಳಿಸಿದರು.

ಕೌಶಲಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು. ಸಚಿವರಾದ ರಾಮಲಿಂಗಾ ರೆಡ್ಡಿ, ಪ್ರಿಯಾಂಕ್ ಖರ್ಗೆ, ಡಾ.ಎಂ.ಸಿ. ಸುಧಾಕರ್, ಬಿ. ನಾಗೇಂದ್ರ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜು, ನಸೀರ್ ಅಹಮದ್, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷ ರಾಜೀವ್ ಗೌಡ ಉಪಸ್ಥಿತರಿದ್ದರು.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಯುವ ನಿಧಿ' ಯೋಜನೆಯ ಪೋಸ್ಟರ್ ಬಿಡುಗಡೆ ಮಾಡಿದರು. ಸಚಿವರಾದ ಬಿ. ನಾಗೇಂದ್ರ, ಪ್ರಿಯಾಂಕ್ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಡಾ. ಶರಣ ಪ್ರಕಾಶ್ ಪಾಟೀಲ, ಡಾ.ಎಂ.ಸಿ. ಸುಧಾಕರ್ ಸಮಾರಂಭದಲ್ಲಿದ್ದರು – ಪ್ರಜಾವಾಣಿ ಚಿತ್ರ

ಕವನ ವಾಚಿಸಿದ ಡಿಸಿಎಂ ಡಿಕೆಶಿ

'ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯ್ತು, ಅರಳಿದ ಕಮಲ ಉದುರಿ ಹೋಯಿತು...' ಎಂಬ ಕವನವನ್ನು ವೇದಿಕೆಯಲ್ಲೇ ಬರೆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಭಾಷಣದ ಮಧ್ಯೆ ಅದನ್ನು ವಾಚಿಸಿದರು.

'ಕಷ್ಟ ಕಾಲದಲ್ಲಿ ನೆರವಿಗೆ ಬಂದವರು, ನಿಮ್ಮ ಮನೆಯ ಜ್ಯೋತಿ ಬೆಳಗಿಸಿದವರನ್ನು ಮರೆಯಬೇಡಿ' ಎಂದು ಸಭಾಂಗಣದಲ್ಲಿದ್ದ ಯುವಕ, ಯುವತಿಯರಲ್ಲಿ ಮನವಿ ಮಾಡಿದರು

'₹40 ಸಾವಿರ ಕೋಟಿ ಅಕ್ರಮ'

ಒಂದನೇ ಪುಟದಿಂದ

'ಸತ್ಯವನ್ನು ಹೇಳಿದರೆ ಎಲ್ಲರಿಗೂ ಭಯ. ಎಲ್ಲರೂ ಕಳ್ಳರಾದರೆ, ರಾಜ್ಯ ಮತ್ತು ದೇಶವನ್ನು ಯಾರು ಉಳಿಸುತ್ತಾರೆ ಪ್ರಧಾನಿ ಮೋದಿ ಅವರು ಇದ್ದಾರೆ ಎಂಬ ಕಾರಣಕ್ಕೆ ದೇಶ ಉಳಿದಿದೆ. ಈ ದೇಶದಲ್ಲಿ ಹಿಂದೆ ಬಹಳ ಹಗರಣಗಳಾಗಿವೆ' ಎಂದರು.

'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣ ಜನವರಿ 5ರಂದು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ. ಅವರ ನಂತರ ಅಪ್ಪಾಜಿಯದ್ದೇ ಪ್ರಕರಣ ಹೊರ ತೆಗೆಯುವೆ' ಎಂದು ಪರೋಕ್ಷವಾಗಿ ಬಿ.ಎಸ್.ಯಡಿಯೂರಪ್ಪ ಅವರ ಬಗ್ಗೆ ಹೇಳಿದರು.

ಯತ್ನಾಳ ವಿರುದ್ಧ ಪ್ರತಿಭಟನೆ

ಮಂಡ್ಯ: 'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧ ಲಘುವಾಗಿ ಮಾತನಾಡಿದ್ದಾರೆ' ಎಂದು ಬಿಎಸ್‌ವೈ ಬೆಂಬಲಿಗರು ಇಲ್ಲಿ ಪ್ರತಿಭಟಿಸಿದರು.

'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಬಾಯಿಗೆ ಬೀಗ ಹಾಕಿಸಬೇಕು' ಎಂದು ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಅಂಚೆ ಮೂಲಕ ಮನವಿ ರವಾನಿಸಿದರು.

ಜಿಲ್ಲಾ ಅಂಚೆ ಕಚೇರಿ ಎದುರು ಸೇರಿದ ಕಾರ್ಯಕರ್ತರು, ಯತ್ನಾಳ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು. 'ದುರ್ವರ್ತನೆ ತೋರುತ್ತಿರುವ ಅವರಿಗೆ ವರಿಷ್ಠರು ಬುದ್ಧಿ ಹೇಳಬೇಕು. ಆಗದಿದ್ದರೆ, ಅವರನ್ನು ಸರಿ ದಾರಿಗೆ ತರಲು ನಮಗೇ ಅವಕಾಶ ಕೊಡಬೇಕು' ಎಂದು ಆಗ್ರಹಿಸಿದರು.

'ಲೋಕಸಭಾ ಚುನಾವಣೆ ವೇಳೆಗೆ ಯತ್ನಾಳ ಹೇಳಿಕೆಗಳು ಗಣನೆಗೆ ಬರುವುದರಿಂದ ಅದಕ್ಕೆ ಅವಕಾಶ ನೀಡಬಾರದು. ಪಕ್ಷದೊಳಗಿರುವವರೇ ಇರಿಸುಮುರಿಸಿನ ಹೇಳಿಕೆ ನೀಡಬಾರದು' ಎಂದು ಒತ್ತಾಯಿಸಿದರು.

ರೈತರ ಬಗ್ಗೆ ಗೌರವದಿಂದ ಮಾತಾಡಿ: ಮುಖ್ಯಮಂತ್ರಿ

ಬೆಂಗಳೂರು: 'ರೈತರ ಬಗ್ಗೆ ಎಚ್ಚರಿಕೆಯಿಂದ ಮಾತ್ರವಲ್ಲ, ಗೌರವದಿಂದ ಮಾತನಾಡಬೇಕು. ಹಗುರ ಮಾತುಗಳ ಮೂಲಕ ರೈತರನ್ನು ಅವಮಾನಿಸಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಂಪುಟ ಸದಸ್ಯರಿಗೆ ತಾಕೀತು ಮಾಡಿದ್ದಾರೆ.

'ರೈತರು ಪರಿಹಾರಕ್ಕಾಗಿ ಬರ ಬಯಸುತ್ತಾರೆ' ಎಂಬ ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿಕೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಅಧಿಕೃತ ಖಾತೆಗಳಲ್ಲಿ ಮಂಗಳವಾರ ಪ್ರತಿಕ್ರಿಯಿಸಿರುವ ಅವರು, 'ರೈತರನ್ನು ಗೌರವಿಸುವ ಸಂಹಿತೆಯನ್ನು ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲಿಸಬೇಕು' ಎಂದಿದ್ದಾರೆ.

ಶಿವಾನಂದ ಪಾಟೀಲ ಅವರು ರೈತರನ್ನು ಅವಮಾನಿಸಬೇಕೆಂಬ ದುರುದ್ದೇಶದಿಂದ ಮಾತನಾಡಿರಲಾರರು. ರೈತರೊಂದಿಗಿನ ಸಲಿಗೆಯ ಕಾರಣಕ್ಕಾಗಿ ಆ ರೀತಿ ಮಾತನಾಡಿದ್ದಾರೆ. ಆದರೆ, ಅದನ್ನು ಸಮಸ್ತ ರೈತ ಸಮುದಾಯಕ್ಕೆ ಅನ್ವಯಿಸುವಾಗ ವಿಪರೀತ ಅರ್ಥಕ್ಕೆ ಕಾರಣವಾಗುತ್ತದೆ. ಈ ರೀತಿಯ ವರ್ತನೆ ಸಲ್ಲದು ಎಂದು ಹೇಳಿದ್ದಾರೆ.

'ಬೀಜ, ಗೊಬ್ಬರ ಕೇಳಿದ ರೈತರ ಮೇಲೆ ಗುಂಡಿಕ್ಕಿದ, ರೈತರ ಸಾಲ ಮನ್ನಾ ಬೇಡಿಕೆಯನ್ನು ನಿರಾಕರಿಸಿದ ಬಿಜೆಪಿ ನಾಯಕರಿಗೆ ಈ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಮಾತನಾಡುವ ನೈತಿಕತೆ ಇದೆಯೆ? ಬರಗಾಲದಲ್ಲಿ ರಾಜ್ಯದ ರೈತರಿಗೆ ಕೇಂದ್ರ ಸರ್ಕಾರ ಚಿಕ್ಕಾಸಿನ ಪರಿಹಾರ ನೀಡಿಲ್ಲ. ಆದರೂ ನಾವು ರೈತರ ಮೇಲಿನ ಪ್ರೀತಿಯಿಂದ ಅನೇಕ ಕಾರ್ಯಕ್ರಮ ಅನುಷ್ಠಾನಕ್ಕೆ ತಂದಿದ್ದೇವೆ' ಎಂದಿದ್ದಾರೆ. 'ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸಾಲ ಮನ್ನಾ ಮಾಡುವಂತೆ ರೈತರು ಒತ್ತಾಯಿಸುತ್ತಿದ್ದಾರೆ. ಆದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲು ಏನೆಲ್ಲ ಕಸರತ್ತು ಮಾಡಿತ್ತು ಎನ್ನುವುದನ್ನು ಇಡೀ ದೇಶ ನೋಡಿದೆ. ಈಗ ಬಿಜೆಪಿ ನಾಯಕರು ತಿರುಚಿದ ಹೇಳಿಕೆಗಳನ್ನು ಹಿಡಿದುಕೊಂಡು ಎದೆ ಬಡಿದುಕೊಳ್ಳುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

ಸೊರಬದಲ್ಲಿ 'ಬಂಗಾರಧಾಮ' ಲೋಕಾರ್ಪಣೆ; ಒಡನಾಡಿಗಳಿಂದ ಸಾಧನೆಗಳ ಮೆಲುಕು


'ಜನನಾಯಕ' ಬಂಗಾರಪ್ಪ ವ್ಯಕ್ತಿತ್ವದ ಸ್ಮರಣೆ

ಪ್ರಜಾವಾಣಿ ವಾರ್ತೆ

ಸೊರಬ (ಶಿವಮೊಗ್ಗ): ಇಲ್ಲಿನ ಶಿರಾಳಕೊಪ್ಪ ರಸ್ತೆಯ ಕೆ.ಇ.ಬಿ ಕಾಲೊನಿಯಲ್ಲಿ ನಿರ್ಮಿಸಿರುವ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಹಾಗೂ ಅವರ ಪತ್ನಿ ಶಕುಂತಲಾ ಅವರ ಸಮಾಧಿ ಸ್ಥಳ 'ಬಂಗಾರಧಾಮ'ದ ಲೋಕಾರ್ಪಣೆ ಹಾಗೂ ಬಂಗಾರಪ್ಪ ಅವರ 12ನೇ ಪುಣ್ಯಸ್ಮರಣೆ ಕಾರ್ಯಕ್ರಮ ಮಂಗಳವಾರ ನಡೆಯಿತು.

ಬಂಗಾರಪ್ಪ ಫೌಂಡೇಷನ್ ಹಾಗೂ ವಿಚಾರ ವೇದಿಕೆಯು ಆಯೋಜಿಸಿದ್ದ ಸಮಾರಂಭಕ್ಕೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಅಭಿಮಾನಿಗಳು, ಒಡನಾಡಿಗಳು ಹಾಗೂ ಗಣ್ಯರು ಸಾಕ್ಷಿಯಾದರು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಬಂಗಾರಪ್ಪ ಹಾಗೂ ಶಕುಂತಲಾ ಅವರ ಸಮಾಧಿಗಳಿಗೆ ಪುಷ್ಪ ಅರ್ಪಿಸಿ ಪುಣ್ಯಸ್ಮರಣೆಗೆ ಚಾಲನೆ ನೀಡಿದರು.



ಸೊರಬದ ಬಂಗಾರಧಾಮದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಎಸ್‌.ಬಂಗಾರಪ್ಪ ಅವರ ಸಮಾಧಿಗೆ ಸಚಿವ ಎಚ್‌.ಕೆ.ಪಾಟೀಲ ಪುಷ್ಪ ಸಮರ್ಪಿಸಿದರು. ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್‌.ಎಸ್‌.ಸುಂದರೇಶ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಸಚಿವ ಮಧು ಬಂಗಾರಪ್ಪ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖಂಡ ಎಸ್‌.ಪಿ.ಶೇಷಾದ್ರಿ, ಶಾಸಕ ಭೀಮಣ್ಣ ನಾಯ್ಕ ಕೂಡ ಗೌರವ ಸಲ್ಲಿಸಿದರು –ಪ್ರಜಾವಾಣಿ ಚಿತ್ರ/ಶಿವಮೊಗ್ಗ ನಾಗರಾಜ್

ಪ್ರಾಸ್ತಾವಿಕವಾಗಿ ಮಾತನಾಡಿದ ಸಚಿವ ಮಧು ಬಂಗಾರಪ್ಪ, 'ಯಾರ ನೆರವೂ ಪಡೆಯದೇ ಕುಟುಂಬದ ಸಹಕಾರದಿಂದಲೇ ಸ್ಮಾರಕ (ಬಂಗಾರಧಾಮ) ನಿರ್ಮಿಸಲು ಸಂಕಲ್ಪ ಮಾಡಿದ್ದೆವು. ಆದ್ದರಿಂದ ಅದು ಪೂರ್ಣಗೊಳ್ಳಲು 12 ವರ್ಷ ಬೇಕಾಯಿತು. ಈ ಕಾರ್ಯ ತಡವಾಗಿದ್ದಕ್ಕೆ ಬಂಗಾರಪ್ಪ ಅವರ ಅಭಿಮಾನಿಗಳು ಹಾಗೂ ಬೆಂಬಲಿಗರ ಕ್ಷಮೆಯಾಚಿಸುತ್ತೇನೆ' ಎಂದರು.

'ರಾಜಕೀಯ ಬದುಕಿನುದ್ದಕ್ಕೂ ಬಂಗಾರಪ್ಪ ಉತ್ತರ ಕರ್ನಾಟಕದ ನಾಯಕ ಆಗಿದ್ದರು. ತುಂಗಭದ್ರೆಯಿಂದ ಕೃಷ್ಣೆಯ ನಾಡಿನವರೆಗೂ ದೊಡ್ಡ ಅಭಿಮಾನಿ ಬಳಗ ಹೊಂದಿದ್ದರು. ಉಳುವವನಿಗೆ ಭೂಮಿ ಹೋರಾಟದ ಮೂಲಕ ಸಮಾಜವಾದಿ ಬಂಗಾರಪ್ಪ ಎಂದೇ ಜನಜನಿತರಾಗಿದ್ದರು. ಸರ್ಕಾರ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕು' ಎಂದು ಸಚಿವ ಎಚ್. ಕೆ.ಪಾಟೀಲ ಹೇಳಿದರು.

'ಬಂಗಾರಪ್ಪ ಅವರಿಗೆ ಜನರ ಭಾಷೆ ಹಾಗೂ ಭಾವನೆ ಅರ್ಥವಾಗುತ್ತಿತ್ತು. ಹೀಗಾಗಿಯೇ ಅವರು ಜನರ ನಾಯಕರಾಗಿದ್ದರು. ಅವರು ಪಕ್ಷ ಸೇರಿದ್ದರಿಂದ, ಜೆಡಿಯು ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ 40ರ ಆಸುಪಾಸಿನಲ್ಲಿ ಇರುತ್ತಿದ್ದ ಬಿಜೆಪಿ ಶಾಸಕರ ಸಂಖ್ಯೆ 80 ದಾಟಿತ್ತು' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಸ್ಮರಿಸಿದರು.

'ಸ್ವಾಭಿಮಾನಕ್ಕೆ ಧಕ್ಕೆ ತರುವ ಕೆಲಸ ಬಿಜೆಪಿಯಿಂದ ಆಗಾಗ ನಡೆಯುತ್ತಿರುತ್ತದೆ. ಈ ಕಾರಣಕ್ಕಾಗಿಯೇ ಬಂಗಾರಪ್ಪ ಅವರು ಬಿಜೆಪಿ ಬಿಟ್ಟು ಹೋದರು' ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಬಂಗಾರಧಾಮದಲ್ಲಿ ನಿರ್ಮಿಸಿದ್ದ ವೇದಿಕೆಯಲ್ಲಿ, ಬಂಗಾರಪ್ಪ ನಡೆದು ಬಂದ ಹಾದಿಯ ಬಗ್ಗೆ ವಿಡಿಯೊ ಪ್ರದರ್ಶಿಸಲಾಯಿತು. ಕಲಾವಿದ ಅನೀಶ್ ರವಿಶಂಕರ್ ಅವರಿಂದ ವಯಲಿನ್ ವಾದನ, ಅಂಗವಿಕಲ ಮಕ್ಕಳಿಂದ ನೃತ್ಯ ಪ್ರದರ್ಶನ ನಡೆಯಿತು. ಬಂದವರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಗದ್ದಲದಿಂದ ಕೂಡಿದ ಸಾಮಾಜಿಕ ಜೀವನ, ನಿಶ್ಶಬ್ದವಾದ ಏಕಾಂತದ ಬದುಕು ಎರಡರಲ್ಲೂ ಮನಸ್ಸು ಮಿಳಿತವಾಗಬೇಕು.

–ಸ್ವಾಮಿ ವಿವೇಕಾನಂದ

ಕಾಶ್ಮೀರದಲ್ಲಿ ನಾಗರಿಕರ ಸಾವು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲಿ

ಕಾಶ್ಮೀರದಲ್ಲಿ ಭದ್ರತಾ ಪಡೆಗಳು ವಶಕ್ಕೆ ಪಡೆದಿದ್ದ ಮೂವರು ವ್ಯಕ್ತಿಗಳು ಮೃತಪಟ್ಟಿರುವುದು ಗಂಭೀರವಾದ ವಿಚಾರ ಮತ್ತು ಇದು ಇಡೀ ದೇಶದ ಗಮನ ಸೆಳೆದಿದೆ. ಭದ್ರತಾ ಪಡೆಗಳು ನಿರಂಕುಶವಾಗಿ ವರ್ತಿಸುತ್ತಿವೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಪೂಂಛ್ ಜಿಲ್ಲೆಯಲ್ಲಿ ಭದ್ರತಾ ಪಡೆಯ ವಾಹನಗಳ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ನಾಲ್ವರು ಯೋಧರು ಹುತಾತ್ಮರಾಗಿದ್ದರು. ಕೆಲವರು ಗಾಯಗೊಂಡಿದ್ದರು. ಅದರ ಮರುದಿನ ಭದ್ರತಾ ಪಡೆಯು ತನಿಖೆಯ ಭಾಗವಾಗಿ 13 ಮಂದಿ ನಾಗರಿಕರನ್ನು ವಶಕ್ಕೆ ಪಡೆದಿದೆ. ಅವರಲ್ಲಿ ಮೂವರು ರಾತ್ರಿ ಮೃತಪಟ್ಟಿದ್ದಾರೆ. ಗಾಯಗೊಂಡ ಐವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂವರು ಮೃತಪಡಲು ಮತ್ತು ಇತರರು ಗಾಯಗೊಳ್ಳಲು ಸೈನಿಕರು ನೀಡಿದ ಚಿತ್ರಹಿಂಸೆಯೇ ಕಾರಣ ಎಂದು ಮೃತರ ಸಂಬಂಧಿಕರು ಮತ್ತು ಗಾಯಗೊಂಡವರು ಆರೋಪಿಸಿದ್ದಾರೆ. ಸೇನೆಯು ಆಂತರಿಕ ತನಿಖೆಗೆ ಆದೇಶಿಸಿದೆ. ಮೂವರು ಅಧಿಕಾರಿಗಳನ್ನು ಕರ್ತವ್ಯದಿಂದ ಹಿಂದಕ್ಕೆ ಕರೆಸಿಕೊಳ್ಳಲಾಗಿದೆ. ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಪೂಂಛ್‌ಗೆ ಭೇಟಿ ನೀಡಿದ್ದಾರೆ. ಸೇನೆಯ ಕಾರ್ಯಾಚರಣೆಯು 'ವೃತ್ತಿಪರ ರೀತಿ'ಯಲ್ಲಿ ಇರಬೇಕು ಎಂದು ಅವರು ಸೂಚಿಸಿದ್ದಾರೆ. ಮೃತರ ಕುಟುಂಬಗಳಿಗೆ ಆಡಳಿತವು ಪರಿಹಾರ ನೀಡಿದೆ ಮತ್ತು ಸಂಬಂಧಿಕರಿಗೆ ಉದ್ಯೋಗ ನೀಡುವುದಾಗಿಯೂ ಹೇಳಿದೆ. ಇಡೀ ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂಬ ಕೂಗು ಜೋರಾಗಿ ಕೇಳಿಬಂದಿದೆ.



> ಈ ಪ್ರಕರಣದ ತನಿಖೆಯು ವಿಶ್ವಾಸಾರ್ಹವಾಗಿ ನಡೆಯಬೇಕು, ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಬೇಕು

ಜಮ್ಮು–ಕಾಶ್ಮೀರದಲ್ಲಿ, ಅದರಲ್ಲಿಯೂ ವಿಶೇಷವಾಗಿ ಗಡಿ ಜಿಲ್ಲೆಗಳಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಯನ್ನು ಭದ್ರತಾ ಪಡೆಯು ತೀವ್ರಗೊಳಿಸಿದೆ. ಪಾಕಿಸ್ತಾನದಿಂದ ಉಗ್ರರು ಗಡಿಯೊಳಕ್ಕೆ ನುಸುಳುವ ಭೀತಿ ಇತ್ತೀಚಿನ ವಾರಗಳಲ್ಲಿ ಹೆಚ್ಚಾಗಿರುವುದು ಇದಕ್ಕೆ ಕಾರಣ. ಆದರೆ, ಭದ್ರತಾ ಪಡೆಯು ಯಾವುದೇ ಸನ್ನಿವೇಶದಲ್ಲಿಯೂ ತನ್ನ ನಡವಳಿಕೆ ಸಂಹಿತೆಯನ್ನು ಮೀರಿ ವರ್ತಿಸಬಾರದು ಮತ್ತು ಸಾಮಾನ್ಯ ಕಾರ್ಯಾಚರಣೆ ವಿಧಾನಗಳನ್ನು ಉಲ್ಲಂಘಿಸಬಾರದು. ಈ ವಿಚಾರವಾಗಿ ಮತ್ತು ನಾಗರಿಕರ ಸಾವಿಗೆ ಸಂಬಂಧಿಸಿ ಈ ಹಿಂದೆಯೂ ಟೀಕೆಗಳು ಕೇಳಿಬಂದಿದ್ದವು. ಪೂಂಛ್‌ನಲ್ಲಿ ನಾಗರಿಕರು ಭದ್ರತಾ ಪಡೆಗಳ ವಶದಲ್ಲಿದ್ದಾಗ ಮೃತಪಟ್ಟಿರುವುದು ಈ ಟೀಕೆಗಳಿಗೆ ಪುಷ್ಟಿ ನೀಡುತ್ತದೆ. ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯು (ಆಫ್‌ಸ್ಪಾ) ಕಾಶ್ಮೀರದಲ್ಲಿ ಜಾರಿಯಲ್ಲಿದೆ. ಭದ್ರತಾ ಪಡೆಗಳಿಗೆ ಈ ಕಾಯ್ದೆಯು ಅಸಾಧಾರಣ ಅಧಿಕಾರಗಳನ್ನು ನೀಡುತ್ತದೆ. ಈ ಕಾಯ್ದೆ ಜಾರಿಯಲ್ಲಿದ್ದರೆ ಭದ್ರತಾ ಪಡೆಗಳಿಗೆ ಸಾಮಾನ್ಯ ಕಾನೂನುಗಳು ಅನ್ವಯವೇ ಆಗುವುದಿಲ್ಲ. ಭದ್ರತಾ ಪಡೆಯ ಯಾವುದೇ ಸಿಬ್ಬಂದಿ ಕಾನೂನುಬಾಹಿರ ಕೃತ್ಯ ಎಸಗಿದ್ದರೆ ಅಂಥವರನ್ನು ಅವರ ಹಿರಿಯ ಅಧಿಕಾರಿಗಳಾಗಲೀ ಆಫ್‌ಸ್ಪಾದಲ್ಲಿ ಇರುವ ಅವಕಾಶಗಳಾಗಲೀ ರಕ್ಷಿಸದಂತೆ ನೋಡಿಕೊಳ್ಳಬೇಕು. ಕಸ್ಟಡಿ ಮರಣ ಪ್ರಕರಣದ ತನಿಖೆಯು ವಿಶ್ವಾಸಾರ್ಹವಾಗಿ ನಡೆಯಬೇಕು. ಕಾಲಮಿತಿಯೊಳಗೆ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗಬೇಕು.

ಕಾಶ್ಮೀರವು ಸಹಜ ಸ್ಥಿತಿಗೆ ಮರಳಬೇಕಾದರೆ ಮತ್ತು ಅಲ್ಲಿ ಚುನಾವಣೆ ನಡೆಸಲು ಪೂರಕವಾದ ವಾತಾವರಣ ಸೃಷ್ಟಿಯಾಗಬೇಕಿದ್ದರೆ ಸ್ಥಳೀಯ ಜನರ ಬೆಂಬಲ ಅತ್ಯಗತ್ಯ. ಭಯೋತ್ಪಾದಕರ ವಿರುದ್ಧ ಭದ್ರತಾ ಪಡೆಗಳು ನಡೆಸುತ್ತಿರುವ ಕಾರ್ಯಾಚರಣೆ ಯಶಸ್ವಿಯಾಗಬೇಕಿದ್ದರೂ ಜನರ ಬೆಂಬಲ ಬೇಕು. ಕಾಶ್ಮೀರದಲ್ಲಿ ಭಯೋತ್ಪಾದಕರಿಂದ ಮಾತ್ರವಲ್ಲ, ಸರ್ಕಾರದ ಸಂಸ್ಥೆಗಳಿಂದಲೂ ಬಹಳ ಹಿಂಸಾಚಾರ ನಡೆದಿದೆ. ಕೆಲವು ದಶಕಗಳಲ್ಲಿ ನಡೆದಿರುವ ಕೆಲವು ಘಟನೆಗಳು ಮತ್ತು ಪ್ರಕರಣಗಳಿಗೆ ವಿವರಣೆ ಕೊಡಬೇಕಾದ ಅಗತ್ಯ ಇದೆ. ಇವು ಕಾಶ್ಮೀರದ ಜನರಲ್ಲಿ ಬಹಳ ವೇದನೆ ಸೃಷ್ಟಿಸಿವೆ. ಅವರ ಧೋರಣೆಗಳು ಮತ್ತು ಭಾವನೆಗಳ ಮೇಲೆ ಪರಿಣಾಮ ಬೀರಿವೆ. ಅವರಲ್ಲಿ ಆಕ್ರೋಶ, ದ್ವೇಷ, ಸಂದೇಹ, ಭೀತಿ ಮತ್ತು ತಪ್ಪಿತಸ್ಥ ಭಾವನೆಗಳೆಲ್ಲವೂ ಉಂಟಾಗುವಂತೆ ಮಾಡಿವೆ. ಈ ಎಲ್ಲವನ್ನೂ ಸರಿಪಡಿಸಬೇಕಾದ ಅಗತ್ಯ ಇದೆ. ಸತ್ಯಶೋಧನೆ ಮತ್ತು ಸಂಧಾನ ಆಯೋಗವನ್ನು ಸ್ಥಾಪಿಸಬೇಕು ಎಂದು ಸಂವಿಧಾನದ 370ನೇ ವಿಧಿಗೆ ಸಂಬಂಧಿಸಿದ ತೀರ್ಪಿನಲ್ಲಿ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಹೇಳಿದ್ದರು. ಇದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಜಾರಿಗೊಳಿಸಬೇಕು.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಿ



ಇನ್ನಷ್ಟು ಹೆಚ್ಚು ಸೌಕರ್ಯಗಳನ್ನು ಕಲ್ಪಿಸುವಂತೆ, ತೆಲುಗು ಭಾಷಿಕ ರಾಜ್ಯಗಳ ಅಯ್ಯಪ್ಪಸ್ವಾಮಿ ಭಕ್ತರ ಪರವಾಗಿ ಕೇರಳ ಮುಖ್ಯಮಂತ್ರಿ ಅವರಿಗೆ ನಾನು ಮನವಿ ಮಾಡುತ್ತೇನೆ. ಬಾಲಭಕ್ತರು ಸಹ 15 ಗಂಟೆಗೂ ಹೆಚ್ಚು ಕಾಲ ಸರದಿಯಲ್ಲಿ ನಿಲ್ಲುತ್ತಿದ್ದಾರೆ, ಅವರಿಗೆ ಕುಡಿಯುವ ನೀರು ಬೇಕಾಗಿದೆ, ಇನ್ನಷ್ಟು ಶೌಚಾಲಯಗಳ ಅಗತ್ಯವಿದೆ. ದಯಮಾಡಿ ಈ ಮನವಿಯನ್ನು ಪರಿಗಣಿಸಿ...

ದನಸರಿ ಸೀತಕ್ಕ, ತೆಲಂಗಾಣ ಸಚಿವೆ

ಕಿಡಿನುಡಿ



ವಿಧಾನಪರಿಷತ್, ಮೊದಲು ಮುತ್ಸದ್ದಿಗಳ ವೇದಿಕೆಯಾಗಿತ್ತು. ಈಗ ಮಹತ್ವ ಕಳೆದುಕೊಳ್ಳುತ್ತಿದೆ. ಮೊದಲೆಲ್ಲ ವಿವಿಧ ಕ್ಷೇತ್ರಗಳ ಪ್ರತಿಭಾವಂತರು ಪರಿಷತ್‌ಗೆ ಬರುತ್ತಿದ್ದರು. ಈಗ ದೊಡ್ಡ ನಾಯಕರ ಹಿಂದೆ ಓಡಾಡುವವರು, ಹಣ ಇದ್ದವರು ಬರುತ್ತಿದ್ದಾರೆ. ಹೊಸಬರಿಗೆ ತರಬೇತಿ ನೀಡಿದರೂ ಪರಿಸ್ಥಿತಿ ಬದಲಾಗುತ್ತಿಲ್ಲ. ಇದು, ಪಕ್ಷಾತೀತವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ.

ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

25 ವರ್ಷಗಳ ಹಿಂದೆ

ಭಾನುವಾರ, 27-12-1998

ಮಾನವೀಯತೆ ಮೆರೆದ ಸರ್ಕಾರ ವೈದ್ಯರು

ಚಿಕ್ಕಮಗಳೂರು, ಡಿ. 26 – ಮುಷ್ಕರದ ಮಧ್ಯೆಯೂ ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿ ಕರ್ತವ್ಯಪ್ರಜ್ಞೆ ತೋರಿ ಮೂರು ಜೀವಗಳನ್ನು ಉಳಿಸಿ ಮಾನವೀಯತೆ ಮೆರೆದ ಘಟನೆ ಇಂದು ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ನಡೆಯಿತು.

ಆಲ್ದೂರಿನಲ್ಲಿ ಪ್ರಾತಃಕಾಲ ಅಪಘಾತಕ್ಕೀಡಾದ ಒಬ್ಬ ಸ್ಥಳದಲ್ಲೇ ಸತ್ತು ಇತರ 25ಕ್ಕೂ ಹೆಚ್ಚು ಜನರು ಗಾಯಗೊಂಡರು. ಈ ಪೈಕಿ ನಾಲ್ವರು ಮಂದಿ ಗಂಭೀರ ಗಾಯಗೊಂಡಿದ್ದರು.

ಆಲ್ದೂರು ಪೊಲೀಸರು ಹಾಗೂ ಸ್ಥಳೀಯರ ಸಹಕಾರದಿಂದ ಗಾಯಾಳುಗಳನ್ನು ಖಾಸಗಿ ವಾಹನದಲ್ಲಿ ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ವೈದ್ಯರು ಹಾಗೂ ಸಿಬ್ಬಂದಿ ಮುಷ್ಕರದ ಮಧ್ಯೆಯೂ ಸಕಾಲದಲ್ಲಿ ಚಿಕಿತ್ಸೆ ನೀಡಿ ಮೂವರ ಜೀವ ಉಳಿಸಿದರು.

ಉದ್ಯಮಿಗಳ ಕೈಗೆ ಆರ್ಥಿಕ ನೀತಿ: ದೇವೇಗೌಡ ಟೀಕೆ

ಬೆಂಗಳೂರು, ಡಿ. 26 – ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರದ ಆರ್ಥಿಕ ನೀತಿಗಳನ್ನು ಇಂದು ಇಲ್ಲಿ ಕಟುವಾಗಿ ಟೀಕಿಸಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, 'ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದ ಹೊಸ ನೀತಿಗಳನ್ನು ರೂಪಿಸುವಾಗ ಸರ್ಕಾರ ಅರ್ಥಶಾಸ್ತ್ರಜ್ಞರ ಸಲಹೆ ಪಡೆಯುವುದರ ಬದಲು ಕೈಗಾರಿಕೋದ್ಯಮಿಗಳ ಸಲಹೆ ಪಡೆಯುತ್ತಿದೆ' ಎಂದು ಆರೋಪಿಸಿದರು.

'ನಾನು ಪ್ರಧಾನಿಯಾಗಿದ್ದಾಗ ಜಾರಿಗೆ ತಂದಿದ್ದ ಬಡವರ ಪರವಾದ ಹಲವಾರು ಕಾರ್ಯಕ್ರಮಗಳನ್ನು ಈಗಿನ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ರದ್ದುಗೊಳಿಸಿದೆ. ಇದು ದೇಶದಲ್ಲಿ ಹಣದುಬ್ಬರಕ್ಕೆ ಕಾರಣವಾಗಿದೆ; ಅಲ್ಲದೆ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಿದೆ' ಎಂದು ಅವರು ಟೀಕಿಸಿದರು.

50 ವರ್ಷಗಳ ಹಿಂದೆ

ಗುರುವಾರ, 27-12-1973

ಜಾತೀಯತೆ ನಿರ್ಮೂಲನಕ್ಕೆ ಅಂತರ್ಜಾತಿ ವಿವಾಹ: ಎಚ್ಚೆನ್

ಬೆಂಗಳೂರು, ಡಿ. 26 – ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸುವುದರ ಮೂಲಕ ಜಾತೀಯತೆ ನಿರ್ಮೂಲನಕ್ಕೆ ನೆರವಾಗಲು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎಚ್.ನರಸಿಂಹಯ್ಯ ಅವರು ಮಂಗಳವಾರ ಯುವಜನರಿಗೆ ಕರೆ ನೀಡಿದರು.

ಅಖಿಲ ಭಾರತ ವಿಚಾರವಾದಿ ಅಧಿವೇಶನದ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಏರ್ಪಡಿಸಿದ್ದ ಶಿಕ್ಷಣ ಮತ್ತು ವಿಜ್ಞಾನ ಸಮ್ಮೇಳನ ಉದ್ಘಾಟಿಸಿದ ಅವರು, ದೇಶಕ್ಕೆ ಶಾಪವಾಗಿ ಪರಿಣಮಿಸಿರುವ ಜಾತೀಯತೆ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಆಕ್ರಮಿಸಿಕೊಂಡಿದೆ ಎಂದರು.

ಕೃಷ್ಣಾ ನೀರು ಬಳಕೆಗೆ ಯೋಜನೆ ರೂಪಿಸಲು ತ್ರಿರಾಜ್ಯಗಳು ಸ್ವತಂತ್ರ

ನವದೆಹಲಿ, ಡಿ. 26 – ಕೃಷ್ಣಾ ನದಿ ನೀರಿನ ಹಂಚಿಕೆಗೆ ನ್ಯಾಯಮಂಡಳಿ ತೀರ್ಪನ್ನನುಸರಿಸಿ ಮೂರು ರಾಜ್ಯಗಳು ನೀರಿನ ಬಳಕೆಗೆ ಸಲ್ಲಿಸುವ ಆರ್ಥಿಕ ಕಾರ್ಯಸಾಧ್ಯ ಯೋಜನೆಗಳಿಗೆ ಕೇಂದ್ರ ಅಂಗೀಕಾರ ಕೊಡುವುದು.

ಈ ವಿಷಯವನ್ನು ಇಂದು ಇಲ್ಲಿ ಕೇಂದ್ರ ನೀರಾವರಿ ಮತ್ತು ವಿದ್ಯುತ್ ಉಪ ಸಚಿವ ಸಿದ್ದೇಶ್ವರ ಪ್ರಸಾದ್ ಅವರು, ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರವು ಕೇಂದ್ರದ ಅಂಗೀಕಾರಕ್ಕೆ ಸಲ್ಲಿಸಬಹುದಾದ ಯೋಜನೆಗಳನ್ನು ರೂಪಿಸಲು ಈಗ ಸ್ವತಂತ್ರವಾಗಿವೆ ಎಂದು ಹೇಳಿದರು.

ಮಹಿಳೆ ಮೇಲೆ ದೌರ್ಜನ್ಯ: ಮೂಕಪ್ರೇಕ್ಷಕರಿಗೊಂದು ಗುದ್ದು
ಪುಂಡುಗಂದಾಯ ಪ್ರಸ್ತಾಪ: ಸಾಧ್ಯಾಸಾಧ್ಯತೆ



ವಿಶ್ಲೇಷಣೆ

ಸಿ.ಎಚ್.ಹನುಮಂತರಾಯ

ಬೆಳಗಾವಿ ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಗುಂಪೊಂದು ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿದ್ದಲ್ಲದೆ, ಅವರನ್ನು ವಿವಸ್ತ್ರಗೊಳಿಸಿ ಮೆರವಣಿಗೆ ಮಾಡಿದ ಪ್ರಕರಣವು ನಾಗರಿಕತೆಗೇ ಸಡ್ಡು ಹೊಡೆಯುವಂತಹದ್ದು. ಈ ಅಮಾನುಷ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ, ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠವು ಈ ಕುರಿತು ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವುದು ಶ್ಲಾಘನೀಯ.

ಈ ಪ್ರಕರಣದ ಸಂಬಂಧ ಇದೇ ತಿಂಗಳ 18ರಂದು ನಡೆದ ವಿಚಾರಣೆಯ ವೇಳೆ ನ್ಯಾಯಪೀಠವು 'ಪುಂಡುಗಂದಾಯ'ದ ಸಂಗತಿಯನ್ನು ಪ್ರಸ್ತಾಪಿಸಿದೆ. ಇದು, ನಿಜಕ್ಕೂ ವಿಚಾರ ಪ್ರಚೋದಕ ಚಿಂತನೆಯನ್ನು ಪ್ರೇರೇಪಿಸುವಂತಿದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ, ಕಳ್ಳತನ ಅಥವಾ ದಾಂದಲೆ ನಡೆದರೆ, ಅಂತಹ ಪ್ರಕರಣಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಅಥವಾ ಅವುಗಳನ್ನು ತಪ್ಪಿಸಲು ಯಾವುದೇ ಪ್ರಯತ್ನವನ್ನೂ ಮಾಡದ ಕಾರಣಕ್ಕೆ ಇಡೀ ಊರಿಗೆ 'ಪುಂಡುಗಂದಾಯ'ವನ್ನು ವಿಧಿಸಿ ಶಿಕ್ಷೆಗೆ ಒಳಪಡಿಸಲಾಗುತ್ತಿತ್ತು. ಅಂತಹ ಒಂದು ಕಾಯ್ದೆಯನ್ನು ಗವರ್ನರ್ ಜನರಲ್ ವಿಲಿಯಮ್ ಬೆಂಟಿಂಕ್ ಜಾರಿಗೆ ತಂದಿದ್ದ.


ಹೊಸ ವಂಟಮೂರಿ ಗ್ರಾಮದಲ್ಲಿ ನಡೆದಂತಹ ಪ್ರಕರಣದಲ್ಲಿಯೂ ಇಂತಹದ್ದೊಂದು ಕ್ರಮ ಅವಶ್ಯ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠವು ಸಾತ್ವಿಕ ಸಿಟ್ಟನ್ನು ಹೊರಹಾಕಿದೆ. ಪ್ರಕರಣ ನಡೆಯುವಾಗ ಮೂಕಪ್ರೇಕ್ಷಕರಾಗಿ ನಿಂತಿದ್ದ ಗ್ರಾಮಸ್ಥರ ಮೇಲೆ 'ಪುಂಡುಗಂದಾಯ' ವಿಧಿಸಬೇಕೆಂಬ ಇರಾದೆಯನ್ನು ವ್ಯಕ್ತಪಡಿಸಿದೆ. ಈ ಕ್ರಮವು ಇಂತಹ ಪ್ರಕರಣಗಳನ್ನು ಹತ್ತಿಕ್ಕಲೇಬೇಕಾದ ಅನಿವಾರ್ಯಕ್ಕೆ ಪೂರಕವಾಗಿ ಇರಲಿದೆ ಎಂದು ಅದು ಹೇಳಿದೆ. ಈ ಮೂಲಕ, ಬೆಂಟಿಂಕ್‌ನ 'ಸಾಮೂಹಿಕ ಅಸ್ತ್ರ'ವನ್ನು ಎತ್ತಿಹಿಡಿದಿದೆ.

ಪ್ರಸ್ತುತ ಕಾನೂನಿನ ಚೌಕಟ್ಟಿನಲ್ಲಿ ಪುಂಡುಗಂದಾಯವನ್ನು ಕಾರ್ಯರೂಪಕ್ಕೆ ತರುವಂತಹ ಯಾವುದೇ ಕಾಯ್ದೆ ಅಥವಾ ಸಂಹಿತೆಗೆ ಅವಕಾಶವಿಲ್ಲ. ಆದರೂ ಪುಂಡುಗಂದಾಯದ ಮಾದರಿಯ ಬೇರೆ ಶಿಕ್ಷೆಯನ್ನು ಜಾರಿಗೆ ತರಬೇಕೆಂದು ನ್ಯಾಯಪೀಠ ಮುಕ್ತ ಅಭಿಪ್ರಾಯ ವ್ಯಕ್ತಪಡಿಸಿದೆ. ಈ ಕ್ರಮಕ್ಕೆ ಚಾಲನೆ ನೀಡುವಂತಹ ಕಾನೂನನ್ನು ರೂಪಿಸುವುದಕ್ಕೆ ಇರುವ ಸಾಧ್ಯತೆಯನ್ನು ಪರಿಶೀಲಿಸುವಂತೆಯೂ ಅದು ಶಾಸಕಾಂಗಕ್ಕೆ ಸೂಚನೆ ನೀಡಿದೆ.

ಇಲ್ಲಿ ನಮಗೆ ನೆನಪಾಗಬೇಕಾದದ್ದು, ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ)- 1973ರ ಸೆಕ್ಷನ್ 39. ಇದರ ಪ್ರಕಾರ, ಭಾರತೀಯ ದಂಡ ಸಂಹಿತೆ- 1860ರಲ್ಲಿ (ಐಪಿಸಿ) ರಾಜ್ಯದ ವಿರುದ್ಧದ ಅಪರಾಧಗಳು, ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂಥ ಅಪರಾಧಗಳು, ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡವರು ಅಥವಾ ಅವರಿಗೆ ಸಂಬಂಧಿಸಿದ ಅಪರಾಧಗಳು, ವ್ಯಕ್ತಿಯನ್ನು ಅಪಹರಿಸಿ ಬಂಧನದಲ್ಲಿ ಇರಿಸಿಕೊಂಡು, ಬಿಡುಗಡೆಗೆ ಹಣದ ಬೇಡಿಕೆ ಇಡುವುದು, ಕಳವು ಮಾಡುವ ಸಲುವಾಗಿ ಕೊಲೆ ಮಾಡಲು ಅಥವಾ ಗಾಯಗೊಳಿಸಲು ಸಿದ್ಧತೆ ನಡೆಸುವುದು, ಸುಲಿಗೆ, ದರೋಡೆ, ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡವರು ಹಾಗೂ ಇತರರಿಂದ ನಡೆಯುವ ಯಾವುದೇ ಅಪರಾಧ ಅಥವಾ ನಂಬಿಕೆದ್ರೋಹ, ಆಸ್ತಿ ಹಾನಿಗೊಳಿಸುವುದು, ಗೃಹಾತಿಕ್ರಮಣ, ಹೊಂಚು ಹಾಕಿ ಗೃಹಾತಿಕ್ರಮಣ ಮಾಡುವುದು, ಕರೆನ್ಸಿ ನೋಟುಗಳಿಗೆ ಸಂಬಂಧಿಸಿದ ಯಾವುದಾದರೂ ಅಪರಾಧಗಳು ನಡೆದದ್ದು ಅಥವಾ ನಡೆಸುವುದಕ್ಕೆ ಸಂಚು ರೂಪಿಸಿರುವುದನ್ನು ಗಮನಿಸಿದವರು ಕೂಡಲೇ ಪೊಲೀಸ್ ಠಾಣೆಗೆ ಧಾವಿಸಿ, ತಾವು ಕಂಡ ಅಥವಾ ತಮಗೆ ಗೊತ್ತಾಗಿರುವ ವಿಷಯದ ಬಗ್ಗೆ ಮಾಹಿತಿಯನ್ನು ನೀಡಬೇಕು. ಇಲ್ಲವಾದರೆ, ಅಂತಹವರ ನಡೆಯು ಐಪಿಸಿ ಸೆಕ್ಷನ್ 202ರ ಪ್ರಕಾರ ಶಿಕ್ಷಾರ್ಹ ಅಪರಾಧ ಎನಿಸುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಪರಿಗಣಿಸಬಹುದು.

'ಒಂದು ಅಪರಾಧ ಜರುಗಿದೆಯೆಂದು ತಿಳಿದಿದ್ದೂ ಅಥವಾ ಅಪರಾಧ ಜರುಗಿದೆಯೆಂದು ನಂಬುವ ಸಂದರ್ಭವಿದ್ದೂ, ಉದ್ದೇಶಪೂರ್ವಕವಾಗಿ ಜರುಗಿರುವ ಅಪರಾಧದ ಮಾಹಿತಿ ಹೊಂದಿದ್ದೂ ಅಂತಹ ಅಪರಾಧದ ಬಗ್ಗೆ ಕಾನೂನಿನ ಅಡಿಯಲ್ಲಿ ಮಾಹಿತಿ ನೀಡಲೇಬೇಕಾದ ಅಗತ್ಯ ಇರುವಾಗ, ಸಂಬಂಧಪಟ್ಟವರಿಗೆ ಆ ಮಾಹಿತಿಯನ್ನು ನೀಡದೇ ಇರುವ ಸಾರ್ವಜನಿಕ ವ್ಯಕ್ತಿ ಅಥವಾ ಪ್ರಜೆಯು ಆರು ತಿಂಗಳಿನ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸಬೇಕು' ಎಂದು ಐಪಿಸಿಯ ಸೆಕ್ಷನ್ 202 ತಿಳಿಸುತ್ತದೆ. ಈ ಪ್ರಕರಣದಲ್ಲಿ, ಮಹಿಳೆಯ ಮೇಲೆ ನಡೆಯುತ್ತಿದ್ದ ದೌರ್ಜನ್ಯಕ್ಕೆ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದ ಗ್ರಾಮಸ್ಥರು ಆ ಮಾಹಿತಿಯನ್ನು ಪೊಲೀಸರಿಗೆ ನೀಡಬೇಕಾದ ತಮ್ಮ ಜವಾಬ್ದಾರಿಯನ್ನು ಮರೆತು ಮೂಕಪ್ರೇಕ್ಷಕರಂತೆ ನಿಂತಿದ್ದುದು, ಸೆಕ್ಷನ್ 202ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ.

ರಂಗರಾಜು ವರ್ಸಸ್ ಕರ್ನಾಟಕ ರಾಜ್ಯವನ್ನು ಒಳಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ, ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಮತ್ತು ವೆಂಕಟೇಶ್ ಜಿ.ನಾಯಕ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಕೆಲವು ತಿಂಗಳ ಹಿಂದೆ ಮಹತ್ವದ ಆದೇಶವೊಂದನ್ನು ನೀಡಿದೆ. ಆ ಸಂದರ್ಭದಲ್ಲಿ, 'ಶವಸಂಭೋಗ'ವನ್ನು ಒಂದು ಅಪರಾಧವನ್ನಾಗಿ ಪರಿಗಣಿಸುವಂತೆ ನ್ಯಾಯಪೀಠವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಶಿಫಾರಸು ಮಾಡಿದೆ. ಇಂತಹ ಶಿಫಾರಸು ಹೊಸ ವಂಟಮೂರಿಯಲ್ಲಿ ನಡೆದಂತಹ ಪ್ರಕರಣಗಳಿಗೂ ಅನ್ವಯವಾಗುವುದು ಸೂಕ್ತ.



ಈ ಪ್ರಕರಣದಲ್ಲಿ, ಸಾರ್ವಜನಿಕವಾಗಿ ಮಹಿಳೆಯನ್ನು ವಿವಸ್ತ್ರಗೊಳಿಸಿ, ನಂತರ ಆಕೆಯ ಮೆರವಣಿಗೆ ನಡೆಸಿ ಪೌರುಷ ಮೆರೆದ ಗುಂಪಿಗೆ ನ್ಯಾಯಪೀಠವು ಬಹಳಷ್ಟು ಛೀಮಾರಿ ಹಾಕಿದೆ. ಅಲ್ಲದೆ, ಇಂತಹ ವಿಷಯಗಳಲ್ಲಿ ನಾಗರಿಕ ಸಮಾಜದ ವರ್ತನೆಯಲ್ಲಿ ಅತ್ಯಗತ್ಯವಾಗಿ ಆಗಲೇಬೇಕಾದ ಸುಧಾರಣೆಯ ಅಗತ್ಯವನ್ನೂ ಒತ್ತಿ ಹೇಳಿದೆ. ಅಪರಾಧಗಳು, ಅಕೃತ್ಯಗಳು ಜರುಗುವ ಸಂದರ್ಭಗಳಲ್ಲಿ ನೆರೆದವರು ಮೂಕಪ್ರೇಕ್ಷಕರಂತೆ ಇರುವುದು ಸರ್ವೇ ಸಾಮಾನ್ಯ ಎಂಬಂತಾಗಿರುವ ಬಗ್ಗೆ ನ್ಯಾಯಪೀಠ ವಿಷಾದ ವ್ಯಕ್ತಪಡಿಸಿದೆ. ಇಂತಹ ಘಟನಾವಳಿಗಳಿಗೂ ತಮಗೂ ಸಂಬಂಧವೇ ಇಲ್ಲ ಎಂಬಂತೆ ಮೌನ ಸಮ್ಮತಿ ರೂಢಿಸಿಕೊಂಡಿರುವ ಸಾಮಾಜಿಕ ಧೋರಣೆಯನ್ನು ಖಂಡಿಸಿದೆ.

ಮಹಿಳೆಯೊಬ್ಬರ ಮೇಲೆ ತಮ್ಮ ಕಣ್ಣೆದುರೇ ದೌರ್ಜನ್ಯ ನಡೆಯುತ್ತಿದ್ದರೂ ಸಾರ್ವಜನಿಕರ ಅಂತಃಕರಣ ಕಲಕದೇ ಇದ್ದುದನ್ನು ನ್ಯಾಯಪೀಠ ಗುರುತಿಸಿದೆ. ಅದರಲ್ಲೂ ಜನರಲ್ಲಿ ಸಾತ್ವಿಕ ಆಕ್ರೋಶದ ಗುಣ ಕಣ್ಮರೆ ಆಗುತ್ತಿರುವುದನ್ನು ಬಹುಮುಖ್ಯವಾಗಿ ಗಮನಿಸಿದೆ. ಅಂತೆಯೇ, ಸಾರ್ವಜನಿಕ ಕ್ಷೇತ್ರದ ಮುಖಂಡರು ಹಾಗೂ ರಾಜಕೀಯ ನೇತಾರರು ಇಂತಹ ಸೂಕ್ಷ್ಮ ವಿಚಾರಗಳಲ್ಲಿ ಹಮ್ಮಿಕೊಳ್ಳಬೇಕಾಗಿರುವ ಆಂದೋಲನದ ಪ್ರಾಮುಖ್ಯವನ್ನು ಒತ್ತಿ ಹೇಳುವುದನ್ನು ಅದು ಮರೆತಿಲ್ಲ.

ಇದರ ಪರಿಣಾಮವಾಗಿ ಹೊಸ ಕಾನೂನೊಂದು ಜಾರಿಗೆ ಬಂದು, ಅನ್ಯಾಯ ಕಣ್ಣೆದುರಿಗೆ ನಡೆಯುತ್ತಿದ್ದರೂ ಮೂಕಪ್ರೇಕ್ಷಕರಾಗುವವರನ್ನು ಸಹ ಶಿಕ್ಷೆಗೆ ಗುರಿಪಡಿಸುವ ಕ್ರಮವು ತಕ್ಷಣವೇ ಜಾರಿಯಾಗಬೇಕೆಂದು ಹೇಳಿದೆ. ಮಹತ್ತರ ಸದುದ್ದೇಶವನ್ನು ಗುರಿಯಾಗಿ ಇಟ್ಟುಕೊಂಡು, ಪುಂಡುಗಂದಾಯದ ಮಾದರಿಯಲ್ಲಿ ಶಿಕ್ಷೆ ವಿಧಿಸಲು ಅನುವಾಗಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡುವ ಮೂಲಕ ನ್ಯಾಯಪೀಠವು ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ಮೆರೆದಿದೆ.

ಸರ್ಕಾರ ಹಾಗೂ ಕೆಲವು ಸಂಸ್ಥೆಗಳು ಸಂತ್ರಸ್ತೆಗೆ ಹಣದ ನೆರವು ನೀಡಿರುವುದು ಹಾಗೂ ಸ್ಥಿರಾಸ್ತಿಯನ್ನು ಕೊಡಮಾಡಿರುವುದು ಸಮಾಧಾನದ ಸಂಗತಿ. ಅಂದು ನಡೆದ ಆ ಕುಕೃತ್ಯವನ್ನು ಸುಮಾರು 60 ಜನ ನಿಂತು ನೋಡುತ್ತಿದ್ದಾಗ, ಜಹಾಂಗೀರ್ ಎಂಬ ವ್ಯಕ್ತಿ ಆ ಮಹಿಳೆಯ ರಕ್ಷಣೆಗೆ ಪ್ರಯತ್ನಿಸಿದ್ದಾರೆ. ಆದರೆ, ಆ ಕಾರಣಕ್ಕಾಗಿ ಆತ ಹಲ್ಲೆಗೆ ಒಳಗಾದರು ಎನ್ನಲಾಗಿದ್ದು, ಇದನ್ನು ಕೇಳಿದ ಎಂತಹವರ ಕಣ್ಣಾಲಿಯಲ್ಲೂ ನೀರಾಡದೇ ಇರದು. ದುರಂತವೆಂದರೆ, ಮಹಿಳೆಯ ಮಾನ ಕಾಪಾಡಲು ಜಹಾಂಗೀರ್ ಅವರು ಮಾಡಿದ ಪ್ರಯತ್ನವನ್ನು ಸರ್ಕಾರವಾಗಲೀ ಸಂಘ ಸಂಸ್ಥೆಗಳಾಗಲೀ ಈವರೆಗೆ ಗುರುತಿಸಿಲ್ಲ. ಆದಾಗ್ಯೂ, ಅರ್ಜಿ ವಿಲೇವಾರಿಗೂ ಮುನ್ನ ನ್ಯಾಯಪೀಠ ಇದನ್ನು ಗಮನಿಸುತ್ತದೆ ಎಂಬ ನಂಬಿಕೆ ನನಗಿದೆ. ಹೀಗಾದಲ್ಲಿ, ಕೋರ್ಟ್‌ಗಳ ಮೇಲೆ ಜನರಿಗೆ ಇರುವ ಭರವಸೆ ಖಂಡಿತ ಮತ್ತಷ್ಟು ಹೆಚ್ಚುತ್ತದೆ.

ಲೇಖಕ: ಹಿರಿಯ ವಕೀಲ, ಹೈಕೋರ್ಟ್

ಚುರುಮುರಿ



ನಕಲಿ ಖಾತೆ

• ಚಂದ್ರಕಾಂತ ವಡ್ಡು

ತಿಂಗಳೇಶ ಇತ್ತೀಚೆಗೆ ಬರವಣಿಗೆಯನ್ನೇ ಮರೆತು, ತನ್ನ ಹಳೆಯ ಮನೆಗೆ ಹೊಸ ಬಣ್ಣ ಹೊಡೆಸಲು ತಿಣುಕಾಡುತ್ತಿದ್ದ. ಪೇಂಟರುಗಳು ಕೇಳುವ ಕೂಲಿ ಮತ್ತು ಬಣ್ಣದ ದರಗಳನ್ನು ಹೇಗೆ ಕೂಡಿ ಕಳೆದರೂ ಕ್ರೆಡಿಟ್ ಕಾರ್ಡಿನ ಮಿತಿಯೊಳಗೆ ತರಲಾಗದೆ ಅವನ ಆರ್ಥಿಕತೆ ಸಿದ್ದಣ್ಣನ ಸರ್ಕಾರದಂತಾಗಿತ್ತು. ಅದೇ ವೇಳೆ ಮೊಬೈಲಿನಲ್ಲಿ ಮೆಸೇಜುಗಳ ಸುರಿಮಳೆ: 'ನಿಮ್ಮ ಫೇಸ್‌ಬುಕ್ ಖಾತೆ ಹ್ಯಾಕ್ ಆಗಿದೆ, ಹಣ ಕೇಳುತ್ತಿದ್ದಾರೆ'.

ತಿಂಗಳೇಶ ಕಂಗಾಲು. ತನಗೆ ಹಣದ ಅಡಚಣೆ ಇರುವುದನ್ನು ಬಲ್ಲ ಮಿತಶತ್ರುವಿನ ಕೈಚಳಕವಿದು ಅನ್ನುವ ಅನುಮಾನ. ಹಣ ಹಾಕಲು ತನ್ನ ಗೂಗಲ್ ಪೇ ನಂಬರನ್ನೇ ಕೊಟ್ಟಿದ್ದರೆ... ಎಂಬ ಆಸೆಯೂ ಚಿಗುರಿತು. ಗೆಳೆಯ ಬದ್ರಿಯೆದುರು ಸಂಕಟ ತೋಡಿಕೊಂಡ.

'ದೋಸ್ತ, ಕಂಗ್ರಾಚ್ಯುಲೇಷನ್... ಫೇಸ್‌ಬುಕ್ಕಿನಲ್ಲಿ ಅಂತಿಂಥವರ ಖಾತೆ ಹ್ಯಾಕ್ ಆಗೋದಿಲ್ಲ. ಜನಪ್ರಿಯರು, ಚಾಲ್ತಿಯಲ್ಲಿ ಇರುವವರು, ಅಭಿಮಾನಿಗಳ ಪಡೆ ಹೊಂದಿದವರೇ ಅವರ ಟಾರ್ಗೆಟ್. ಇನ್ನೂ ತನ್ನ ಖಾತೆ ಹ್ಯಾಕ್ ಆಗಿಲ್ಲ, ತನಗೆ ಜೀವಬೆದರಿಕೆ ಪತ್ರ ಬಂದೇ ಇಲ್ಲ ಎಂದು ಕೊರಗುವವರೇ ಜಾಸ್ತಿ. ನಿನ್ನ ಲೆವೆಲ್ ಮೇಲೇರಿತು ಬಿಡು' ಬದ್ರಿಯ ವಿವರಣೆ.

'ಪ್ರಶಸ್ತಿಗೆ, ಸನ್ಮಾನಕ್ಕೆ ಕಾಯೋರು ಗೊತ್ತಪ್ಪ. ಜೀವಬೆದರಿಕೆ ಪತ್ರಕ್ಕೆ ಯಾಕೆ ಕಾಯ್ತಾರೋ...'

'ಆ ಪತ್ರದ ಶಿಫಾರಸು ಆಧರಿಸಿಯೇ ಸರ್ಕಾರ ಗನ್‌ಮ್ಯಾನ್ ಸೇವೆ ಒದಗಿಸೋದು. ಆ ಖದರು ಯಾರಿಗುಂಟು ಯಾರಿಗಿಲ್ಲ!'

'ಹಾಗಾದರೆ ಫೇಸ್‌ಬುಕ್ ಖಾತೆ ಎಷ್ಟು ಸಲ ಹ್ಯಾಕ್ ಆಗಿದೆ, ಎಷ್ಟು ಅಭಿಮಾನಿಗಳು ಹಣ ಹಾಕಿದ್ದಾರೆ, ಫ್ರೆಂಡ್ ರಿಕ್ವೆಸ್ಟ್ ಸ್ವೀಕರಿಸಿದವರ ಮತ್ತು ತಿರಸ್ಕರಿಸಿದವರ ಸಂಖ್ಯೆ ಎಷ್ಟು ಎನ್ನುವಂತಹವೆಲ್ಲಾ ಪ್ರಶಸ್ತಿಯ ಮಾನದಂಡಗಳೇ?'

'ಹೌದು, ನಕಲಿ ಖಾತೆ ಹಿನ್ನೆಲೆಯಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಮನಃಶಾಸ್ತ್ರೀಯ ಅಧ್ಯಯನ ಮಾಡಿದ ಒಂದು ವರದಿ ರೆಡಿ ಇದೆ. ಜಾತಿಗಣತಿ ವರದಿಯ ಗತಿ ಬಾರದಿರಲಿ ಎಂದು ಬಿಡುಗಡೆ ಮಾಡಿಲ್ಲ, ಅಷ್ಟೇ'.

ಸಂಗತ

'ವಿಜ್ಞಾನದ ರಾಣಿ'ಗೆ ಏಕೆ ಗುಮ್ಮನ ಪಟ್ಟ?

ಗಣಿತವನ್ನು ಮಕ್ಕಳ ಪಾಲಿಗೆ ಗುಮ್ಮನಾಗಿಸದೆ, ಸಮರ್ಥವಾಗಿ ಬೋಧಿಸುವ ಮೂಲಕ ಮಕ್ಕಳಿಗೆ ರಂಜನೀಯ ಎನಿಸುವಂತೆ ಮಾಡಬಹುದು

• ಬಿ.ಎಸ್.ಭಗವಾನ್

ತರಕಾರಿ ಮಾರುವಾಕೆ ಸೊಪ್ಪು, ಶುಂಠಿ, ಹಸಿಮೆಣಸಿನ ಕಾಯಿ ಜೊತೆಗೆ ಹದಿನೇಳು ರೂಪಾಯಿಯನ್ನೂ ನೀಡಿದಾಗ ತಬ್ಬಿಬ್ಬಾದೆ. ಆಕೆಯೇ, 'ಏನಿಲ್ಲ ಸ್ವಾಮಿ, ನೀವೀಗ ಐವತ್ತು ರೂಪಾಯಿ ಕೊಟ್ರೆ ಸಲೀಸು' ಎಂದಾಗ, ಎಂತಹ ಸೂಕ್ಷ್ಮ ಗ್ರಹಿಕೆ ಅನ್ನಿಸಿತು. ಅಕ್ಷರರೊ, ನಿರಕ್ಷರರೊ ನಾವೆಲ್ಲರೂ ಗಣಿತಜ್ಞರೇ. ಗಣಿತಕ್ಕೆ ಹೊರತಾದ ಬದುಕು ನೌಕಾಧಿಪತಿಯಿಲ್ಲದ ಹಡಗಿನಂತೆ. ಇತ್ತೀಚೆಗಷ್ಟೇ ರಾಷ್ಟ್ರೀಯ 'ಗಣಿತ ದಿನ' ಆಚರಿಸಿದ್ದೇವೆ. ನಮ್ಮ ಜಗತ್ತಿಗೆ ಗಣಿತದ್ದೇ ಶಕ್ತಿಯುತ ಆಧಾರ, ಬೆಂಬಲ.


ಗಣಿತವು ಸೌಂದರ್ಯ, ಸತ್ಯ, ನ್ಯಾಯ, ಪ್ರೀತಿಯ ಅವತಾರ. 'ವಿಜ್ಞಾನದ ರಾಣಿ' ಎಂಬ ವಿಶಿಷ್ಟ ಪ್ರಶಂಸೆ ಗಣಿತಕ್ಕಿದೆ. ಕಠಿಣ, ಕ್ಲಿಷ್ಟ, ಬೇಸರ, ತಲೆಬೇನೆ ಎಂದೆಲ್ಲ ಆರೋಪಿಸಿ ಗಣಿತವನ್ನು ಕಟಕಟೆಯಲ್ಲಿ ನಿಲ್ಲಿಸಿದ್ದೇವಷ್ಟೆ. ಉಳಿದ ವಿಷಯಗಳಲ್ಲಿನ ಹೋಂವರ್ಕ್, ಟೆಸ್ಟ್, ಗ್ರೇಡ್‌ಗಳ ಭರಾಟೆಯೇ ಮಕ್ಕಳಲ್ಲಿ ಒತ್ತಡ ಸೃಷ್ಟಿಸಿರುತ್ತದೆ. ಹೀಗಿರುವಾಗ, ಗಣಿತವನ್ನು ಅವರ ಮನಸ್ಸಿನಲ್ಲಿ 'ಗುಮ್ಮ'ನಾಗಿಸಿದರೆ ಏನಾಗಬೇಡ? ಒತ್ತಡ ಉಲ್ಬಣಗೊಂಡು ಎಳೆಯರು ಗಣಿತದ ಸೊಗಸಾದ ಪರಿಕಲ್ಪನೆಗಳನ್ನು ಆಸ್ವಾದಿಸದಷ್ಟು ನಿರಾಸಕ್ತರಾಗುತ್ತಾರೆ. ಗಣಿತ ಬೋಧಕರು ವಿನಾಕಾರಣ ಅವರ ಪಾಲಿಗೆ ಆಗಂತುಕರೆನಿಸುತ್ತಾರೆ. ಸಮರ್ಥ ಬೋಧನೆಯಿಂದ ಗಣಿತವನ್ನು ಮಕ್ಕಳಿಗೆ ರಂಜನೀಯವಾಗಿಸಬಹುದು.

ಗಣಿತ ಸೂತ್ರಗಳನ್ನು ದೈನಂದಿನ ಆಗುಹೋಗುಗಳಿಗೆ ಅನ್ವಯಿಸಿ ಸಾದರಪಡಿಸದಿದ್ದರೆ ಮಕ್ಕಳು ಬೇಸರಿಸುವುದು ಸ್ವಾಭಾವಿಕ. ಇದರ ಫಲವೆಂದರೆ ಶಿಕ್ಷಕರು ಹಾಗೂ ಪೋಷಕರನ್ನು ಮೆಚ್ಚಿಸುವ ಸಲುವಾಗಿ ಸೂತ್ರಗಳನ್ನು ಬಾಯಿಪಾಠ ಮಾಡುವುದು ಅವರಿಗೆ ಅನಿವಾರ್ಯವಾಗುತ್ತದೆ. ಸೂತ್ರಗಳ ಹಿಂದಿನ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳದೆ ಉರು ಹಚ್ಚುವುದರಿಂದ ಪರೀಕ್ಷೆ ಎದುರಿಸಬಹುದಷ್ಟೇ. ಆದರೆ ಭವಿತವ್ಯದಲ್ಲಿ ಯಾರಾದರೂ 'ಗೊತ್ತೇ?' ಎಂದು ಕೇಳಿದರೆ, ಎಲ್ಲೋ ಓದಿ ಬರೆದ ನೆನಪೆಂದು ಕಾಗೆ ಹಾರಿಸಬೇಕಾಗುತ್ತದೆ!

ಮಾಯಾಚೌಕಗಳ ರಚನೆ, ಟ್ಯಾಂಗ್ರಾಮ್ (ಕಾಗದ ಏಳು ತುಂಡಾಗಿಸಿ ಬಗೆ ಬಗೆ ಆಕೃತಿಗಳಾಗಿ ಜೋಡಿಸುವುದು), ಸ್ಮಾರ್ಟ್‌ಫೋನಿನಲ್ಲಿ 'ಗಣಿತ ದಾಳಿ'ಯಂತಹ ಚಟುವಟಿಕೆಗಳು ಎಳೆಯರನ್ನು ಆಕರ್ಷಿಸುತ್ತವೆ. ಜ್ಯಾಮಿತಿಯು ಗಣಿತದ ಅವಿಭಾಜ್ಯ ಅಂಗವೆನ್ನುವುದು ಅವರಿಗೆ ಮನದಟ್ಟಾಗುತ್ತದೆ. ಮಾಧ್ಯಮಿಕ ಶಾಲೆಯಲ್ಲಿ ನಮ್ಮ ಗಣಿತದ ಮಾಸ್ತರರ ವೃತ್ತದ ವ್ಯಾಖಾನ ವಿಶೇಷವಾಗಿತ್ತು. ಸ್ಥಿರಬಿಂದುವು ಚಲಿಸುವ ಬಿಂದುವಿಗೆ 'ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನನ್ನಿಂದ ಒಂದೇ ದೂರವಿರು' ಎನ್ನುವುದಂತೆ! ಚೆಂಡು, ಚೌಕ, ಚಕ್ರದಂತಹ ಜೀವನಾನುಭವವನ್ನು ಪ್ರತಿನಿಧಿಸುವ ಮಾದರಿಗಳನ್ನು ಮಕ್ಕಳು ಗುರುತಿಸುತ್ತಾರೆ. ಅದಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು ಅವರ ಮನಸ್ಸಿಗೆ ಸುಲಭವಾಗಿ ನಾಟುತ್ತವೆ.

ಗಣಿತ ಕಾವ್ಯವಾಗಬಲ್ಲದು, ಕಥನವಾಗಬಲ್ಲದು, ನಾಟಕವಾಗಬಲ್ಲದು. ಈ ಕಾರಣಕ್ಕೇ 18-19ನೇ ಶತಮಾನದ ಖ್ಯಾತ ಗಣಿತಜ್ಞ, ಫ್ರಾನ್ಸ್‌ನ ಹೆನ್ರಿ ಪಾಯಿಂಕೇರ್, 'ಗಣಿತವೆಂದರೆ ಎರಡು ವಿಷಯಗಳಿಗೆ ಒಂದೇ ಹೆಸರು ಕೊಡುವ ಕಲೆ' ಎಂದಿದ್ದು. ಈಗ ಬಿಡಿ, ತಂತ್ರಜ್ಞಾನದ್ದೇ ಕಾರುಬಾರು. ಆಡಿಯೊ, ವಿಡಿಯೊ ಬಳಸಿ ಗಣಿತವನ್ನು ಸರಾಗವಾಗಿ ಬೋಧಿಸಬಹುದು. ಇತಿಹಾಸದಲ್ಲಿ ಸಂದ ಖ್ಯಾತ ಗಣಿತಮತಿಗಳ ಮಹತ್ವದ ಲೆಕ್ಕಾಚಾರಗಳನ್ನು ತೆರೆಯ ಮೇಲೆ ಮೂಡಿಸಬಹುದು. 'ಏನು ಗ್ರಹಿಸಿದಿರಿ, ಸಾರಾಂಶ ಹೇಳಿ' ಅನ್ನಬಹುದು.

ಅಂದಹಾಗೆ, ಗಣಿತ ಪಠ್ಯಕ್ರಮವು ಅಧ್ಯಾಯಗಳಿಂದ ತುಂಬಿತುಳುಕಿದಷ್ಟೂ ವಿದ್ಯಾರ್ಥಿಗಳು ಹೆಚ್ಚು ಕಲಿತಾರು, ಅರಿತಾರು ಎನ್ನುವುದು ಬರಿಯ ಭ್ರಮೆ. ಶಿಕ್ಷಕರು ಪಠ್ಯಕ್ರಮವನ್ನು ತ್ವರಿತಗತಿಯಲ್ಲಿ ಮುಗಿಸುವ ಭರದಲ್ಲಿ ವಿದ್ಯಾರ್ಥಿಗಳು ಕಂಗೆಟ್ಟಿರುತ್ತಾರೆ. ಹಾಗಾಗಿ, ಪಠ್ಯಪುಸ್ತಕದಲ್ಲಿ ಹೆಚ್ಚಿನ ಆಳ ಮತ್ತು ವಿವರಗಳುಳ್ಳ ಕಡಿಮೆ ಅಧ್ಯಾಯಗಳಿರುವುದು ಶ್ರೇಯಸ್ಕರ, ಪರಿಣಾಮಕಾರಿ. ಸಂಖ್ಯೆಗಳ ಸ್ವಾರಸ್ಯ ಅರಿತರೆ ಅವೇ ಮನರಂಜನೆಗೆ ಸೆಳೆಯುತ್ತವೆ. ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಬೇರೆ ಬೇರೆಯಲ್ಲ. ಅವು ಒಂದೇ ಗಣಿತ ಕ್ರಿಯೆಯ ರೂಪಗಳು ಎನ್ನುವುದನ್ನು ಮಕ್ಕಳಿಗೆ ರೂಢಿಸಬೇಕು. ಆಗ ಮಗ್ಗಿ ಅಥವಾ ಕೋಷ್ಟಕದಲ್ಲಿ ಏಳರ ಆರು ಪಟ್ಟು, ಆರರ ಏಳುಪಟ್ಟು ಒಂದೇ ಎಂದು ಅವರೇ ತಿಳಿದಾರು. ಅಂತೆಯೇ ಲಕ್ಷದ ಪರಿಚಯವೇ ಇಲ್ಲದೆ ಲಕ್ಷಗಳನ್ನು ಕೂಡಬಲ್ಲರು. ಇದು ಹೇಗೆ ಸಾಧ್ಯ ಎನ್ನುವುದಕ್ಕೆ ಉತ್ತರ ಅದೇ- ಗಣಿತವೇ ಒಂದು ನುಡಿ, ಸಂವಹನ.



ಗಣಿತ ಕಷ್ಟವಲ್ಲ, ಅದು ಒಂದು ಭಾಷೆ, ಮಾನವ ಭಾಷೆ. ದೃಷ್ಟಿ, ಸ್ಪರ್ಶದಂತೆ ಅದೂ ಒಂದು ಪ್ರಜ್ಞೆ. ಇನ್ನೂ ಮಾತು ಬಾರದ ಮಗುವೂ ಒಂದು, ಅರ್ಧ, ಮುಕ್ಕಾಲು ಎಂಬಂತಹ ಪರಿಮಾಣಗಳನ್ನು ಗ್ರಹಿಸುತ್ತದೆ. ತನ್ನ ಜೊತೆಯವರಂತೆ ತನಗೂ ಒಂದು ಚಾಕೊಲೇಟ್ ನೀಡದೆ ಬರೀ ಅರ್ಧ ತುಣುಕು ನೀಡಿದರೆ ಮಗು ಕೋಪಗೊಳ್ಳುತ್ತದೆ. ಎಂದಮೇಲೆ ಅದಕ್ಕೆ ಭಿನ್ನರಾಶಿಯೇನು, ಸೊನ್ನೆಯೂ ಪರಿಚಿತ ಎಂದಾಯಿತಲ್ಲ! ಪ್ರತ್ಯಕ್ಷಜನಿತವೂ ಅರ್ಥಗರ್ಭಿತವೂ ಆದ ಕಾರಣ ಗಣಿತ ಎಲ್ಲರಿಗೂ ಸುಲಭವಾಗಿ ಕಲಿಯಲು ನಿಲುಕುತ್ತದೆ.

ಗಣಿತ ಅಥವಾ ಯಾವುದೇ ವಿಷಯದ ಶಿಕ್ಷಕರಲ್ಲಿ ಎಂ.ಫಿಲ್., ಪಿಎಚ್.ಡಿ. ಸಂಶೋಧನಾ ಪದವಿ ಇರುವುದು ಸ್ವಾಗತಾರ್ಹ. ಆದರೆ ಅದು ಹಿರಿಮೆಯಾಗುವುದು ಅಂಥವರಲ್ಲಿ ಶ್ರೇಷ್ಠ ಗುರುವಿನ ಜೊತೆಗೆ ಶ್ರೇಷ್ಠ ಶಿಷ್ಯನೂ ಇದ್ದಾಗ ಮಾತ್ರ. ಆಲ್ಬರ್ಟ್ ಐನ್‌ಸ್ಟೀನ್ ಅವರಿಗೆ ಗಣಿತವೇ ಎಲ್ಲವೂ ಆಗಿತ್ತು. ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕಗೊಂಡ ದಿನವೇ ಅವರು ಬಯಸಿದ್ದು 'ನನ್ನ ಕೋಣೆ ಹೇಗಿದ್ದರೂ ಸರಿ, ತಪ್ಪು ಲೆಕ್ಕಾಚಾರದ ಹಾಳೆಗಳನ್ನು ಒಗೆಯಲು ಒಂದು ಬುಟ್ಟಿಯಂತೂ ಇರಲಿ'.

ವಾಚಕರ ವಾಣಿ

ಅತಿಥಿ ಉಪನ್ಯಾಸಕರ ಸಮಸ್ಯೆಯ ಗಂಟು ಬಿಡಿಸಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ತಮ್ಮ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ಸಲುವಾಗಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರದ ಬಗ್ಗೆ ಗಮನಸೆಳೆದಿರುವ ಸಂಪಾದಕೀಯವು (ಪ್ರ.ವಾ., ಡಿ. 25) ಅತಿಥಿ ಉಪನ್ಯಾಸಕರ ವಲಯದಲ್ಲಿ ಸಂಚಲನ ಮೂಡಿಸಿದೆ. ಉದಾರೀಕರಣ, ಜಾಗತೀಕರಣ, ಖಾಸಗೀಕರಣದಂತಹ ಹೊಸ ಆರ್ಥಿಕತೆಯ ದೊಡ್ಡ ಬಲಿಪಶುಗಳು ಅತಿಥಿ ಉಪನ್ಯಾಸಕರು. 'ಉಪನ್ಯಾಸಕ ವೃತ್ತಿ ಕಾಯಂ ಆಗುವುದೆನ್ನುವ ನಂಬಿಕೆಯಿಂದ ಪರ್ಯಾಯ ಉದ್ಯೋಗ ಮಾರ್ಗಗಳನ್ನು ಹುಡುಕಿಕೊಳ್ಳುವ ಗೋಜಿಗೆ ಹೋಗದ ಹಲವರ ಬದುಕು ಅತಂತ್ರ ಸ್ಥಿತಿಯಲ್ಲಿದೆ' ಎಂದು ಸಂಪಾದಕೀಯ ಅಭಿಪ್ರಾಯಪಟ್ಟಿದೆ. ಆದರೆ ವಾಸ್ತವದಲ್ಲಿ ಹೊಟ್ಟೆಪಾಡಿಗಾಗಿ ಇಲ್ಲಿಯವರೆಗೂ ಪರ್ಯಾಯ ಕೂಲಿನಾಲಿ ಮಾಡಿ ಬದುಕಿದವರೂ ಇದ್ದಾರೆ. ಯಾಕೆಂದರೆ, ಎಂದೋ ಬರುವ ಬಿಡಿಗಾಸು ಸಂಬಳವನ್ನು ನಂಬಿ ಬದುಕು ಸಾಗಿಸುವುದುಂಟೇ? ಸರ್ಕಾರ ಅನುದಾನಿತ ಕಾಲೇಜುಗಳಲ್ಲಿ ನೇಮಕಾತಿಯನ್ನು ಹಲವು ವರ್ಷಗಳ ಕಾಲ ಸ್ಥಗಿತಗೊಳಿಸಿತ್ತು. ಉಳಿದ ಇಲಾಖೆಗಳಲ್ಲೂ ಹೊರಗುತ್ತಿಗೆ ವ್ಯವಸ್ಥೆ. ಇನ್ನೆಲ್ಲಿ ಪರ್ಯಾಯ ಮಾರ್ಗ? ಹಾಗಾಗಿ, ಅತಿಥಿ ಉಪನ್ಯಾಸಕರ ಸಮಸ್ಯೆ ಇಡೀ ವ್ಯವಸ್ಥೆಯ ಜೊತೆಗೆ ತಳುಕು ಹಾಕಿಕೊಂಡಿದೆ. ಇದನ್ನು ಮುಂದಿಟ್ಟೇ ಸರ್ಕಾರಗಳು ಇಂದಿನವರೆಗೆ ಇದನ್ನು ಪರಿಹರಿಸುವ ಗೋಜಿಗೇ ಕೈ ಹಾಕಲಿಲ್ಲ. ಆದರೆ ಬೃಹದಾಕಾರದ ಗಂಟು ಗಂಟಾದ ವ್ಯವಸ್ಥೆಯನ್ನು ಬಿಡಿಬಿಡಿಯಾಗಿ, ನಿಧಾನವಾಗಿ ಬಿಡಿಸುತ್ತಾ ಹೋಗಬೇಕಾದುದು ಸರ್ಕಾರದ ಹೊಣೆಯಲ್ಲವೇ? ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸುವುದೂ ಒಂದು ಗಂಟನ್ನು ಬಿಡಿಸಿದಂತೆ.

ಇನ್ನು ಕೆಲವರು ಅತಿಥಿ ಉಪನ್ಯಾಸಕರ ಶೈಕ್ಷಣಿಕ ಅರ್ಹತೆಯನ್ನು ಪ್ರಶ್ನಿಸುತ್ತಾರೆ. ಪದವಿ ಓದುವ ಮಕ್ಕಳ ಎದುರು ಹತ್ತಿಪ್ಪತ್ತು ವರ್ಷಗಳ ಕಾಲ ನಿಂತು ಪಾಠ ಮಾಡಿದ ಅನುಭವವೇ ಅರ್ಹತೆಯಲ್ಲವೇ? ಸರಿಯಾದ ಕಟ್ಟಡ, ಗ್ರಂಥಾಲಯ, ಆಟದ ಮೈದಾನ, ದೈಹಿಕ ಶಿಕ್ಷಣ ಶಿಕ್ಷಕರ ನೇಮಕದಂತಹ ಯಾವ ಸವಲತ್ತುಗಳೂ ಇಲ್ಲದೆ ಮನಸೋಇಚ್ಛೆ ಸರ್ಕಾರಿ ಕಾಲೇಜುಗಳನ್ನು ತೆರೆದು, ಉಪನ್ಯಾಸಕ್ಕೆ ಕನಿಷ್ಠ ಗೌರವಧನ ಕೊಟ್ಟು ದುಡಿಸಿಕೊಳ್ಳುವುದು ಶೋಷಣೆ ಅಲ್ಲವೇ?

ವೃಂದಾ ಹೆಗಡೆ, ಸಾಗರ

ಮಸಾಲೆ...

ಬೇರೆ ಜಾಬ್ ಇಲ್ಲದವರಿಗೆ
ಹಿಜಾಬ್ ವಿವಾದ ಬೇಕು
ಮತಗಳ ನಡುವೆ
ಮಸಾಲೆ ಅರೆಯಬೇಕು
ಜಾಬ್, ಜವಾಬ್ದಾರಿ ಇರುವ
ಇತರರಿಗೆಲ್ಲ ಹಿಜಾಬ್ ಬೇಕು
ಶಾಲೂ ಬೇಕು,
ಮತಗಳ ನಡುವೆ
ಸೌಹಾರ್ದ, ಕುಶಾಲೂ ಬೇಕು,
ಹೆಣ್ಣುಮಕ್ಕಳು ಖುಷಿಯಿಂದ
ಶಾಲೆಗೆ ಹೋಗಿಬರಬೇಕು.

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ಪ್ರಸಾದ ತಯಾರಿ: ಇರಲಿ ಎಚ್ಚರ

ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಹೊಸಕೋಟೆಯ ದೇವಾಲಯದಲ್ಲಿ ಹನುಮ ಜಯಂತಿ ಪ್ರಯುಕ್ತ ವಿತರಿಸಿದ ಪ್ರಸಾದ ಸೇವಿಸಿ ಒಬ್ಬ ಮಹಿಳೆ ಮೃತಪಟ್ಟು, ನೂರಾರು ಮಂದಿ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾದ ಸುದ್ದಿ ತಿಳಿದು ಬೇಸರವಾಯಿತು. ಹಬ್ಬ ಹರಿದಿನಗಳಲ್ಲಿ ಪ್ರಸಾದ ವಿತರಣೆ ಮಾಡುವುದು ಸಾಮಾನ್ಯ. ಆದರೆ ಇಂತಹ ಕಾರ್ಯಕ್ಕಾಗಿ ಅಡುಗೆ ಮಾಡುವವರು ಅತ್ಯಂತ ಹೆಚ್ಚಿನ ಎಚ್ಚರಿಕೆ ವಹಿಸಬೇಕಾಗುತ್ತದೆ. ಸೇವಿಸುವವರ ಆರೋಗ್ಯದ ಕಡೆ ಗಮನ ಕೊಡದೇ ಪ್ರಸಾದವನ್ನು ಸಿದ್ಧಪಡಿಸುವುದಕ್ಕಿಂತ ಅದನ್ನು ಕೊಡದಿರುವುದೇ ಸೂಕ್ತ. ಇನ್ನು ಮುಂದಾದರೂ ಸಾರ್ವಜನಿಕ ಸಮಾರಂಭಗಳಲ್ಲಿ ಮಾಡುವ ಅಡುಗೆ ಅಥವಾ ಪ್ರಸಾದದ ತಯಾರಿಯಲ್ಲಿ ಶುಚಿತ್ವ ಕಾಯ್ದುಕೊಳ್ಳಬೇಕು ಮತ್ತು ಎಚ್ಚರ ವಹಿಸಬೇಕು.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಬುದ್ಧಿ–ಭಾವ ಮರಗಟ್ಟಿದೆಯೇ?

'ಬರ ಬೀಳಲಿ ಎಂಬುದೇ ರೈತರ ಬಯಕೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಹೇಳಿರುವುದನ್ನು (ಪ್ರ.ವಾ., ಡಿ. 26) ಓದಿ, ಇಂತಹ ಸಚಿವರೂ ಇದ್ದಾರಲ್ಲ ಎಂದು ಪರಮಾಶ್ಚರ್ಯವಾಯಿತು. ಸ್ವಾಮಿ, ಒಂದು ಹೊತ್ತು ಬಿಸಿಲಲ್ಲಿ ಬೆಳೆಗೆ ನೀರು ಹಾಯಿಸಿ ನೋಡಿ, ಇಲ್ಲವೇ ಒಂದು ರಾತ್ರಿ ಹೊಲದಲ್ಲಿ ಉಳಿದು ಹೊಲ ಕಾದು ನೋಡಿ. ಇಷ್ಟಾಗಿಯೂ ಬೆಳೆ ನಷ್ಟವಾಗಿ ಇಲ್ಲವೇ ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಸಿಗದೆ ನಷ್ಟ ಅನುಭವಿಸಿ, ಸಾಲಗಾರರ ಕಾಟ ತಾಳಲಾಗದ ಸಂಕಟ ಅನುಭವಿಸಿ ನೋಡಿ. ಆಗ ನಿಮಗೆ ಗೊತ್ತಾಗುತ್ತದೆ, ರೈತರ ಬವಣೆ ಏನೆಂಬುದು. ಹೀಗೆ ಬರಗಾಲದಿಂದ ಸೋತು ಸುಣ್ಣವಾದ ರೈತರ ಬಗ್ಗೆ ಇಂತಹ ವ್ಯಂಗ್ಯ ಮಾತುಗಳನ್ನಾಡಲು ನಿಮಗೆ ಮನಸ್ಸಾದರೂ ಹೇಗೆ ಬಂತು? ಅಧಿಕಾರದ ಅಮಲಿನಿಂದ ನಿಮ್ಮ ಬುದ್ಧಿ–ಭಾವವೇ ಅಷ್ಟೊಂದು ಮರಗಟ್ಟಿದೆಯೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸ್ಥಳೀಯರಿಗೆ ಉದ್ಯೋಗ: ಬೇಕು ಆದ್ಯತೆ

ಮೈಸೂರು ಜಿಲ್ಲೆಯ ಕೈಗಾರಿಕೆಗಳಲ್ಲಿ ಕಡ್ಡಾಯವಾಗಿ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾಕೀತು ಮಾಡಿರುವುದು ಸಕಾರಾತ್ಮಕ ಬೆಳವಣಿಗೆ. ಅನೇಕ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ದೊರಕುತ್ತಿಲ್ಲ ಎಂಬ ಆರೋಪ ಸಾಮಾನ್ಯವಾಗಿದೆ. ನಮ್ಮ ನೆಲ, ಜಲ ಮತ್ತು ಇತರ ಸಂಪನ್ಮೂಲಗಳನ್ನು ಬಳಸಿಕೊಂಡು, ನಮಗೇ ಉದ್ಯೋಗ ನಿರಾಕರಿಸುತ್ತಿರುವ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ. ಹಲವು ಕೈಗಾರಿಕೆಗಳಲ್ಲಿ ಕನ್ನಡೇತರರದ್ದೇ ಪಾರುಪತ್ಯವಾಗಿದೆ. ಹೀಗಾಗಿ, ಸ್ಥಳೀಯರು ಉದ್ಯೋಗಕ್ಕಾಗಿ ಬೆಂಗಳೂರು, ಮೈಸೂರಿನಂತಹ ಮಹಾನಗರಗಳಿಗೆ ಗುಳೆ ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ರಾಜ್ಯ ಸರ್ಕಾರವು ಕೈಗಾರಿಕೆಗಳನ್ನು ಸ್ಥಾಪಿಸಲು ರೈತರಿಂದ ಭೂಮಿ ವಶಪಡಿಸಿಕೊಂಡ ನಂತರ ಅವರಿಗೆ ಆ ಕೈಗಾರಿಕೆಗಳಲ್ಲಿ ಉದ್ಯೋಗ ನಿರಾಕರಿಸುತ್ತಿರುವ ಪ್ರಸಂಗಗಳೂ ಬೆಳಕಿಗೆ ಬರುತ್ತಿವೆ. ನಿಜ, ಯಾವುದೇ ಉದ್ಯೋಗ ನೀಡಬೇಕಾದರೂ ಅದಕ್ಕೊಂದು ವಿದ್ಯಾರ್ಹತೆ ಹಾಗೂ ಇತರ ಮಾನದಂಡಗಳು ಇರುತ್ತವೆ. ಆದರೆ ಅದನ್ನೇ ದೊಡ್ಡದು ಮಾಡಿಕೊಂಡು, ನಮ್ಮವರಿಗೆ ಉದ್ಯೋಗವನ್ನು ನಿರಾಕರಣೆ ಮಾಡುವುದು ಸರಿಯಲ್ಲ. ನಮ್ಮವರ ಸಲುವಾಗಿ ಮಾನದಂಡಗಳಲ್ಲಿ ಕೆಲ ರಿಯಾಯಿತಿಗಳನ್ನು ನೀಡಿ, ಸ್ಥಳೀಯರಿಗೆ ಅಥವಾ ಅರ್ಹ ಕನ್ನಡಿಗರಿಗೆ ಉದ್ಯೋಗ ಕಲ್ಪಿಸಿ ಅವರ ಬದುಕಿಗೆ ನೆರವಾಗಬೇಕಾಗಿದೆ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹವಾಮಾನ ಏರಿಳಿತ ವಿಪರೀತ


ಮಿಚಾಂಗ್ ಅಬ್ಬರ

• ಮಹಮ್ಮದ್ ನೂಮಾನ್

ವರ್ಷದ ಆರಂಭದಿಂದಲೂ ದೇಶದಲ್ಲಿ ಹವಾಮಾನಕ್ಕೆ ಸಂಬಂಧಿಸಿದಂತೆ ವಿಪರೀತ ಏರಿಳಿತಗಳು ಸಂಭವಿಸಿವೆ ಎಂದು 'ಸೆಂಟರ್ ಫಾರ್ ಸೈನ್ಸ್ ಆ್ಯಂಡ್ ಎನ್ವಿರಾನ್‌ಮೆಂಟ್' (ಸಿಎಸ್‌ಇ) ಸಂಸ್ಥೆ ನವೆಂಬರ್‌ನಲ್ಲಿ ಬಿಡುಗಡೆ ಮಾಡಿದ ವರದಿಯಲ್ಲಿ ಹೇಳಿದೆ. ದೇಶದಲ್ಲಿ ಮುಂಗಾರು ಋತುವಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿರುವ ಮಾಹಿತಿ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ವರದಿಯಲ್ಲಿದೆ. ಒಟ್ಟಾರೆಯಾಗಿ ಮಳೆ ಕೊರತೆ ಶೇ 5.6 ರಷ್ಟು ಆಗಿದೆ. ಒಟ್ಟು 221 ಜಿಲ್ಲೆಗಳು ಮಳೆ ಕೊರತೆ ಅನುಭವಿಸಿದವು.

ಪೆಸಿಫಿಕ್ ಸಾಗರದಲ್ಲಿ ಉಂಟಾದ ಎಲ್ ನಿನೊ ಪರಿಣಾಮದಿಂದ ಮುಂಗಾರು ಪ್ರವೇಶ ಅಲ್ಪ ತಡವಾಗಿತ್ತು. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಹವಾಮಾನದ ಏರಿಳಿತ ವಿಪರೀತವಾಗಿತ್ತು. ಜೂನ್‌ನಲ್ಲಿ ಒಟ್ಟಾರೆ ಶೇ 10ರಷ್ಟು ಮಳೆ ಕೊರತೆ ಉಂಟಾದರೆ, ಜುಲೈನಲ್ಲಿ ಪೂರ್ವ ಮತ್ತು ಈಶಾನ್ಯ ರಾಜ್ಯಗಳು ಹೊರತುಪಡಿಸಿ ಇತರ ಕಡೆಗಳಲ್ಲಿ ಉತ್ತಮ ಮಳೆಯಾಯಿತು.

ಈ ವರ್ಷದ ಆಗಸ್ಟ್, 1901ರ ನಂತರದ ಅತ್ಯಂತ ಶುಷ್ಕ ತಿಂಗಳು ಮತ್ತು ದೇಶದಲ್ಲಿ ಇದುವರೆಗೆ ದಾಖಲಾದ ಅತ್ಯಂತ ಹೆಚ್ಚು ಉಷ್ಣಾಂಶದ ತಿಂಗಳಾಗಿ ಗುರುತಿಸಿಕೊಂಡಿದೆ. ಆಗಸ್ಟ್‌ನಲ್ಲಿ ನಿರೀಕ್ಷಿತ ಮಳೆ ಬೀಳದ ಕಾರಣ ದೇಶದ ಮೇಲೆ ಬರದ ಛಾಯೆ ಆವರಿಸಿತ್ತು. ಆದರೆ ಸೆಪ್ಟೆಂಬರ್‌ನಲ್ಲಿ ಎರಡು ಕಡೆಗಳಲ್ಲಿ ವಾತಾವರಣದಲ್ಲಿ ಆದ ಕಡಿಮೆ ಒತ್ತಡದಿಂದಾಗಿ ಸಾಕಷ್ಟು ಮಳೆ ಸುರಿದದ್ದು, ದೇಶವನ್ನು ಬರದ ಸುಳಿಯಿಂದ ಪಾರು ಮಾಡಿದೆ.

ವರ್ಷದ ಕೊನೆಯ ತಿಂಗಳಲ್ಲಿ 'ಮಿಚಾಂಗ್' ಚಂಡಮಾರುತ ಚೆನ್ನೈ ಸೇರಿದಂತೆ ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಳಿಸಿತು. ಧಾರಾಕಾರ ಮಳೆ, ಗಾಳಿಯಿಂದ ಸಂಭವಿಸಿದ ಅವಘಡಗಳಲ್ಲಿ 10ಕ್ಕೂ ಅಧಿಕ ಮಂದಿ ಪ್ರಾಣ ಕಳೆದುಕೊಂಡರು. ಚೆನ್ನೈ ನಗರದ ಹಲವು ಪ್ರದೇಶಗಳು ಮುಳುಗಡೆಯಾದವು. ಬಹುತೇಕ ರಸ್ತೆಗಳು ಜಲಾವೃತಗೊಂಡವು. ಚೆನ್ನೈ, ತಿರುವಳ್ಳೂರ್, ಕಾಂಚಿಪುರಂ ಮತ್ತು ಚೆಂಗಲ್‌ಪೇಟ್‌ನಲ್ಲಿ ಹೆಚ್ಚಿನ ಅನಾಹುತಗಳು ಸಂಭವಿಸಿದವು.

> 2023ರಲ್ಲಿ ಮುಂಗಾರು ಮಳೆಯ ಅಸಮಾನ ಹಂಚಿಕೆಯಿಂದಾಗಿ ಕೆಲವೆಡೆ ಪ್ರವಾಹ ಪರಿಸ್ಥಿತಿ ಉಂಟಾದರೆ, ಕೆಲವು ಭಾಗಗಳಲ್ಲಿ ಬರದ ಛಾಯೆ ಆವರಿಸಿತು. ಮಳೆಯ ನಿರೀಕ್ಷೆಯಲ್ಲಿ ರೈತ ಆಗಸದತ್ತ ದೃಷ್ಟಿ ನೆಟ್ಟಿರುವ ಚಿತ್ರ ಮಾತ್ರವಲ್ಲದೆ, ಜನರು ಪ್ರವಾಹದ ನೀರಿನಲ್ಲಿ ಸುರಕ್ಷಿತ ಪ್ರದೇಶಗಳತ್ತ ಸಾಗುತ್ತಿರುವ ದೃಶ್ಯವನ್ನೂ ಈ ವರ್ಷವು ನಮ್ಮ ಕಣ್ಮುಂದೆ ಇರಿಸಿದೆ

ಮುನಿದ ಭೂತಾಯಿ...

- ಉತ್ತರಾಖಂಡದ ಜೋಶಿಮಠದಲ್ಲಿ ಉಂಟಾದ ಭೂಕುಸಿತ ವರ್ಷದ ಆರಂಭದಲ್ಲಿ ದೊಡ್ಡ ಸುದ್ದಿಯಾಯಿತು. ಭೂಕುಸಿತ ವಲಯವಾಗಿ ಪರಿಗಣಿಸಿರುವ ಜೋಶಿಮಠ ಪಟ್ಟಣ ಕೇವಲ 12 ದಿನಗಳಲ್ಲಿ 5.4 ಸೆಂ.ಮೀನಷ್ಟು ಕುಸಿದಿರುವುದನ್ನು ಉಪಗ್ರಹ ಚಿತ್ರಗಳು ದೃಢಪಡಿಸಿದ್ದವು
- ಲಡಾಖ್‌ನಲ್ಲಿ ಜುಲೈನಲ್ಲಿ ಮೇಘಸ್ಫೋಟದಿಂದ ಹಠಾತ್ ಪ್ರವಾಹ ಉಂಟಾಯಿತು
- ಜುಲೈನಲ್ಲಿ ಯಮುನಾ ನದಿ ಉಕ್ಕಿ ಹರಿದು, ರಾಷ್ಟ್ರದ ರಾಜಧಾನಿಯ ಹಲವು ಪ್ರದೇಶಗಳು ಮುಳುಗಡೆಯಾದವು. ಯಮುನೆಯು 45 ವರ್ಷಗಳ ಹಿಂದಿನ ದಾಖಲೆ ಮಟ್ಟವನ್ನು ಮೀರಿ ಹರಿಯಿತು. ಹರಿಯಾಣದಲ್ಲೂ ಪ್ರವಾಹ ಪರಿಸ್ಥಿತಿ ತಲೆದೋರಿತು.
- ಹಿಮಾಚಲ ಪ್ರದೇಶದಲ್ಲಿ ಆಗಸ್ಟ್‌ನಲ್ಲಿ ಸುರಿದ ಭಾರಿ ಮಳೆಯಿಂದ ಉಂಟಾದ ಅವಘಡದಲ್ಲಿ 70ಕ್ಕೂ ಅಧಿಕ ಮಂದಿ ಮೃತಪಟ್ಟರು. ಭೂಕುಸಿತದಿಂದ ನೂರಾರು ಮನೆಗಳು ನೆಲಸಮವಾದವು.
- ಉತ್ತರಾಖಂಡದ ಗೌರಿಕುಂಡದ ಬಳಿ ಆಗಸ್ಟ್‌ನಲ್ಲಿ ಭೂ ಕುಸಿತ ಸಂಭವಿಸಿ 10ಕ್ಕೂ ಅಧಿಕ ಮಂದಿ ಮೃತಪಟ್ಟರು.
- ಮೇಘಸ್ಫೋಟ ಹಾಗೂ ನಂತರ ತೀಸ್ತಾ ನದಿಯಲ್ಲಿ ಉಂಟಾಗಿದ್ದ ಪ್ರವಾಹದಿಂದಾಗಿ ಉತ್ತರ ಸಿಕ್ಕಿಂನಲ್ಲಿ ಯೋಧರು ಸೇರಿದಂತೆ 50ಕ್ಕೂ ಅಧಿಕ ಮಂದಿ ಪ್ರಾಣ ಕಳೆದುಕೊಂಡರು.
- ನವೆಂಬರ್‌ನಲ್ಲಿ ಗುಜರಾತ್‌ನ ವಿವಿಧೆಡೆ ಸುರಿದ ಅಕಾಲಿಕ ಮಳೆಯಿಂದಾಗಿ ಸಿಡಿಲು ಬಡಿದು 27 ಮಂದಿ ಮೃತಪಟ್ಟರು.
- ಮಹಾರಾಷ್ಟ್ರದ ರಾಯಗಢದಲ್ಲಿ ಜುಲೈ 19ರ ರಾತ್ರಿ ಸಂಭವಿಸಿದ್ದ ಭೂಕುಸಿತದಲ್ಲಿ 57 ಜನ ನಾಪತ್ತೆಯಾಗಿದ್ದರು. ರಕ್ಷಣಾ ಕಾರ್ಯಾಚರಣೆಯಲ್ಲಿ 27 ಮೃತದೇಹಗಳನ್ನು ಪತ್ತೆಹಚ್ಚಲಾಗಿತ್ತು.
- ಜೂನ್‌ನಲ್ಲಿ ಬಿಪೊರ್‌ಜಾಯ್ ಚಂಡಮಾರುತದಿಂದ ಕಛ್ ಸೇರಿದಂತೆ ಗುಜರಾತ್‌ನ ಕರಾವಳಿ ಜಿಲ್ಲೆಗಳಲ್ಲಿ ಭಾರಿ ಮಳೆ ಸುರಿಯಿತು. ಬಿಪೊರ್‌ಜಾಯ್, 1977ರ ಬಳಿಕ ಅತ್ಯಂತ ಸುದೀರ್ಘ ಅವಧಿಯವರೆಗೆ 'ಸಕ್ರಿಯ'ವಾಗಿ ಇದ್ದ (13 ದಿನ 3 ಗಂಟೆ) ಚಂಡಮಾರುತ ಎನಿಸಿಕೊಂಡಿದೆ

2023 ಮರೆಯುವ ಮುನ್ನ...

ದುರ್ಘಟನೆಗಳು

ಮೇ 7: ಕೇರಳದ ಮಲಪುರಂ ಜಿಲ್ಲೆಯ ತಾನೂರು ಪ್ರದೇಶದ ತುವಲ್‌ತೀರ ಬೀಚ್ ಬಳಿ ಹೌಸ್‌ಬೋಟ್ ಮಗುಚಿ 22 ಮಂದಿ ನೀರುಪಾಲು

ಜು. 1: ಮಹಾರಾಷ್ಟ್ರದ ಬುಲ್ಡಾನಾದಲ್ಲಿ ಖಾಸಗಿ ಬಸ್ ಬೆಂಕಿಗೆ ಆಹುತಿಯಾಗಿ 25 ಮಂದಿ ಸಾವು. ನಾಗ್ಪುರ–ಮುಂಬೈ ಸಮೃದ್ಧಿ ಎಕ್ಸ್‌ಪ್ರೆಸ್ ವೇನಲ್ಲಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಹೊತ್ತಿಕೊಂಡಿತ್ತು

ಆ. 23: ಮಿಜೋರಾಂ ರಾಜಧಾನಿ ಐಜ್ವಾಲ್ ಸಮೀಪದ ಸೈರಂಗ ಬಳಿ ರೈಲ್ವೆ ಸೇತುವೆ ನಿರ್ಮಾಣ ಕಾಮಗಾರಿ ವೇಳೆ, ಕ್ರೇನ್ ಕುಸಿದು 23 ಕಾರ್ಮಿಕರ ದುರ್ಮರಣ

ಅ. 29: ಆಂಧ್ರಪ್ರದೇಶದ ವಿಜಯನಗರ ಜಿಲ್ಲೆಯ ಹೌರಾ–ಚೆನ್ನೈ ರೈಲು ಮಾರ್ಗದಲ್ಲಿ ಸಂಭವಿಸಿದ ರೈಲು ಅಪಘಾತದಲ್ಲಿ 13 ಸಾವು

ನ. 15: ಜಮ್ಮು ಮತ್ತು ಕಾಶ್ಮೀರದ ಡೋಡಾ ಜಿಲ್ಲೆಯ ಬಟೋತ್–ಕಿಸ್ತವಾರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್‌ವೊಂದು 300 ಅಡಿ ಆಳದ ಕಣಿವೆಗೆ ಬಿದ್ದು 36 ಮಂದಿ ಮೃತಪಟ್ಟರು

ಸಾವು ಗೆದ್ದ ಕಾರ್ಮಿಕರು



ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ–ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ 41 ಮಂದಿ ಕಾರ್ಮಿಕರನ್ನು 17 ದಿನಗಳ ಬಳಿಕ ರಕ್ಷಿಸಿದ್ದು, ಭಾರತದಲ್ಲಿ ನಡೆದ ಚಾರಿತ್ರಿಕ ರಕ್ಷಣಾ ಕಾರ್ಯಾಚರಣೆ ಎನಿಸಿಕೊಂಡಿದೆ.

ನವೆಂಬರ್ 12ರಂದು ಬೆಳಿಗ್ಗೆ 5.30ರ ವೇಳೆ ಸುರಂಗದಲ್ಲಿ ಕುಸಿತ ಉಂಟಾಗಿತ್ತು. ಹಲವು ಅಡೆತಡೆಗಳ ನಡುವೆಯೂ ನ.28ರಂದು ಎಲ್ಲರನ್ನೂ ಸುರಕ್ಷಿತವಾಗಿ ಹೊರಗೆ ಕರೆತರಲಾಯಿತು.

ಅವಶೇಷಗಳ ಮಧ್ಯೆ ಸುಮಾರು 60 ಮೀ. ವರೆಗೂ ಪೈಪ್‌ಗಳನ್ನು ತೂರಿಸಿ, ರಕ್ಷಣಾ ಕಾರ್ಯಾಚರಣೆ ನಡೆಸಲಾಗಿದೆ. ಯಂತ್ರಗಳ ಮೂಲಕ ಪೈಪ್ ಅಳವಡಿಸುವ ಕಾರ್ಯಕ್ಕೆ ಅಡ್ಡಿ ಉಂಟಾದಾಗ 'ರ್‍ಯಾಟ್ ಹೋಲ್ ಮೈನಿಂಗ್' ತಂತ್ರದ ಮೂಲಕ ಸುರಂಗ ಕೊರೆಯುವ ಕೆಲಸ ಮುಂದುವರಿಸಿ, ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿತ್ತು.

ದೇಶದ ವಿವಿಧ ಸಂಸ್ಥೆಗಳ ಜತೆ ವಿದೇಶದ ಸುರಂಗ ರಕ್ಷಣಾ ಕಾರ್ಯಕರ್ತ ಅರ್ನಾಲ್ಡ್ ಡಿಕ್ಸ್ ಅವರೂ ಈ ಕಾರ್ಯಾಚರಣೆಗೆ ನೆರವಾಗಿದ್ದರು.

ಒಡಿಶಾ ರೈಲು ದುರಂತ



ಮಾನವ ಲೋಪದಿಂದಾದ ದುರ್ಘಟನೆಗಳಲ್ಲಿ ಒಡಿಶಾ ರೈಲು ದುರಂತ ಎಲ್ಲಕ್ಕಿಂತಲೂ ಘೋರವಾದುದು.


ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು, ಯಶವಂತಪುರ–ಹೌರಾ ಎಕ್ಸ್‌ಪ್ರೆಸ್ ರೈಲು ಮತ್ತು ಸರಕು ಸಾಗಣೆ ರೈಲುಗಳ ಮಧ್ಯೆ ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಜೂನ್ 2ರಂದು ಸಂಭವಿಸಿದ್ದ ಅಪಘಾತದಲ್ಲಿ 291 ಮಂದಿ ಮೃತಪಟ್ಟು, 1,200ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡರು. ದುರಂತಕ್ಕೆ ಮನುಷ್ಯರಿಂದಾದ ಲೋಪವೇ ಕಾರಣ ಎಂಬುದು ರೈಲು ಸುರಕ್ಷತಾ ಕಮಿಷನರ್ (ಸಿಆರ್‌ಎಸ್) ನಡೆಸಿದ ತನಿಖೆಯಲ್ಲಿ ಬಹಿರಂಗವಾಗಿತ್ತು.

ಗಣ್ಯರ ಅಗಲಿಕೆ

ದೇಶದಲ್ಲಿ ರಾಜಕೀಯ, ಸಾಹಿತ್ಯ, ಆಧ್ಯಾತ್ಮ, ಸಂಸ್ಕೃತಿ, ಕಲೆ, ಕೈಗಾರಿಕೆ, ವ್ಯಾಪಾರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಹಲವು ಗಣ್ಯರು 2023ನೇ ಸಾಲಿನಲ್ಲಿ ನಮ್ಮನ್ನು ಅಗಲಿದ್ದಾರೆ. ಅವರಲ್ಲಿ ಕೆಲವರು ಮಾಡಿರುವ ಸಾಧನೆಗಳಿಗಾಗಿ ದೇಶದ ಜನರು ಸದಾ ಅವರನ್ನು ನೆನಪಿಸಿಕೊಳ್ಳುತ್ತಾರೆ. ಅಂಥವರಲ್ಲಿ ಕೆಲವರನ್ನು ಇಲ್ಲಿ ಸ್ಮರಿಸಲಾಗಿದೆ

• ಸಂಪತ್ ಎಸ್.

'ಜ್ಞಾನಯೋಗಿ' ಸಿದ್ಧೇಶ್ವರ ಸ್ವಾಮೀಜಿ



ಕನ್ನಡ ನಾಡು ಕಂಡ ಅಪರೂಪದ ಸಂತ, ಭಕ್ತರ ಪಾಲಿನ 'ನಡೆದಾಡುವ ದೇವರು' ಎಂದು ಪ್ರಸಿದ್ಧರಾಗಿದ್ದ ಪ್ರವಚನಕಾರ, ವಿಜಯಪುರ ಜಿಲ್ಲೆಯ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ (82) ಅವರು 2023ನೇ ಸಾಲಿನ ಆರಂಭದಲ್ಲಿಯೇ ಅಂದರೆ, ಜನವರಿ 2ರಂದು ಅಸ್ತಂಗತರಾದರು.

ಸರಳ ಸಜ್ಜನರಾಗಿದ್ದ ಸಿದ್ಧೇಶ್ವರ ಸ್ವಾಮೀಜಿಯವರ ನಿಧನಕ್ಕೆ ನಾಡಿನುದ್ದಗಲಕ್ಕೂ ಜನರು ಕಂಬನಿ ಮಿಡಿದರು. ಕರ್ನಾಟಕದ ಮೂಲೆ ಮೂಲೆಯಿಂದ ಮಾತ್ರವಲ್ಲದೆ, ನೆರೆಯ ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಿಂದಲೂ ಅಪಾರ ಸಂಖ್ಯೆಯ ಜನರು ಸ್ವಾಮೀಜಿಯ ಅಂತಿಮ ದರ್ಶನ ಪಡೆದು, ಸ್ವಾಮೀಜಿಯ ಮಾತುಗಳನ್ನು ಸ್ಮರಿಸಿದರು.

ಮಾಜಿ ಸಚಿವ ಶರದ್ ಯಾದವ್



ಕೇಂದ್ರದ ಮಾಜಿ ಸಚಿವ, ಹಿರಿಯ ರಾಜಕಾರಣಿ, ಸಂಯುಕ್ತ ಜನತಾದಳದ ಮಾಜಿ ಅಧ್ಯಕ್ಷ ಶರದ್ ಯಾದವ್ (75) ಅವರು ಜನವರಿ 12ರಂದು ನವದೆಹಲಿಯಲ್ಲಿ ನಿಧನರಾದರು. ಮಧ್ಯಪ್ರದೇಶದವರಾಗಿದ್ದ ಅವರು ಲೋಹಿಯಾವಾದಿ ಆಗಿದ್ದರು. ನಾಲ್ಕು ದಶಕಗಳ ತಮ್ಮ ರಾಜಕೀಯ ಬದುಕಿನಲ್ಲಿ ಅವರು ಹೋರಾಟದಿಂದಲೇ ಗಮನ ಸೆಳೆದಿದ್ದರು. ಲೋಕಸಭೆಗೆ ಏಳು ಬಾರಿ, ರಾಜ್ಯಸಭೆಗೆ ಮೂರು ಬಾರಿ ಆಯ್ಕೆಯಾಗಿದ್ದ ಅವರು, ಜನತಾದಳ ಪಕ್ಷದ ರಾಷ್ಟ್ರೀಯ ಸ್ಥಾಪಕ ಅಧ್ಯಕ್ಷರೂ ಆಗಿದ್ದರು. 2003ರಿಂದ 2016ರವರೆಗೆ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸಿದ್ದರು.


ಜನತಾದಳ ಅಸ್ತಿತ್ವಕ್ಕೆ ತಂದ ಪ್ರಮುಖರಲ್ಲಿ ಒಬ್ಬರಾಗಿದ್ದ ಶರದ್ ಯಾದವ್, 1989ರಲ್ಲಿ ವಿ.ಪಿ.ಸಿಂಗ್ ನೇತೃತ್ವದಲ್ಲಿ ಕೇಂದ್ರದಲ್ಲಿ ರಚನೆಯಾದ ಮೈತ್ರಿ ಸರ್ಕಾರದಲ್ಲಿ ಸಚಿವರಾಗಿದ್ದರು. ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಮಂಡಲ್ ವರದಿ ಜಾರಿ ಪ್ರಕ್ರಿಯೆಯ ಪ್ರಮುಖರಲ್ಲಿ ಇವರೂ ಒಬ್ಬರು. ಅಟಲ್ ಬಿಹಾರಿ ವಾಜಪೇಯಿ ಸಚಿವ ಸಂಪುಟದಲ್ಲಿಯೂ ಸಚಿವರಾಗಿದ್ದ ಶರದ್ ಅವರು, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸಂಚಾಲಕರಾಗಿದ್ದರು. 2013ರಲ್ಲಿ ನಿತೀಶ್ ಕುಮಾರ್ ಅವರು ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಾಗ ಶರದ್ ಯಾದವ್ ಮೈತ್ರಿಯಿಂದ ಹೊರಬಿದ್ದರು.

ಕವಿ ಕೆ.ವಿ. ತಿರುಮಲೇಶ್



ಕನ್ನಡದ ಪ್ರಸಿದ್ಧ ಕವಿ, ವಿಮರ್ಶಕ, ಭಾಷಾ ಶಾಸ್ತ್ರಜ್ಞ ಕೆ.ವಿ.ತಿರುಮಲೇಶ್ (82) ಅವರು ಜನವರಿ 30ರಂದು ಹೈದರಾಬಾದ್‌ನಲ್ಲಿರುವ ತಮ್ಮ ಮಗಳ ನಿವಾಸದಲ್ಲಿ ನಿಧನರಾದರು. ಅಕ್ಷಯ ಕಾವ್ಯ, ಅರಬ್ಬಿ, ಪಾಪಿಯೂ, ಮುಖವಾಡಗಳು, ವಠಾರ ಸೇರಿ ಹಲವು ಕವನ ಸಂಕಲನಗಳನ್ನು ಅವರು ಹೊರತಂದಿದ್ದರು. ಆರೋಪ, ಅನೇಕ, ಮುಸುಗು ಕಾದಂಬರಿಗಳನ್ನು ರಚಿಸಿದ್ದರು. ಬೇಂದ್ರೆಯವರ ಕಾವ್ಯಶೈಲಿ, ಸಮ್ಮುಖ, ಉಲ್ಲೇಖ, ಕಾವ್ಯಕಾರಣ ವಿಮರ್ಶಾ ಕೃತಿಗಳನ್ನು ರಚಿಸಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರು 60ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಅವರಿಗೆ ಬಂದಿದ್ದವು.

ಮಾಜಿ ಸಚಿವ ಶಾಂತಿಭೂಷಣ್




ಕೇಂದ್ರದ ಮಾಜಿ ಕಾನೂನು ಸಚಿವ, ಕಾನೂನು ತಜ್ಞ ಶಾಂತಿಭೂಷಣ್ (97) ಜನವರಿ 31ರಂದು ನಿಧನರಾದರು. ಮೊರಾರ್ಜಿ ದೇಸಾಯಿ ನೇತೃತ್ವದ ಸರ್ಕಾರದಲ್ಲಿ 1977ರಿಂದ 1979ರವರೆಗೂ ಅವರು ಕಾನೂನು ಸಚಿವರಾಗಿದ್ದರು. ಸಾರ್ವಜನಿಕ ಮಹತ್ವದ ಹಲವು ಪ್ರಕರಣಗಳಲ್ಲಿ ವಕಾಲತ್ತು ವಹಿಸಿದ್ದರು. ಚುನಾವಣಾ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ನಿರ್ಬಂಧವನ್ನು ಹೇರಿದ್ದ ಅಲಹಾಬಾದ್ ಹೈಕೋರ್ಟ್‌ನ ಪ್ರಕರಣದಲ್ಲಿ ಅರ್ಜಿದಾರರಾಗಿದ್ದ ರಾಜ್ ನಾರಾಯಣ್ ಪರವಾಗಿ ಶಾಂತಿಭೂಷಣ್ ವಾದ ಮಂಡಿಸಿದ್ದರು.

ಮಾಜಿ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್



ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಹಾಗೂ ಶಿರೋಮಣಿ ಅಕಾಲಿದಳದ ಹಿರಿಯ ನಾಯಕ ಪ್ರಕಾಶ್ ಸಿಂಗ್ ಬಾದಲ್ (95) ಅವರು ಏಪ್ರಿಲ್ 25ರಂದು ನಿಧನರಾದರು. 43ನೇ ವಯಸ್ಸಿಗೇ ಮುಖ್ಯಮಂತ್ರಿ ಹುದ್ದೆಗೇರಿದ್ದ ಬಾದಲ್ ಅವರು ಒಟ್ಟು ಐದು ಬಾರಿ ಪಂಜಾಬ್ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದರು.

ಉದ್ಯಮಿ ಶ್ರೀಚಂದ್ ಹಿಂದುಜಾ



ಭಾರತ ಮೂಲದ ಕೋಟ್ಯಧಿಪತಿ, ಬ್ರಿಟನ್‌ನ ಶ್ರೀಮಂತ ಕುಟುಂಬದ ಶ್ರೀಚಂದ್ ಪರಮಾನಂದ ಹಿಂದುಜಾ (87) ಅವರು ಮೇ 17ರಂದು ನಿಧನರಾದರು. ಶ್ರೀಚಂದ್ ಹಾಗೂ ಅವರ ತಮ್ಮ ಗೋಪಿಚಂದ್ ಅವರು 2022ರಲ್ಲಿ ಸಂಡೆ ಟೈಮ್ಸ್‌ನ ಶ್ರೀಮಂತರ ಪಟ್ಟಿಯಲ್ಲಿ ಸತತ 4ನೇ ಬಾರಿಗೆ ಅಗ್ರಸ್ಥಾನ ಪಡೆದಿದ್ದರು. ಅವರು ಹಲವಾರು ಕಂಪನಿಗಳ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ, ವಾಣಿಜ್ಯ ವಾಹನಗಳ ತಯಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳ ಕಂಪನಿಗಳನ್ನು ಮುನ್ನಡೆಸಿದ್ದರು.

ಎಂಬತ್ತು ಮತ್ತು ತೊಂಬತ್ತರ ದಶಕದಲ್ಲಿ ದೇಶದ ರಾಜಕೀಯ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಿದ್ದ ಬೊಫೋರ್ಸ್ ಹಗರಣದಲ್ಲಿ ಶ್ರೀಚಂದ್, ಅವರ ಇಬ್ಬರು ತಮ್ಮಂದಿರಾದ ಗೋಪಿಚಂದ್, ಪ್ರಕಾಶ್ ವಿರುದ್ಧ ಆರೋಪ ಕೇಳಿಬಂದಿತ್ತು. ಹಿಂದುಜಾ ಸಹೋದರರು ಸೇರಿದಂತೆ ಎಲ್ಲ ಆರೋಪಿಗಳನ್ನು ದೆಹಲಿ ಹೈಕೋರ್ಟ್ 2005ರಲ್ಲಿ ಖುಲಾಸೆಗೊಳಿಸಿತ್ತು.

ಗಾಂಧಿ ಮೊಮ್ಮಗ ಅರುಣ್ ಗಾಂಧಿ



ಮಹಾತ್ಮ ಗಾಂಧಿ ಅವರ ಮೊಮ್ಮಗ ಅರುಣ್ ಗಾಂಧಿ (89) ಅವರು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಮೇ 23ರಂದು ನಿಧನರಾದರು. ಲೇಖಕರಾಗಿದ್ದ ಅವರು ಸಾಮಾಜಿಕ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದರು. ತುಳಿತಕ್ಕೊಳಗಾದ ಮತ್ತು ವಲಸೆ ಕಾರ್ಮಿಕರ ಮಕ್ಕಳ ಜೀವನ ಸುಧಾರಣೆಗಾಗಿ ಇರುವ 'ಅವನಿ' ಸಂಸ್ಥೆಯಲ್ಲಿ ಮೂರು ದಶಕ ಅವರು ಸೇವೆ ಸಲ್ಲಿಸಿದ್ದರು.

ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ



ಕೇರಳದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ಉಮ್ಮನ್ ಚಾಂಡಿ (79) ಅವರು ಬೆಂಗಳೂರಿನಲ್ಲಿ ಜುಲೈ 18ರಂದು ನಿಧನರಾದರು. ಕೇರಳದ ಪುದುಪಳ್ಳಿ ವಿಧಾನಸಭಾ ಕ್ಷೇತ್ರದಿಂದ ಸತತ 12 ಬಾರಿ ಗೆದ್ದಿದ್ದ ಚಾಂಡಿ ಅವರು ಎರಡು ಅವಧಿಗೆ (2004–2006 ಹಾಗೂ 2011–2016) ಮುಖ್ಯಮಂತ್ರಿಯಾಗಿದ್ದರು. 2018ರಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಯಾಗಿ, 2006ರಿಂದ 2011ರವರೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು.

ಎಂ.ಎಸ್. ಸ್ವಾಮಿನಾಥನ್



ಖ್ಯಾತ ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ (98) ಅವರು ಸೆಪ್ಟೆಂಬರ್ 28ರಂದು ಚೆನ್ನೈನ ತಮ್ಮ ನಿವಾಸದಲ್ಲಿ ನಿಧನರಾದರು. ಸ್ವಾಮಿನಾಥನ್ ಮುಂದಾಳತ್ವದಲ್ಲಿ ಆರು ದಶಕಗಳ ಹಿಂದೆ ದೇಶದಲ್ಲಿ ನಡೆದ 'ಹಸಿರು ಕ್ರಾಂತಿ'ಯು ದೇಶವು ಆಹಾರ ಕ್ಷಾಮವನ್ನು ಮೆಟ್ಟಿ ನಿಲ್ಲಲು ನೆರವಾಯಿತು. ಗೋಧಿಯ ಉತ್ಪಾದನೆಯಲ್ಲಿ ದೇಶ, ವಿಶ್ವದ ಮುಂಚೂಣಿ ಸ್ಥಾನಕ್ಕೆ ಬಂದು ನಿಂತಿತು. ದೇಶ ಬಹುಕಾಲದಿಂದ ಎದುರಿಸುತ್ತಿದ್ದ ಆಹಾರದ ಕೊರತೆಯು 'ಹಸಿರು ಕ್ರಾಂತಿ'ಯ ಕಾರಣದಿಂದಾಗಿ ನಿವಾರಣೆ ಆಯಿತು.

ಏಷ್ಯಾದ ನೊಬೆಲ್ ಎಂದೇ ಪ್ರಸಿದ್ಧವಾಗಿರುವ 'ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ' 1971ರಲ್ಲಿ ಅವರಿಗೆ ದೊರೆತಿತ್ತು. ಭಾರತ ಸರ್ಕಾರ ಅವರಿಗೆ 1989ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಅವರು 84 ಗೌರವ ಡಾಕ್ಟರೇಟ್‌ಗಳಿಗೆ ಪಾತ್ರರಾಗಿದ್ದರು. 2007ರಿಂದ 2013ರವರೆಗೆ ರಾಜ್ಯಸಭಾ ಸದಸ್ಯರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಬುಧವಾರ ಡಿಸೆಂಬರ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪ್ರತಿಪದ್ ಅಹೋರಾತ್ರ ನಕ್ಷತ್ರ: ಆರ್ದ್ರಾ ಗಂ. 23-29 ಯೋಗ: ಬ್ರಹ್ಮ ಗಂ 26-41 ಕರಣ: ಬಾಲವ ಗಂ. 18-21, ಧನು ಮಾಸದ 11 ನೇ ದಿನ,
ಮಳೆನಕ್ಷತ್ರ: ಮೂಲಾ 4. **ರಾಹುಕಾಲ:** ಮಧ್ಯಾಹ್ನ 12-00 – 01-30
ಸೂರ್ಯೋದಯ: 06-55 **ಸೂರ್ಯಾಸ್ತ:** 06-08
ಮುಸ್ಲಿಂ ದಿನಾಂಕ: 13 ಜುಮಾದುಸ್ಸಾನಿ
ದಿನ ವಿಶೇಷ: ಆರುದ್ರ ದರ್ಶನಮ್, ಅದೃಷ್ಟ ಸಂಖ್ಯೆ: 4, 9

ಮೇಷ: ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಉತ್ತಮ ಉದ್ಯೋಗ ದೊರೆಯಲಿದೆ. ಸಿಹಿ ಪದಾರ್ಥಗಳ ಮಾರಾಟಗಾರರಿಗೆ ಉತ್ತಮವಾದ ಆದಾಯ ಇರಲಿದೆ. ಹಾಲು ಮಾರಾಟಗಾರರಿಗೆ ಅಧಿಕ ಆದಾಯ ಇರುವುದು.

ವೃಷಭ: ಅನಿವಾರ್ಯ ಕಾರಣಗಳಿಂದ ನಿಮ್ಮ ದಿನನಿತ್ಯದ ಆಚರಣೆಯಲ್ಲಿ ಕೆಲವು ಬದಲಾವಣೆಯನ್ನು ಅನುಭವಿಸುವಿರಿ. ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ.

ಮಿಥುನ: ನಿಮ್ಮ ಅಚ್ಚುಕಟ್ಟಾದ ಕೆಲಸಗಳಿಂದ ಬೇರೆ ಜನರಿಗೆ ನಿಮ್ಮ ಮೇಲಿನ ಅಭಿಪ್ರಾಯಗಳು ಬದಲಾಗುವುದು. ನಿಮ್ಮ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕಾನುಕೂಲ ಉಂಟಾಗುವುದು. ಮಾನಸಿಕ ಸ್ಥೈರ್ಯ ಹೆಚ್ಚಲಿದೆ.

ಕರ್ಕಾಟಕ: ತೆಂಗು ಬೆಳೆಗಾರರಿಗೆ ಉತ್ತಮ ಬೆಳೆಯ ಜೊತೆಗೆ ಹೆಚ್ಚಿನ ಲಾಭ ಸಿಗುವುದು. ಬಂಧುಗಳಲ್ಲಿ ಅನಗತ್ಯವಾದ ವಿವಾದಗಳು ಬೇಡ ಹಾಗೂ ಕಳೆದುಕೊಂಡಿರುವ ವಿಶ್ವಾಸವನ್ನು ಪುನಃ ಸಂಪಾದಿಸುವ ಬಗ್ಗೆ ಗಮನಹರಿಸಿ.

ಸಿಂಹ: ಜವಳಿ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಹೆಚ್ಚು ಲಾಭ ಪಡೆಯಬಹುದು. ಇಂದು ಪ್ರವೃತ್ತಿಯಿಂದಲೂ ಹೆಸರು ಸಂಪಾದನೆ ಮಾಡುವಂತಾಗಲಿದೆ. ನೂತನ ವಾಹನ ಕೊಳ್ಳುವ ಯೋಗವಿದೆ.

ಕನ್ಯಾ: ರಾಜಕೀಯ ಪ್ರವೇಶ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ಅತಿಯಾದ ಚಿಂತನೆ ನಡೆಸುವಿರಿ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ ಸಿಗುವುದು. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು.

ತುಲಾ: ತಂದೆಯ ಅಥವಾ ಹಿರಿಯರ ಮಾತಿಗೆ ಎದುರಾಡಬೇಡಿ, ನಿಮ್ಮ ಶ್ರೇಯಸ್ಸಿಗೆ ಅಡ್ಡಿಯಾಗುವುದು. ಕುಟುಂಬ ವರ್ಗದವರ ಆರೋಗ್ಯ ಉತ್ತಮವಾಗಿರುವುದು. ಪ್ರಯಾಣದಲ್ಲಿ, ವಾಹನ ಚಾಲನೆಯಲ್ಲಿ ಅಧಿಕ ಗಮನವಿರಲಿ.

ವೃಶ್ಚಿಕ: ವ್ಯಾಪಾರ ವ್ಯವಹಾರಗಳಲ್ಲಿ ಆರೋಗ್ಯಕರ ಪೈಪೋಟಿಯನ್ನು ನಡೆಸುವ ಬಗ್ಗೆ ತೀರ್ಮಾನಿಸಿ. ಪಾಲುದಾರರೊಂದಿಗೆ ಹಣಕಾಸಿನ ವಿಷಯದಲ್ಲಿ ಬಿಗಿ ಹಿಡಿತ ಪಡೆಯುವುದು ಅಗತ್ಯವಾಗುವುದು. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ಧನು: ಹಣ ಸಂಪಾದಿಸುವ ಬಗ್ಗೆ ಎಷ್ಟು ಗಮನಹರಿಸುವಿರೋ ಗಳಿಸಿದ ಹಣವನ್ನು ಸದ್ಬಳಕೆ ಮಾಡುವ ಬಗ್ಗೆಯೂ ಅಷ್ಟೇ ಗಮನಹರಿಸಿ. ಹೊಸ ಕೆಲಸಗಳ ಆರಂಭಕ್ಕೆ ಸೂಕ್ತ ಸಮಯವಲ್ಲ. ಮನದ ಗೊಂದಲ ದೂರಾಗಲಿದೆ.

ಮಕರ: ಬೇರೆಯವರ ಅಧೀನದಲ್ಲಿರದೆ, ಸ್ವಉದ್ಯೋಗ ಮಾಡುವ ಆಸೆಯು ನಿಮ್ಮನ್ನು ಕಾಡಲಿದೆ. ಆಹಾರ ನಿಯಮದಿಂದ ಆರೋಗ್ಯದಲ್ಲಿ ಸುಧಾರಣೆ ಕಾಣುವುದು. ಹಣ್ಣಿನ ವ್ಯಾಪಾರಿಗಳಿಗೆ ಉತ್ತಮ ಲಾಭವಿರುವುದು.

ಕುಂಭ: ಆಸ್ತಿಗಾಗಿ ನಿವೇಶನ ಖರೀದಿಸಲು ಇಂದು ಒಳ್ಳೆಯ ಕಾಲವಾಗಿದೆ. ನೂತನ ವಾಹನ ಖರೀದಿಸಬೇಕೆಂಬ ನಿಮ್ಮ ಕನಸು ನನಸಾಗುವುದು. ವೈಯಕ್ತಿಕ ಸಮಸ್ಯೆಗಳು ಬಗೆಹರಿಯುವುದು.

ಮೀನ: ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಹೆಚ್ಚಿನ ಮುತುವರ್ಜಿ ತೋರುವುದು ಉತ್ತಮ. ಶತ್ರುಗಳ ಉಪಟಳವನ್ನು ತಡೆಯಲು ತಂತ್ರಗಾರಿಕೆಯನ್ನು ಮಾಡಬೇಕಾಗುತ್ತದೆ. ಇನ್ನೊಬ್ಬರ ಬಗ್ಗೆ ಕೆಟ್ಟ ಮಾತುಗಳು ಬೇಡ.

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಗುಬ್ಬಕ್ಕನ ಮಮತೆ

ಆಗ ಇವರು ತುಂಬಾ ಒರಟು ಮನುಷ್ಯ, ಸಿಟ್ಟು, ಜಗಳದಲ್ಲಿ ಹೆಚ್ಚು ರುಚಿ. ಜೊತೆಗಾರರ ಸಹವಾಸವೂ ಹಾಗೆ ಇತ್ತು. ಪಂಪಯ್ಯ ಮಳೀಮಠ ಎಂದರೆ ಜನ ಹೆದರುತ್ತಿದ್ದರು. ಕುಡಿತವೂ ಹೆಚ್ಚಾಗಿ ಮೂರು ಸಲ ಮದ್ಯಪಾನ ಸಂಯಮ ಕೇಂದ್ರಕ್ಕೂ ಹೋಗಿ ಬಂದರು. ನಿಲ್ಲದ ತಾಯಿಯ ಕಣ್ಣೀರು. ತಂದೆ ವೈದ್ಯರಿಗೆ ಕೈ ಮುಗಿದು 'ಉಳಿದರೆ ನಿಮ್ಮ ಕೈಯಲ್ಲಿ. ನೀವೇ ದೇವರು ಹೆಂಗಾದ್ರೂ ಕಾಪಾಡ್ರಪ್ಪ' ಎಂಬ ವಿನಯದ ಬೇಡಿಕೆ. ಅಚ್ಚರಿ ಎಂಬಂತೆ ಉಳಿದು ಬಿಟ್ಟರು.

ಬಿಗುವಿನ ಮನಃಸ್ಥಿತಿ ಬೆಳೆಸಿಕೊಂಡಿದ್ದ ಪಂಪಯ್ಯ ಒಂದು ದಿನ ಬೇಸರವಾಗಿ ಒಂದು ಬಂಡೆಯ ಮೇಲೆ ಕೂತಿದ್ದರು. ತಮ್ಮ ಕಣ್ಣೆದುರು ಎರಡು ಹಕ್ಕಿಗಳು ಬಂದು ಕೂತವು. ಗುಬ್ಬಚ್ಚಿ ತನ್ನ ಮರಿಯನ್ನು ಪ್ರೀತಿಸುವ, ಮುದ್ದಿಸಿ ಕಾಳು ಹೆಕ್ಕಿ ತಿನ್ನಿಸುವ ದೃಶ್ಯ ನಡೆದಿತ್ತು. ತದೇಕಚಿತ್ತರಾಗಿ ಅದನ್ನೇ ನೋಡಿದರು. ಯಾವುದೇ ಸ್ವಾರ್ಥವಿಲ್ಲದೆ ತಾಯಿ ತನ್ನ ಮಗುವಿಗಾಗಿ ಪಡುತ್ತಿರುವ ಕಷ್ಟ ನೋಡಿ ಥಟ್ಟನೆ ಕಣ್ಣೀರು ಬಂತು. ತನ್ನವ್ವ ಪಟ್ಟ ಸಂಕಟ, ತಾನು ಉಡಾಳನಾಗಿ ನಡೆದುಕೊಂಡ ರೀತಿ, ಎಲ್ಲರಿಗೂ ಕೊಟ್ಟ ತಾಪತ್ರಯ ಎಲ್ಲವೂ ನೆನಪಾಗಿ ಬಿಕ್ಕಿಬಿಕ್ಕಿ ಅತ್ತರು. ಅಲ್ಲಿಂದ ಮುಂದೆ ಬೇಸರ ಆದಾಗೆಲ್ಲಾ ಹೋಗಿ ಹಕ್ಕಿಗಳ ಚಲನವಲನ, ಹಾಡು ಹರ್ಷಗಳ ನೋಡುವ ಹವ್ಯಾಸ ಬೆಳೆಯಿತು. ವಾರ, ತಿಂಗಳು, ವರುಷಗಳು ಕಳೆದಂತೆ ದಿನದಿನವೂ ಕಂಡ ಪಕ್ಷಿಗಳ ದಿನಚರಿ ಚೇತೋಹಾರಿ ಮಾನಸಿಕ ಬದಲಾವಣೆಗೆ ನಾಂದಿಯಾಯಿತು. ನೆಮ್ಮದಿ, ಸಾಂತ್ವನ, ನಗು, ಪ್ರೀತಿಯ ನಡವಳಿಕೆಗಳು ಹುಟ್ಟಿಕೊಂಡವು.

ಮುಂದೆ ಕ್ಯಾಮೆರಾ ಕೊಂಡರು. ಆ ಊರಿಗೆ ಬರುವ ಪಕ್ಷಿ ಪ್ರೇಮಿಗಳೊಟ್ಟಿಗೆ ತಿರುಗಾಡುವ ಹವ್ಯಾಸ ಬೆಳೆಸಿಕೊಂಡರು. ಪಕ್ಷಿಗಳ ಕರೆದು ಕಾಳು, ಹಣ್ಣು ತಿನ್ನಿಸಿ ನೀರಿಕ್ಕುವ ಅಭ್ಯಾಸ ರೂಢಿಸಿಕೊಂಡರು. ನಿಧಾನಕ್ಕೆ ಅವರೊಳಗಿನ ಒರಟುತನ ಮಾಯವಾಗಿ ಅವರೊಳಗೊಬ್ಬ ಮೃದುಮನುಷ್ಯ ಜಾಗೃತಗೊಂಡ. ಪಕ್ಷಿಗಳ ಧ್ವನಿಯನ್ನು ಆಲಿಸುತ್ತಾ ಅವರ ಬದುಕು ಸಾಗುತ್ತಾ ಹೋಗಿ ಈಗ ಅವರೊಬ್ಬ ಅಂತರ ರಾಷ್ಟ್ರೀಯ ಮಟ್ಟದ ಪಕ್ಷಿ ತಜ್ಞರಾಗಿದ್ದಾರೆ.

ದೇಶವಿದೇಶದ ಜನ ಅವರನ್ನು ಹುಡುಕಿಕೊಂಡು ಬರುತ್ತಾರೆ. ಅವರ ಸಮಯಕ್ಕಾಗಿ ಕಾಯುತ್ತಾರೆ. ಅಂತಹ ಕಲ್ಲು ಬಂಡೆ ಮನುಷ್ಯನನ್ನು ಹೀಗೆ ಮಾಯದಂತೆ ಬದಲಾಯಿಸಿದ ಆ ಗುಬ್ಬಚ್ಚಿಗಳು ಈಗ ಇರಲಿಕ್ಕಿಲ್ಲ. ಈ ವಿಷಯವೂ ಅವುಗಳಿಗೆ ತಿಳಿದಿರಲು ಸಾಧ್ಯವಿಲ್ಲ. ಈಗಲೂ ಪ್ರಕೃತಿಯ ನಡುವೆ ಬದುಕುತ್ತಿರುವ ಅವರಿಗೆ ಅನ್ನ ಕೊಡುವ ದೇವರ ರೂಪದಲ್ಲಿ ಹಕ್ಕಿಗಳು ಕಾಣುತ್ತವೆ. ಹೀಗೆ ಪಕ್ಷಿಗಳ ಸಖ್ಯದಿಂದ ಮನುಷ್ಯರು ಬದಲಾಗುತ್ತಾರೆ ಎಂಬುದು ವಿಚಿತ್ರ ಎನಿಸಬಹುದು. ಆದರಿದು ಸತ್ಯ. ಪ್ರಕೃತಿಯ ಈ ವಿಸ್ಮಯ ಜೀವಿಗಳಲ್ಲಿ ಇನ್ನೂ ನಾವು ಕಾಣದ ಏನೇನೂ ಶಕ್ತಿ ಅಡಗಿದೆಯೋ? ಬಲ್ಲವರಾರು? ಸೋಜಿಗವೆಂದರೆ ಪಕ್ಷಿತಜ್ಞ ಸಲೀಂಅಲಿ ಅವರ ದೊಡ್ಡ ಬದುಕನ್ನೂ ರೂಪಿಸಿದ್ದು ಕೂಡ ಒಂದು ಯಕಶ್ಚಿತ್ ಗುಬ್ಬಚ್ಚಿ.

ಪದಬಂಧ 5542 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತುಂಬಾ ಜೋರಾದ ನಗು (4)
2.ಹೊಸದಾಗಿ ಅಭಿನಯಿಸುತ್ತಿರುವವನು (4)
4.ನಾಮ ಧರಿಸಿದವನ ಹೆಸರಿಲ್ಲಿ ದೀರ್ಘವಾಗಿದೆ (4)
6.ಸಂತನಿಂದ ಬಂದಿರುವ ಪೀಳಿಗೆ (3)
7.ಯೌವ್ವನದಲ್ಲಿ ನೋಡಿದ ಕಾಡು (2)
9.ಧಾನ್ಯ ಸಂಗ್ರಹಿಸುವ ಸ್ಥಳ (3)
11.ಪಯಣದಲ್ಲಿನ ಜೂಜು ಉಲ್ಟಾ ಆಗಿಬಿಟ್ಟಿದೆ (2)
13.ಸುಳ್ಳು ಸುಳ್ಳೇ ಹಬ್ಬಿದ ಗಾಳಿ ಸುದ್ದಿ (3)
14.ಅದೇ ತಾನೆ ಕಡೆದ ಹೊಸಬೆಣ್ಣೆ (4)
16.ಅಳತೆಗೆ ಮೀರಿದ ಸ್ಥಿತಿ (4)
17.ಇದಿನ್ನೂ ಎಳೆ ಮಗು (4)

ಮೇಲಿಂದ ಕೆಳಕ್ಕೆ
1.ಒಂದನ್ನೊಂದು ಅಗಲದೇ ಇರುವಂಥದ್ದು (5)
2.ಮೂಗಿಗೇರಿಸುವ ತಂಬಾಕಿನ ಪುಡಿ (2)
3.ಪ್ರಾಯಕ್ಕೆ ಬಂದವನು (5)
5.ಬೇಡುವವ ಇಲ್ಲಿದ್ದಾನೆ (3)
8.ಹೊಸದಾಗಿ ಮದುವೆಯಾದ ಗಂಡ ಹೆಂಡಿರು (5)
10.ಜೋಪಾನ ಎಂದು ಹೀಗೆನ್ನಿ (3)
12.ಅತಿಯಾಗಿ ಕಳವಳ ಪಡು (5)
15.ಸಂಕಟದಿಂದ ಕಟ್ಟಿರುವ ತೆರ (2)

1				■	2		3	
	■	■	■	■		■		■
4			5	■	■	6		
	■	■		■	■	■		■
7	8	■	9		10	■	11	12
■		■	■	■		■	■	
13			■	■	14			
■		■	15	■	■	■	■	
16				■	17			

5541ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಎಡಚ 6.ಕುಟುಂಬವರ್ಗ
7.ವನಚರ 9.ಉರ
10.ಗಣಪ 12.ಮತ
14.ಸದಾಶಯ 16.ನವೀಕರಣ
18.ವಸೂಲಿ

ಮೇಲಿಂದ ಕೆಳಕ್ಕೆ:
1.ಎಡವಟ್ಟು 2.ಚಮಚ
3.ಬಾಕು 4.ಜಂಬಗಾರ
5.ವರ್ಗಮೂಲ 8.ರಕ್ತಗತ
9.ಉಪವಾಸ 11.ಪವನಜ
12.ಮಧುಕರಿ 13.ಜಯಶಾಲಿ
15.ದಾನವ 17.ಣಬಾ

ಸುಡೊಕು 5927

	6			2		5		
5		4			7		2	3
	2		5			6		7
8		1		3				9
	3		9		8			4
9		2		5		3		6
7		3		9				
	8		7		5	9	3	
		9		8			7	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5926 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಮುಂಬೈ ಧಾರಣೆ

ಶೇಂಗಾ

26-12-2023

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1600)
ಒಂದು ವಾರದ ಡೆಲಿವರಿ	1600 (1595)
ಸೋಯಾ ಕಚ್ಚಾ	835 (832)
ಪಾಮ್ ವಾರದ ಡೆಲಿವರಿ	820 (814)
ಸೂರ್ಯಕಾಂತಿ ಎಣ್ಣೆ ಕಚ್ಚಾ	820 (830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,800 (62,600)
ಬೆಳ್ಳಿ ಕೆ.ಜಿ 74,700 (74,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು ▲229

ಹಿಂದಿನ ಅಂತ್ಯ 71,106
ಇಂದಿನ ಅಂತ್ಯ 71,336

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,349
ಇಂದಿನ ಅಂತ್ಯ	21,449
▲	91
ದಿನದ ಕನಿಷ್ಠ	21,335

ವಿನಿಮಯ ದರ

$ ಡಾಲರ್	83.20
£ ಪೌಂಡ್	105.61
€ ಯೂರೊ	91.70
¥ ಯೆನ್ (100ಕ್ಕೆ)	.58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹635
12 ಮೊಟ್ಟೆಗೆ ₹82
ಮೈಸೂರು
100 ಮೊಟ್ಟೆಗೆ ₹635

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610(1590)
ಸೋಯಾ (ರಿಫೈನ್ಡ್)	₹875 (880)
ಸೂರ್ಯಕಾಂತಿ (ರಿಫೈನ್ಡ್)	₹890 (895)
ಪಾಮೋಲಿನ್	₹820 (818)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹300-453
ದ್ವಿತಳಿ (ಬಿ.ವಿ) ₹285-559

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹150.50
ಆರ್‌ಎಸ್‌ಎಸ್-5 ₹146.50
ಗುಡ್ ಲಾಟ್ ₹129.50
(ಪ್ರತಿ ಕೆ.ಜಿಗೆ)

ದೇಶದಲ್ಲೇ ಡ್ರೋನ್, ಗೊಂಬೆ, ರೋಬೊಟ್ ತಯಾರಿಕೆಗೆ ಒತ್ತು

ಮೇಕ್ ಇನ್ ಇಂಡಿಯಾ 2.0 ಜಪ



ನವದೆಹಲಿ (ಪಿಟಿಐ): ಡ್ರೋನ್, ಗೊಂಬೆ, ರೋಬೊಟ್, ಪೀಠೋಪಕರಣ, ಅಲ್ಯುಮಿನಿಯಂ, ಜವಳಿ ಸೇರಿದಂತೆ 24 ಉಪ ವಲಯಗಳಲ್ಲಿ 'ಮೇಕ್ ಇನ್ ಇಂಡಿಯಾ 2.0' ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ.

ಈ ವಲಯಗಳಲ್ಲಿ ಸ್ಥಳೀಯವಾಗಿಯೇ ತಯಾರಿಕೆಗೆ ಒತ್ತು ನೀಡಲಾಗುವುದು. ತಯಾರಾಗುವ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡುವ ಮೂಲಕ ಆಮದು ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ತಿಳಿಸಿದೆ.

ದೇಶದಲ್ಲಿ ಈಗಾಗಲೇ ಮೇಕ್ ಇನ್ ಇಂಡಿಯಾ ಯೋಜನೆಯು ಫಲಕಾರಿಯಾಗಿದೆ. 'ಮೇಕ್ ಇನ್ ಇಂಡಿಯಾ 2.0' ಹೆಸರಿನಡಿ ಉಪ ವಲಯಗಳಲ್ಲಿ ಪ್ರಗತಿ ಸಾಧಿಸಲು ಗುರಿ ನಿಗದಿಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಂಗಳವಾರ ಹೇಳಿದೆ.

ಈ ನಿಟ್ಟಿನಲ್ಲಿ ಡಿಪಿಐಐಟಿಯು 15 ತಯಾರಿಕಾ ವಲಯಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆ ಸಿದ್ಧಪಡಿಸಲಿದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು 12 ಸೇವಾ ವಲಯಗಳಿಗೆ ಸಂಬಂಧಿಸಿದಂತೆ ಕ್ರಿಯಾಯೋಜನೆ ಸಿದ್ಧಪಡಿಸಲಿದೆ.

'ಪ್ರಸ್ತುತ ಡಿಪಿಐಐಟಿಯು ಭಾರತದಲ್ಲಿ ಕೈಗಾರಿಕೆಯನ್ನು ಬಲವರ್ಧನೆಗೊಳಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ 24 ಉಪ ವಲಯಗಳಲ್ಲಿ ಕಾರ್ಯತತ್ಪರವಾಗಿದೆ. ಈ ವಲಯಗಳನ್ನು ಸ್ಪರ್ಧಾತ್ಮಕವಾಗಿ ಸಜ್ಜುಗೊಳಿಸುವುದು, ರಫ್ತು ಸಾಮರ್ಥ್ಯ ಹೆಚ್ಚಳಕ್ಕೆ ಉತ್ತೇಜನ ನೀಡುವುದು ಸೇರಿದಂತೆ ಉದ್ಯೋಗಾವಕಾಶ ಹೆಚ್ಚಿಸಲು ಒತ್ತು ನೀಡಿದೆ' ಎಂದು ಸಚಿವಾಲಯವು ತಿಳಿಸಿದೆ.

ನಿಗದಿಪಡಿಸಿರುವ ವಲಯಗಳ ಬೆಳವಣಿಗೆಗೆ ಸಮಗ್ರ ಹಾಗೂ ಸಂಘಟಿತ ಪ್ರಯತ್ನದ ಅಗತ್ಯವಿದೆ ಎಂದು ಸಚಿವಾಲಯ ಹೇಳಿದೆ.

ಉಪ ವಲಯ ಯಾವುವು?

ಪೀಠೋಪಕರಣ, ಹವಾ ನಿಯಂತ್ರಣ, ಚರ್ಮ ಮತ್ತು ಪಾದರಕ್ಷೆ, ಸಿದ್ಧ ಆಹಾರ, ಮೀನುಗಾರಿಕೆ, ಕೃಷಿ ಉತ್ಪನ್ನ, ವಾಹನ ಘಟಕಗಳು, ಅಲ್ಯುಮಿನಿಯಂ, ಎಲೆಕ್ಟ್ರಾನಿಕ್ಸ್, ಕೃಷಿ ರಾಸಾಯನಿಕ, ಉಕ್ಕು, ಜವಳಿ, ಎಲೆಕ್ಟ್ರಿಕ್ ವಾಹನ ತಯಾರಿಕಾ ಘಟಕಗಳು ಮತ್ತು ಸಂಯೋಜಿತ ಘಟಕಗಳು, ಎಥೆನಾಲ್, ಸೆರಾಮಿಕ್ಸ್, ಸೆಟ್‌ಟಾಪ್ ಬಾಕ್ಸ್, ರೋಬೊಟ್, ಟಿ.ವಿ, ಸಿ.ಸಿ ಕ್ಯಾಮೆರಾಗಳು, ಬೊಂಬೆಗಳು, ಡ್ರೋನ್, ವೈದ್ಯಕೀಯ ಉಪಕರಣ, ಕ್ರೀಡಾ ಉಪಕರಣ, ಜಿಮ್ ಉಪಕರಣ ತಯಾರಿಕಾ ವಲಯ.

ಭಾರತ್‌ಪೇ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಫಿನ್‌ಟೆಕ್ ಕಂಪನಿಯಾದ ಭಾರತ್‌ಪೇ ಪ್ರಸಕ್ತ ಹಣಕಾಸು ವರ್ಷದಲ್ಲಿ ₹904 ಕೋಟಿ ವರಮಾನ ಗಳಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಆದಾಯದಲ್ಲಿ ಶೇ 182ರಷ್ಟು ವೃದ್ಧಿಯಾಗಿದೆ ಎಂದು ಕಂಪನಿ ಹೇಳಿದೆ.

ಇದೇ ಅವಧಿಯಲ್ಲಿ ಕಂಪನಿಯ ನಷ್ಟವು ₹5,594 ಕೋಟಿಯಿಂದ ₹886 ಕೋಟಿಗೆ ಇಳಿದಿದೆ. ವ್ಯಾಪಾರಿಗಳಿಗೆ ಸಾಲ ನೀಡುವಿಕೆ ವಿಭಾಗದ ಬೆಳವಣಿಗೆಯು ಗಮನಾರ್ಹವಾಗಿದೆ.

ವ್ಯಾಪಾರಿಗಳ ಸಬಲೀಕರಣಕ್ಕೆ ಆದ್ಯತೆ ನೀಡಿದ್ದು, ಸಾಲ ನೀಡಿಕೆಯಲ್ಲಿ ಶೇ 129ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ.

ವ್ಯಾಪಾರಿ ಕೇಂದ್ರಿತ ಸೇವೆ ಮತ್ತು ಉತ್ಪನ್ನಗಳಿಗೆ ಚಾಲನೆ ನೀಡುವ ಜತೆಗೆ ಸುಸ್ಥಿರ ಲಾಭದತ್ತ ಗಮನ ಕೇಂದ್ರೀಕರಿಸಲಾಗಿದೆ. 2022ರ ಹಣಕಾಸು ವರ್ಷದಲ್ಲಿ ₹321 ಕೋಟಿ ಲಾಭಗಳಿಸಲಾಗಿತ್ತು ಎಂದು ತಿಳಿಸಿದೆ.

ಶೇ 1ರಷ್ಟು ಚಾಲ್ತಿ ಖಾತೆ ಕೊರತೆ

ಮುಂಬೈ (ಪಿಟಿಐ): ದೇಶದಲ್ಲಿ ಚಾಲ್ತಿ ಖಾತೆ ಕೊರತೆಯು (ಸಿಎಡಿ) ಪ್ರಸಕ್ತ ಹಣಕಾಸು ವರ್ಷದ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಜಿಡಿಪಿಯ ಶೇ 1ರಷ್ಟು (₹69,000 ಕೋಟಿ) ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ದೇಶದಲ್ಲಿ ವ್ಯಾಪಾರದ ಕೊರತೆ ಜಾಸ್ತಿಯಾಗಿದೆ. ಮತ್ತೊಂದೆಡೆ ಸೇವಾ ರಫ್ತು ಪ್ರಮಾಣ ಹೆಚ್ಚಳವಾಗಿದೆ. ಈ ಅಂಶಗಳೇ ಚಾಲ್ತಿ ಖಾತೆ ಕೊರತೆ ಸೃಷ್ಟಿಗೆ ಕಾರಣವಾಗಿವೆ ಎಂದು ಮಂಗಳವಾರ ಬಿಡುಗಡೆಯಾಗಿರುವ ಆರ್‌ಬಿಐ ವರದಿ ಹೇಳಿದೆ. ಮೌಲ್ಯದ ಲೆಕ್ಕದಲ್ಲಿ ಭಾರತದ ಚಾಲ್ತಿ ಖಾತೆ ಕೊರತೆಯು 2022-23ನೇ ಸಾಲಿನ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹2.56 ಲಕ್ಷ ಕೋಟಿಗೆ ತಲುಪಿತ್ತು (ಶೇ 3.8).

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್-ಜೂನ್ ಮೊದಲ ತ್ರೈಮಾಸಿಕದಲ್ಲಿ ₹76,483 ಕೋಟಿ (ಶೇ 1.1ರಷ್ಟು) ಇತ್ತು. ದೇಶದಲ್ಲಿ ಸಾಫ್ಟ್‌ವೇರ್, ವ್ಯಾಪಾರ ಮತ್ತು ಪ್ರವಾಸಿ ಸೇವೆ ಒಳಗೊಂಡ ಸೇವಾ ರಫ್ತು ಶೇ 4.2ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಒತ್ತು

ನವದೆಹಲಿ (ಪಿಟಿಐ): ದೇಶದಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ನಿರ್ಧರಿಸಲಾಗಿದೆ. ಇಂಗಾಲದ ಹೊರಸೂಸುವಿಕೆ ಪ್ರಮಾಣವನ್ನು ತಗ್ಗಿಸುವುದೇ ಇದರ ಮೂಲ ಉದ್ದೇಶವಾಗಿದೆ ಎಂದು ಕೇಂದ್ರ ಇಂಧನ ಸಚಿವಾಲಯ ಹೇಳಿದೆ.



2030ರ ವೇಳೆಗೆ ದೇಶದಲ್ಲಿ 500 ಗಿಗಾವಾಟ್‌ನಷ್ಟು ನವೀಕರಿಸಬಹುದಾದ ಇಂಧನ ಉತ್ಪಾದನೆಯ ಗುರಿ ಹೊಂದಲಾಗಿದೆ. ಆ ಮೂಲಕ ಪಳೆಯುಳಿಕೆ ಇಂಧನ ಬಳಕೆಯ ಪ್ರಮಾಣವನ್ನು ಶೇ 50ರಷ್ಟು ತಗ್ಗಿಸಲು ತೀರ್ಮಾನಿಸಲಾಗಿದೆ. 2024ರಲ್ಲಿ ಈ ವಲಯದಲ್ಲಿನ ಹೂಡಿಕೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 83ರಷ್ಟು ಹೆಚ್ಚಲಿದೆ ಎಂದು ಸಚಿವಾಲಯ ತಿಳಿಸಿದೆ.

2070ರ ವೇಳೆಗೆ ರಾಷ್ಟ್ರದಲ್ಲಿ ಇಂಗಾಲ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸುವುದು ಕೇಂದ್ರ ಸರ್ಕಾರದ ಗುರಿಯಾಗಿದೆ. ಮುಂದಿನ ಏಳು ವರ್ಷಗಳಲ್ಲಿ ಪಳೆಯುಳಿಕೆಯೇತರ ಇಂಧನ ಬಳಕೆಯನ್ನು ಶೇ 65ರಷ್ಟು ಹೆಚ್ಚಿಸಲು ನಿರ್ಧರಿಸಿದೆ.

ಕೇಂದ್ರ ಇಂಧನ ಸಚಿವ ಆರ್.ಕೆ. ಸಿಂಗ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿಯೂ ಇದನ್ನು ಪುನರುಚ್ಚರಿಸಿದ್ದಾರೆ.

'ಈಗಿರುವ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಸಾಮರ್ಥ್ಯದ ಜೊತೆಗೆ ಮುಂದಿನ ವರ್ಷ ಹೆಚ್ಚುವರಿಯಾಗಿ 25 ಗಿಗಾವಾಟ್ ಉತ್ಪಾದನೆಯ ಗುರಿ ಹೊಂದಲಾಗಿದೆ. ಇದಕ್ಕಾಗಿ ₹1.37 ಲಕ್ಷ ಕೋಟಿ ಹೂಡಿಕೆ ನಿರೀಕ್ಷಿಸಲಾಗಿದೆ. ಹಿಂದಿನ ವರ್ಷ 13.5 ಗಿಗಾವಾಟ್ ಉತ್ಪಾದನೆಗೆ ₹74,250 ಕೋಟಿ ಹೂಡಿಕೆಯಾಗಿತ್ತು' ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಹಸಿರು ಜಲಜನಕ ಉತ್ಪಾದನೆ

ಸೌರ ಮತ್ತು ಪವನ ಶಕ್ತಿ ಹೊರತಾಗಿ ದೇಶದಲ್ಲಿ ಹಸಿರು ಜಲಜನಕ (ಗ್ರೀನ್ ಹೈಡ್ರೋಜನ್) ಉತ್ಪಾದನೆಗೂ ಕೇಂದ್ರ ಮುಂದಾಗಿದೆ. ಡೀಸೆಲ್ ಬಳಕೆಯ ಪ್ರಮಾಣವನ್ನು ತಗ್ಗಿಸುವುದು ಇದರ ಮೂಲ ಉದ್ದೇಶವಾಗಿದೆ.

ದೇಶದಲ್ಲಿ ಬಹುತೇಕ ಪ್ರಯಾಣಿಕ ಮತ್ತು ಸರಕು ಸಾಗಣೆ ವಾಹನಗಳು ಡೀಸೆಲ್ ಮೇಲೆ ಅವಲಂಬಿತವಾಗಿವೆ. ಹಾಗಾಗಿ, ದೇಶದಲ್ಲಿ ಜಲಜನಕ ಉತ್ಪಾದನೆಗೆ ಉತ್ತೇಜಿಸಲು ಸರ್ಕಾರ ಮುಂದಾಗಿದೆ. ಈ ನಿಟ್ಟಿನಲ್ಲಿ ಕಳೆದ ಜನವರಿಯಲ್ಲಿ ರಾಷ್ಟ್ರೀಯ ಹಸಿರು ಜಲಜನಕ ಕಾರ್ಯಕ್ರಮಕ್ಕೆ ₹19,744 ಕೋಟಿ ವೆಚ್ಚ ಮಾಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿತ್ತು.

'ಹಸಿರು ಜಲಜನಕ ಉತ್ಪಾದನೆಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ತೀರ್ಮಾನವು ಪರಿಸರದ ಸುಸ್ಥಿರತೆಗೆ ಸಹಕಾರಿಯಾಗಿದೆ. ಇಡೀ ವಿಶ್ವ ಕೂಡ ಈ ಇಂಧನದ ಬಳಕೆಯತ್ತ ಆಸ್ಥೆವಹಿಸಲು ನೆರವಾಗಲಿದೆ' ಎಂದು ಗ್ರೀನ್ ಹೈಡ್ರೋಜನ್ ಸಂಬಂಧ ರಚಿಸಿರುವ ಸಿಐಐ ಕಾರ್ಯಪಡೆ ಅಧ್ಯಕ್ಷ ವಿನೀತ್ ಮಿತ್ತಲ್ ಹೇಳಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪ್ರವೀಣ್ ಕುಮಾರ್ ಎನ್., ರಾಯಚೂರು

● **ಪ್ರಶ್ನೆ:** ನಾನು ಬ್ಯಾಂಕ್ ಒಂದರಲ್ಲಿ ನಿಖರ ಠೇವಣಿ ಇಟ್ಟಿದ್ದೇನೆ. ಇದಕ್ಕೆ ₹6 ಸಾವಿರ ಮಾಸಿಕ ಬಡ್ಡಿ ಬರುತ್ತಿದೆ. ಇದಕ್ಕಾಗಿ ನಿಕ್ಷೇಪಿಸಿರುವ ಮೊತ್ತ ₹13 ಲಕ್ಷ. ಇದಕ್ಕೆ ಬಂದ ಬಡ್ಡಿಯಲ್ಲಿ ₹5 ಸಾವಿರ ಮೊತ್ತವನ್ನು ಐದು ವರ್ಷಕ್ಕೆ ಆರ್.ಡಿ ಇಟ್ಟಿದ್ದೇನೆ. ನನ್ನಲ್ಲಿರುವ ಒಟ್ಟು ₹20 ಲಕ್ಷದಲ್ಲಿ ಈ ಮೊತ್ತ ಹೂಡಿಕೆ ಮಾಡಿ ಉಳಿದ ₹7 ಲಕ್ಷ ನನ್ನ ಉಳಿತಾಯ ಖಾತೆಯಲ್ಲಿದೆ. ಇದರಿಂದ ಹೆಚ್ಚು ಲಾಭ ಪಡೆಯಲು ಇದಕ್ಕಿಂತ ಉತ್ತಮವಾದ ಹೂಡಿಕೆಯ ಮಾರ್ಗವನ್ನು ದಯವಿಟ್ಟು ನನಗೆ ಸೂಚಿಸಿ.

ನಾನು ಕಳೆದ 6 ತಿಂಗಳಿಂದ ಯಾವುದೇ ಕೆಲಸ ಮಾಡುತ್ತಿಲ್ಲ. ನನಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ನಾನು 7 ವರ್ಷಗಳ ಅವಧಿಗೆ ₹ 5,00,000 ಕಾರು ಸಾಲವನ್ನು ಹೊಂದಿದ್ದೇನೆ. ₹ 2,50,000 ಬಡ್ಡಿಯೊಂದಿಗೆ (ಇಎಂಐ ₹6,000) ಮರು ಪಾವತಿಸಿದ್ದೇನೆ.

ಉತ್ತರ: ನೀವು ನೀಡಿದ ಮಾಹಿತಿಯಂತೆ, ಪ್ರಸ್ತುತ ಆರು ತಿಂಗಳಿನಿಂದ ಕೆಲಸ ಮಾಡುತ್ತಿಲ್ಲ ಎಂದು ತಿಳಿಸಿರುತ್ತೀರಿ. ಈ ಸಂದರ್ಭದಲ್ಲಿ ಸಾಂಸಾರಿಕ ಜವಾಬ್ದಾರಿಯ ನಿರ್ವಹಣೆಗಾಗಿ ಅಗತ್ಯ ಹಣಕಾಸು ಭದ್ರತೆ ನಿಮಗೆ ಅನಿವಾರ್ಯ. ಈ ಬಗ್ಗೆ ನೀವು ಈಗಾಗಲೇ ಯೋಚಿಸಿ ಸೂಕ್ತ ವೆಚ್ಚ ನಿಭಾಯಿಸುವುದಕ್ಕಾಗಿ ಯೋಜನೆ ಮಾಡಿರಬಹುದೆಂದು ಭಾವಿಸಲಾಗಿದೆ. ನೀವು ಹೇಳಿರುವ ₹20 ಲಕ್ಷ ಸಂಪೂರ್ಣ ಹೂಡಿಕೆಗೆ ಲಭ್ಯ ಎಂದು ಊಹಿಸಲಾಗಿದೆ. ಈ ಮೊತ್ತವನ್ನು 2 ರಿಂದ 5 ವರ್ಷದ ಅವಧಿಗೆ ಹೂಡಿಕೆ ಮಾಡಿದರೆ ಬಡ್ಡಿ ಆದಾಯಕ್ಕಿಂತ ಅಧಿಕ ಆದಾಯ ಬರಬಹುದು. ಆದರೆ, ನಿಮ್ಮ ವಾಹನ ಸಾಲ ಇನ್ನೂ ಪಾವತಿಗೆ ಬಾಕಿ ಇದೆ ಎಂದು ತಿಳಿಸಿರುತ್ತೀರಿ. ಇದು ಸಾಮಾನ್ಯವಾಗಿ ನಿಮಗೆ ಬರುವ ಬಡ್ಡಿ ದರಕ್ಕಿಂತ ನಾಲ್ಕೈದು ಪ್ರತಿಶತ ಹೆಚ್ಚಿನ ಬಡ್ಡಿ ನೀಡಬೇಕಾಗಿ ಬರಬಹುದು. ಹೀಗಾಗಿ ಆ ಹೊರೆಯನ್ನು ಸಾಲದ ನಿಯಮಾವಳಿಯಂತೆ ಅವಕಾಶವಿದ್ದರೆ ಪಾವತಿಗೆ ಯೋಚಿಸಿ. ಈ ಬಗ್ಗೆ ಅಗತ್ಯವಾಗಿ ಬಾಕಿ ಇರುವ ಅಸಲು, ಪೂರ್ವ ಪಾವತಿಯ ಶುಲ್ಕ ಇತ್ಯಾದಿ ಮಾಹಿತಿ ತಿಳಿಯಿರಿ.

ಇನ್ನು ಹೆಚ್ಚುವರಿ ಆದಾಯಗಳಿಸಲು ತುಸು ದೀರ್ಘಾವಧಿ ಹೂಡಿಕೆ ಮಾಡುವ ಅಗತ್ಯವಿದೆ. ಇದಕ್ಕಾಗಿ ಮ್ಯೂಚುವಲ್ ಫಂಡ್ ಆಯ್ಕೆ ಮಾಡಿಕೊಳ್ಳಿ. ಈಗ ಇರುವ ಹಣದಿಂದ ಪ್ರತಿ ತಿಂಗಳೂ ಒಟ್ಟಾರೆ ₹50 ಸಾವಿರದಂತೆ ಸುಮಾರು ಹತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ತೊಡಗಿಸಿ. ಗೋಲ್ಡ್ ಫಂಡ್, ಹೈಬ್ರಿಡ್ ಡೆಬ್ಟ್ ಫಂಡ್ ಹಾಗೂ ಸೇವಿಂಗ್ಸ್ ಫಂಡ್ ಮಧ್ಯಮ ಪ್ರಮಾಣದ ಆರ್ಥಿಕ ಅಪಾಯ ಹೊಂದಿವೆ. ಸಂಪೂರ್ಣ ಈಕ್ವಿಟಿ ಆಧಾರಿತ ಫಂಡ್‌ಗಳು ಇನ್ನೂ ಹೆಚ್ಚಿನ ಆದಾಯವನ್ನು ನೀಡುತ್ತವೆ. ಆದರೆ, ಷೇರು ಮಾರುಕಟ್ಟೆಯ ಏರಿಳಿತ ಇದಕ್ಕೆ ಹೆಚ್ಚು ಬಾಧ್ಯ ಎನ್ನುವುದು ತಿಳಿದಿರಲಿ. ಈ ರೀತಿ ಮೂರು ವರ್ಷದ ಅವಧಿಯಲ್ಲಿ ಸಂಪೂರ್ಣವಾಗಿ ಹಣ ತೊಡಗಿಸಿಕೊಳ್ಳಿ. ಹೂಡಿಕೆಗೆ ಅಗತ್ಯವಿರುವ ಹಣವನ್ನಷ್ಟೇ ಎಫ್.ಡಿಯಿಂದ ನಿಮ್ಮ ಉಳಿತಾಯ ಖಾತೆಯಲ್ಲಿ ವರ್ಗಾಯಿಸಿಟ್ಟಿರಿ. ಇದಕ್ಕೆ ಪೂರ್ವಯೋಜಿತ ನಿರ್ಧಾರ ಅಗತ್ಯ.

ಗಿರೀಶಕುಮಾರ್, ಲಿಂಗಸುಗೂರು.

● **ಪ್ರಶ್ನೆ:** ನಾನು ಒಂದು ದ್ವಿಚಕ್ರವಾಹನವನ್ನು ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಖಾಸಗಿ ಕಂಪನಿಯಿಂದ ಸಾಲ ಪಡೆದು ಖರೀದಿಸಿದ್ದೆ. ಪ್ರತಿ ತಿಂಗಳಿಗೆ ₹2,988ರಂತೆ ಎರಡು ವರ್ಷದ ಕಾಲಾವಧಿಗೆ ನನ್ನ ಇಎಂಐ ಇರುತ್ತದೆ. ಇಲ್ಲಿಯವರೆಗೆ ನಾನು 15 ಇಎಂಐಗಳನ್ನು ಸಂಪೂರ್ಣವಾಗಿ ಪಾವತಿಸಿರುತ್ತೇನೆ. ಸಾಲ ವಿತರಿಸುವ ಸಂದರ್ಭದಲ್ಲಿ ನನಗೆ ಫೈನಾನ್ಸ್ ಕಂಪನಿಯವರು ಪ್ರತಿ ತಿಂಗಳ 2ನೇ ದಿನಾಂಕದಂದು ಬ್ಯಾಂಕ್ ಖಾತೆಯಲ್ಲಿ ಇಎಂಐ ಹಣ ಇಡಬೇಕು ಹಾಗೂ ಅದು 3ನೇ ದಿನಾಂಕ ಖಾತೆಯಿಂದ ಕಡಿತಗೊಳ್ಳುತ್ತದೆ ಎಂದು ಹೇಳಿದ್ದರು. ನಾನು ಅದೇ ರೀತಿ ಕೆಲವು ತಿಂಗಳು ಪಾಲಿಸಿದ್ದೆ. ಹಣವು ಮುಂಚಿತವಾಗಿ ಹೊಂದಾಣಿಕೆಯಾದಾಗ, ತಿಂಗಳ 2 ಅಥವಾ 3ನೇ ದಿನಾಂಕಕ್ಕೆ ಕಟ್ಟಬೇಕಾಗಿರುವುದನ್ನು ಮುಂಚಿತವಾಗಿ ಹಿಂದಿನ ತಿಂಗಳ 28-29-30 ಈ ದಿನಾಂಕಗಳಲ್ಲಿ ಅವರ ಮೊಬೈಲ್ ಆ್ಯಪ್ ಮೂಲಕ ಹಲವು ಬಾರಿ ಪಾವತಿಸಿರುತ್ತೇನೆ.

ನನ್ನ ಪ್ರಶ್ನೆ ಏನೆಂದರೆ, ನಿಗದಿತ ದಿನಾಂಕದ ಮುಂಚಿತವಾಗಿ ಇಎಂಐ ಪಾವತಿಸಿದರೂ ದಂಡ ಹಾಕಲು ಕಾರಣವೇನು? ಯಾವುದೇ ಫೈನಾನ್ಸ್ ಕಂಪನಿಗಳು ವಾಹನವನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವ ಮೊದಲು ಪಾಲಿಸಬೇಕಾದ ನಿಯಮಗಳೇನು? ಫೈನಾನ್ಸ್ ಕಂಪನಿಗಳು ನಿಯಮಗಳನ್ನು ಪಾಲಿಸದಿದ್ದರೆ ಗ್ರಾಹಕರು ಕಾನೂನು ಮೊರೆ ಹೋಗಲು ಅವಕಾಶವಿದೆಯೇ? ಇಸಿಎಸ್ ನಿಯಮಗಳೇನು? ಬಾಕಿ ಮೊತ್ತ ಪಾವತಿ ಮಾಡಿದಾಗ ವಾಹನವನ್ನು ಮರಳಿ ಪಡೆಯಲು ಬೇಕಾಗುವ ದಿನಗಳೆಷ್ಟು?

ಉತ್ತರ: ಇಂದು ಬಹುತೇಕ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ವಾಹನ ಸಾಲ ನೀಡುತ್ತವೆ. ಆದರೆ, ಅದರ ಮರುಪಾವತಿ ಸರಿಯಾಗಿ ಆಗದ ಸಂದರ್ಭಗಳಲ್ಲಿ ಅಂತಹ ಸಾಲಗಳನ್ನು ಇತರ ವಸೂಲಾತಿ ಸಂಸ್ಥೆಗಳಿಗೆ ವಹಿಸಿಕೊಟ್ಟು ಅವರ ಮೂಲಕ ಸಾಲವನ್ನು ವಸೂಲಿ ಮಾಡುತ್ತವೆ. ಆದರೆ, ಅಂತಹ ಸಂದರ್ಭದಲ್ಲಿ ಎನ್‌ಬಿಎಫ್‌ಸಿ ಹಾಗೂ ವಸೂಲಾತಿ ಸಂಸ್ಥೆಗಳಿಗೆ ಆರ್‌ಬಿಐ ಹೊರಡಿಸಿರುವ ನಿಯಮಾವಳಿಯೊಳಗೆ ಕಾರ್ಯ ನಿರ್ವಹಿಸಬೇಕಾದ ಅಗತ್ಯವಿದೆ. ಅಂತಹ ನಿಯಮಾವಳಿಗಳ ಹೊರತಾಗಿರುವ ವ್ಯವಹಾರ ಕಾನೂನುಬಾಹಿರ.

ಯಾವುದೇ ವಾಹನವನ್ನು ಕೈವಶಕ್ಕೆ ಪಡೆಯುವ ಮೊದಲು ಸಾಲಗಾರನಿಗೆ ಲಿಖಿತ ನೋಟಿಸ್ ನೀಡಿ ಸತತ ಇಎಂಐ ಪಾವತಿಯಾಗದ ಬಗ್ಗೆ ಪೂರ್ವ ಮಾಹಿತಿ ಕೊಡಬೇಕು ಹಾಗೂ ಸಾಲ ಅನುತ್ಪಾದಕ ಆಸ್ತಿಯಾಗಿರಬೇಕು. ವಾಹನ ತಮ್ಮ ಸುಪರ್ದಿಗೆ ತೆಗೆದುಕೊಳ್ಳುವ ಮೊದಲು ಬಂದಿರುವ ಸಿಬ್ಬಂದಿ ತಮ್ಮ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಕೊಟ್ಟಿರುವ ನೋಟಿಸ್‌ನಲ್ಲಿ ವಾಹನ ಪಡೆಯುವ ದಿನಾಂಕ, ಸಮಯ ಹಾಗೂ ಸ್ಥಳ, ವಾಹನದ ಬಗೆಗಿನ ಸಂಪೂರ್ಣ ಮಾಹಿತಿ ಇತ್ಯಾದಿಗಳನ್ನು ದಾಖಲಿಸಿರಬೇಕು. ಸಾಲಗಾರ ಮಧ್ಯಮಾರ್ಗದಲ್ಲಿ ಪ್ರಯಾಣಿಸುತ್ತಿರುವಾಗ ವಾಹನವನ್ನು ತಮ್ಮ ವಶಕ್ಕೆ ಪಡೆಯುವುದು ಸರಿಯಲ್ಲ. ಈ ಬಗ್ಗೆ ಸಂಬಂಧಿತ ಪೊಲೀಸ್ ಠಾಣೆಗೂ ಪೂರ್ವ ಮಾಹಿತಿ ತಿಳಿಸಿರಬೇಕು. ಸಾಲಗಾರರೊಡನೆ ಅಸಭ್ಯ ವರ್ತನೆಯೂ ಸರಿಯಲ್ಲ.

ಇನ್ನು ನಿಮ್ಮ ಕೆಲವು ಕಂತುಗಳು ಪೂರ್ವ ಪಾವತಿಯಾಗಿದ್ದರೂ, ಸಾಲದ ಒಟ್ಟಾರೆ ಪ್ರಮಾಣ ಇಳಿಕೆ ಆಗಿರಬಹುದೇ ವಿನಾ ನಿಗದಿತ ದಿನಾಂಕಕ್ಕೆ ಖಾತೆಗೆ ಬರುವ ಇಸಿಎಸ್ ಪೂರ್ವ ನಿರ್ಧರಿತ ಆಗಿರುವುದರಿಂದ ಆ ದಿನದಂದು ಖಾತೆಯಲ್ಲಿ ಹಣ ಇಲ್ಲದಿದ್ದರೆ ಶುಲ್ಕ ಇತ್ಯಾದಿ ಬರಬಹುದು. ಹೀಗಾಗಿ, ಅಗತ್ಯವಾಗಿ ನಿಮ್ಮ ಖಾತೆಯ ಪೂರ್ಣ ಮಾಹಿತಿ ಪರಿಶೀಲಿಸಿ. ಸಾಲದ ನಿಯಮಾವಳಿ ಪತ್ರ, ವಾಹನ ಮರಳಿ ಪಡೆಯುವ ನಿಯಮಗಳ ಉಲ್ಲೇಖವನ್ನು ಮತ್ತೊಮ್ಮೆ ಪರಿಶೀಲಿಸಿ ಹಾಗೂ ಸಂಸ್ಥೆಯ ಉನ್ನತ ಅಧಿಕಾರಿಗಳೊಡನೆ ಸಂಪರ್ಕಿಸಿ. ಗ್ರಾಹಕರಿಗೆ ಯಾವುದೇ ತೊಂದರೆಯಾದ ಪಕ್ಷದಲ್ಲಿ ಸಂಬಂಧಿತ ಸಂಸ್ಥೆಗೆ ಲಿಖಿತ ದೂರು ನೀಡಿ ಪರಿಹರಿಸಿಕೊಳ್ಳಬೇಕು. ಇನ್ನೂ ಸಮಸ್ಯೆ ಬಗೆಹರಿಯದಿದ್ದರೆ, ಕಾನೂನು ಕ್ರಮಕ್ಕೂ ಅವಕಾಶವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಡೀಪ್‌ಫೇಕ್: ಸಾಮಾಜಿಕ ಮಾಧ್ಯಮಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಡೀಪ್‌ಫೇಕ್ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ತಪ್ಪುಮಾಹಿತಿಗಳ ಪ್ರಸರಣ ಕುರಿತು ಕಳವಳ ವ್ಯಕ್ತಪಡಿಸಿರುವ ಸರ್ಕಾರ, ಐ.ಟಿ ನಿಯಮಗಳಿಗೆ ಬದ್ಧರಾಗಿರಬೇಕು ಎಂದು ಸಾಮಾಜಿಕ ಮಾಧ್ಯಮಗಳಿಗೆ ಸೂಚನೆ ನೀಡಿದೆ.



ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳು ತನ್ನ ಬಳಕೆದಾರರಿಗೆ, ನಿರ್ದಿಷ್ಟ ಮಾಹಿತಿಯು ಐ.ಟಿ ನಿಯಮಗಳ ಅನುಸಾರ ನಿಷೇಧಿಸಿರುವ ಅಡಕಗಳನ್ನು ಒಳಗೊಂಡಿದೆ ಎಂದು ಸ್ಪಷ್ಟವಾಗಿ ತಿಳಿಸಬೇಕು ಎಂದು ತಿಳಿಸಿದೆ.

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು, ಪ್ರಸ್ತುತ ಚಾಲ್ತಿಯಲ್ಲಿರುವ ಐ.ಟಿ ನಿಯಮಗಳಿಗೆ ಬದ್ಧರಾಗಿರಬೇಕು ಎಂದು ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಸೂಚನೆ ನೀಡಿದೆ.

ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಡೀಪ್‌ಫೇಕ್ ತಂತ್ರಜ್ಞಾನದ ದುರ್ಬಳಕೆ ತಡೆಯುವುದರ ಕುರಿತಂತೆ ಈ ಮಾರ್ಗದರ್ಶಿ ಸೂಚನೆಗಳಲ್ಲಿ ಸರ್ಕಾರ ಹೆಚ್ಚಿನ ಒತ್ತು ನೀಡಿದೆ.

ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಇತ್ತೀಚೆಗೆ ವಿವಿಧ ಜಾಲತಾಣಗಳ ಆಡಳಿತ ಪ್ರತಿನಿಧಿಗಳ ಜೊತೆಗೆ ಚರ್ಚಿಸಿದ್ದರು. ಅದರ ಹಿಂದೆಯೇ ಈ ನಿಯಮಗಳನ್ನು ಹೊರಡಿಸಲಾಗಿದೆ. ನಿಯಮ ಉಲ್ಲಂಘನೆ ಸಂದರ್ಭದಲ್ಲಿ ಐಪಿಸಿ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಅನ್ವಯ ವಿಧಿಸಬಹುದಾದ ಶಿಕ್ಷೆ, ದಂಡ ಕುರಿತಂತೆಯೂ ಸಾಮಾಜಿಕ ಮಾಧ್ಯಮಗಳು ಬಳಕೆದಾರರಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಲಾಗಿದೆ.

ಪ್ರಮುಖ ನಟರನ್ನು ಗುರಿಯಾಗಿಸಿದ್ದ 'ಡೀಪ್‌ಫೇಕ್' ವಿಡಿಯೊಗಳು ಇತ್ತೀಚೆಗೆ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದ್ದವು. ತಂತ್ರಜ್ಞಾನದ ದುರ್ಬಳಕೆ ಕುರಿತಂತೆ ಇದು ಸಾರ್ವಜನಿಕವಾಗಿ ಆಕ್ರೋಶಕ್ಕೂ ಗುರಿಯಾಗಿತ್ತು.

ಶಬರಿಮಲೆ: ₹204 ಕೋಟಿ ಆದಾಯ ಸಂಗ್ರಹ

ಶಬರಿಮಲೆ (ಕೇರಳ): ಶಬರಿಮಲೆ ಅಯ್ಯಪ್ಪ ದೇವಾಲಯದಲ್ಲಿ ಕಳೆದ 39 ದಿನಗಳಲ್ಲಿ ₹204.30 ಕೋಟಿ ಆದಾಯ ಸಂಗ್ರಹವಾಗಿದೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಮಂಗಳವಾರ ಹೇಳಿದೆ.

ಭಕ್ತರು ನಾಣ್ಯದ ರೂಪದಲ್ಲಿ ಸಲ್ಲಿಸಿರುವ ಕಾಣಿಕೆಯನ್ನು ಎಣಿಕೆ ಮಾಡಿದರೆ ಆದಾಯದ ಮೊತ್ತವು ಇನ್ನಷ್ಟು ಹೆಚ್ಚಲಿದೆ ಎಂದು ಟಿಡಿಬಿ ಅಧ್ಯಕ್ಷ ಪಿ.ಎಸ್. ಪ್ರಶಾಂತ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಭಕ್ತರು ಸಲ್ಲಿಸಿರುವ ಕಾಣಿಕೆಯಿಂದ ₹63.89 ಕೋಟಿ ಸಂಗ್ರಹವಾಗಿದೆ. 'ಅರವಣ' ಪ್ರಸಾದ ಮಾರಾಟದಿಂದ ₹96.32 ಕೋಟಿ, 'ಅಪ್ಪಂ' ಪ್ರಸಾದ ಮಾರಾಟದಿಂದ ₹12.38 ಕೋಟಿ ಲಭಿಸಿದೆ ಎಂದಿದ್ದಾರೆ.

ಮಂಡಲ ಋತುವಿನಲ್ಲಿ ಡಿಸೆಂಬರ್ 25ರವರೆಗೆ 31,43,163 ಮಂದಿ ಭಕ್ತರು ಶಬರಿಮಲೆಗೆ ಭೇಟಿ ನೀಡಿದ್ದಾರೆ. ಇದೇ ಅವಧಿಯಲ್ಲಿ 7,25,049 ಮಂದಿ ಭಕ್ತರಿಗೆ ಉಚಿತವಾಗಿ ಆಹಾರ ಪೂರೈಸಲಾಗಿದೆ ಎಂದು ಪ್ರಶಾಂತ್ ತಿಳಿಸಿದ್ದಾರೆ. ಮಂಡಲ ಪೂಜೆಯು ಬುಧವಾರ ನಡೆಯಲಿದೆ. ಮಂಡಲ ಪೂಜೆಯ ಬಳಿಕ ದೇವಾಲಯದ ಬಾಗಿಲು ಮುಚ್ಚಲಿದ್ದು, ಇದೇ 30ರಂದು ಮತ್ತೆ ತೆರೆಯಲಿದೆ ಎಂದಿದ್ದಾರೆ.

ತಂಗ ಅಂಗಿ ಮೆರವಣಿಗೆ: ಮಂಡಲ ಪೂಜೆಗೆ ಪೂರ್ವಭಾವಿಯಾಗಿ 'ತಂಗ ಅಂಗಿ' (ಚಿನ್ನಾಭರಣ) ಮೆರವಣಿಗೆಯು ಮಂಗಳವಾರ ಸಂಜೆ ಶಬರಿಮಲೆ ಅಯ್ಯಪ್ಪ ದೇವಾಲಯಕ್ಕೆ ತಲುಪಿದೆ. 'ತಂಗ ಅಂಗಿ'ಯನ್ನು ತಿರುವಾಂಕೂರು ರಾಜ ಮನೆತನದವರು 1970ರಲ್ಲಿ ಅಯ್ಯಪ್ಪ ದೇವರಿಗೆ ಸಮರ್ಪಿಸಿದ್ದರು.

ಬೀದರ್–ಬೆಂಗಳೂರು ವಿಮಾನ ಸೇವೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೀದರ್: ಬೀದರ್-ಬೆಂಗಳೂರು ನಡುವಿನ 'ಸ್ಟಾರ್ ಏರ್' ವಿಮಾನ ಸೇವೆಯನ್ನು ಕಂಪನಿಯು ಮಂಗಳವಾರದಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಿದೆ.

'ಸ್ಟಾರ್ ಏರ್' ವಿಮಾನವು ಬೀದರ್-ಬೆಂಗಳೂರು, ಬೆಂಗಳೂರು-ಬೀದರ್ ನಡುವೆ ನಿತ್ಯ ಒಂದು ಸಲ ಸಂಚರಿಸುತ್ತಿತ್ತು. ನಷ್ಟದಲ್ಲಿ ಸಂಚರಿಸುತ್ತಿದ್ದ ಕಾರಣ ವಿಮಾನ ಸೇವೆಯನ್ನು ಒಪ್ಪಂದದ ಅವಧಿಗೂ ಮುನ್ನವೇ ರದ್ದುಗೊಳಿಸಲಾಗಿದೆ ಎಂದು 'ಸ್ಟಾರ್ ಏರ್' ಕಂಪನಿಯ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಪಾಕ್ ಚುನಾವಣೆ: ಹಿಂದೂ ಮಹಿಳೆಯಿಂದ ನಾಮಪತ್ರ

ಪೇಶಾವರ (ಪಿಟಿಐ): ಪಾಕಿಸ್ತಾನದ ಪ್ರಾಂತೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಮೊದಲ ಬಾರಿಗೆ ಅಲ್ಪಸಂಖ್ಯಾತ ಹಿಂದೂ ಮಹಿಳೆ ನಾಮಪತ್ರ ಸಲ್ಲಿಸಿದ್ದಾರೆ.



ಡಾ. ಸವೀರ ಪ್ರಕಾಶ್

'ಡಾ.ಸವೀರಾ ಪ್ರಕಾಶ್ (25) ಅವರು ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಸಾಮಾನ್ಯ ಕ್ಷೇತ್ರದಿಂದ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಲು ಬುನೆರ್ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದಾರೆ' ಎಂದು ಅವರ ತಂದೆ ಓಂ ಪ್ರಕಾಶ್ ತಿಳಿಸಿದ್ದಾರೆ. 'ಫೆ.8ರಂದು ಚುನಾವಣೆ ನಡೆಯಲಿದ್ದು ಸವೀರಾ ಅವರು ಸಾಮಾನ್ಯ ಕ್ಷೇತ್ರದಿಂದ ಅಷ್ಟೇ ಅಲ್ಲದೆ ಮಹಿಳಾ ಮೀಸಲು ಕ್ಷೇತ್ರದಿಂದಲೂ ನಾಮಪತ್ರ ಸಲ್ಲಿಸಿದ್ದಾರೆ' ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೊಕಾ	15000-27500
ಹೊಸತು	27500-36000
ಹಳತು	41000-44000
ಹೊನ್ನಾವರ	
ಹಳೆಚಾಲಿ	36000-38000
ಕಾರ್ಕಳ	
ಹೊಸತು	25000-36500
ಹಳತು	30000-44000
ಪುತ್ತೂರು	
ಕೊಕಾ	11000-25000
ಹೊಸತು	27000-36500
ಶಿರಸಿ	
ಬೆಟ್ಟೆ	36010-46599
ಬಿಳಿಗೋಟು	29019-35218
ಚಾಲಿ	38811-37703
ಕೆಂಪುಗೋಟು	30561-30561
ರಾಶಿ	45699-48209
ಸೊರಬ	
ಸಿಪ್ಪೆಗೋಟು	13313-14313
ರಾಶಿ	47699-47071
ಕೊಕಾ	10313-10313

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,800	-	-	-
ಎಸಿ	7,700	-	-	-
ಆರ್‌ಪಿ	10,500	-	-	-
ಆರ್‌ಸಿ	60,680	-	-	-

ದೆಹಲಿ: ಇಸ್ರೇಲ್ ರಾಯಭಾರ ಕಚೇರಿಯ ಬಳಿ ಸ್ಫೋಟ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿರುವ ಇಸ್ರೇಲ್‌ನ ರಾಯಭಾರ ಕಚೇರಿ ಬಳಿ ಮಂಗಳವಾರ ಸಂಜೆ ಸ್ಫೋಟ ಸಂಭವಿಸಿದೆ. ಘಟನೆಯಲ್ಲಿ ಯಾವುದೇ ಹಾನಿ ಮತ್ತು ಯಾರಿಗೂ ಗಾಯಗಳಾಗಿಲ್ಲ. ವಿಧಿವಿಜ್ಞಾನ ತಜ್ಞರು ಸ್ಥಳದಲ್ಲಿ ಶೋಧ ನಡೆಸಿದ್ದು, ಸ್ಫೋಟದ ಅವಶೇಷ ಪತ್ತೆಯಾಗಿದೆ. ದೆಹಲಿ ಪೊಲೀಸರ ವಿಶೇಷ ಘಟಕ ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ತನಿಖಾಧಿಕಾರಿಗಳು ಕೂಡ ಸ್ಥಳಕ್ಕೆ ದೌಡಾಯಿಸಿದ್ದಾರೆ. ಎನ್ಐಎ ತನಿಖೆ ಕೈಗೆತ್ತಿಕೊಂಡಿದೆ.

ರಾಯಭಾರ ಕಚೇರಿಯ ಸಮೀಪ ಸ್ಫೋಟ ನಡೆದಿದೆ ಎಂದು ಇಸ್ರೇಲ್ ರಾಯಭಾರ ಕಚೇರಿ ದೃಢಪಡಿಸಿದೆ. ಸಂಜೆ 5:48 ರ ಸುಮಾರಿಗೆ ಸ್ಫೋಟ ಸಂಭವಿಸಿದೆ ಎಂದು ಇಸ್ರೇಲ್ ರಾಯಭಾರ ಕಚೇರಿಯ ವಕ್ತಾರ ಗೈ ನಿರ್ ಹೇಳಿದ್ದಾರೆ. ಆದರೆ, ಸ್ಥಳದಲ್ಲಿ ಯಾವುದೇ ಸ್ಫೋಟದ ಅವಶೇಷ ದೊರೆತಿಲ್ಲ ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ.

ಇಸ್ರೇಲ್ ರಾಯಭಾರಿಯನ್ನು ಉದ್ದೇಶಿಸಿ ಟೈಪ್ ಮಾಡಿದ ನಿಂದನಾತ್ಮಕ ಪತ್ರವು ಸ್ಫೋಟ ನಡೆದಿರುವ ರಾಯಭಾರ ಕಚೇರಿಯ ಹಿಂಭಾಗದ ಉದ್ಯಾನದಲ್ಲಿ ಪತ್ತೆಯಾಗಿದೆ. ತನಿಖಾಧಿಕಾರಿಗಳು ಮತ್ತು ವಿಧಿವಿಜ್ಞಾನ ತಜ್ಞರು ಈ ಪತ್ರವನ್ನು ವಶಪಡಿಸಿಕೊಂಡಿದ್ದಾರೆ.

ಘಟನೆ ಸಂಬಂಧ ಪೊಲೀಸರಿಗೆ ಹೇಳಿಕೆ ನೀಡಿರುವ ಭದ್ರತಾ ಸಿಬ್ಬಂದಿ ತೇಜು ಛೆತ್ರಿ 'ಭಾರಿ ಶಬ್ದ ಕೇಳಿಸಿತು. ಆರಂಭದಲ್ಲಿ ಟಯರ್ ಒಡೆದಿರಬಹುದೆಂದು ಭಾವಿಸಿದ್ದೆ. ಹೊರಗಡೆ ಬಂದು ನೋಡಿದಾಗ ಮರದ ತುದಿಯಿಂದ ಹೊಗೆ ಕಾಣಿಸಿತು' ಎಂದು ಸುದ್ದಿಗಾರರಿಗೆ ತಿಳಿಸಿದರು.

'ನಮ್ಮ ಎಲ್ಲಾ ರಾಜತಾಂತ್ರಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ. ಈ ಘಟನೆ ಬಗ್ಗೆ ಮತ್ತಷ್ಟು ತನಿಖೆಗೆ ದೆಹಲಿ ಭದ್ರತಾ ಅಧಿಕಾರಿಗಳೊಂದಿಗೆ ನಮ್ಮ ಭದ್ರತಾ ತಂಡಗಳು ಸಂಪೂರ್ಣ ಸಹಕಾರ ನೀಡುತ್ತಿವೆ' ಎಂದು ಇಸ್ರೇಲ್ ರಾಯಭಾರ ಕಚೇರಿಯ ಉಪ ಮುಖ್ಯಸ್ಥ ಓಹಾದ್ ನಕಾಶ್ ಕಯ್ನಾರ್ ಹೇಳಿದ್ದಾರೆ. 2021ರ ಜನವರಿಯಲ್ಲಿ ರಾಯಭಾರ ಕಚೇರಿಯ ಬಳಿ ಕಡಿಮೆ ತೀವ್ರತೆಯ ಸ್ಫೋಟ ಸಂಭವಿಸಿತ್ತು. ಆಗ ಕೆಲವು ಕಾರುಗಳಿಗೆ ಹಾನಿಯಾಗಿತ್ತು. 2012ರ ಫೆಬ್ರುವರಿಯಲ್ಲಿ ಇಸ್ರೇಲ್ ರಾಯಭಾರ ಕಚೇರಿಯ ಬಳಿ, ಕಾರಿನ ಕೆಳಗೆ ಬಾಂಬ್ ಇರಿಸಲಾಗಿತ್ತು. ಆಗ, ರಾಜತಾಂತ್ರಿಕರ ಪತ್ನಿ ಗಾಯಗೊಂಡಿದ್ದರು.

ಕೇಂದ್ರ ಗಾಜಾ ಮೇಲೆ ದಾಳಿ

ರಫಾ (ಗಾಜಾ ಪಟ್ಟಿ): ಕೇಂದ್ರ ಗಾಜಾದಲ್ಲಿರುವ ಪ್ಯಾಲೆಸ್ಟೀನ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಮಂಗಳವಾರ ಬಾಂಬ್ ದಾಳಿ ನಡೆಸಿದೆ. ಹಮಾಸ್ ಉಗ್ರರನ್ನು ಸದೆಬಡಿಯಲು ಇಸ್ರೇಲ್, ಹಲವು ವಾರಗಳ ಕಾಲ ಉತ್ತರ ಗಾಜಾ ಮತ್ತು ದಕ್ಷಿಣದ ಖಾನ್ ಯೂನಿಸ್ ನಗರದ ಮೇಲೆ ನಿರಂತರ ದಾಳಿ ನಡೆಸಿತ್ತು. ಇದರಿಂದ ಕಂಗೆಟ್ಟ ಪ್ಯಾಲೆಸ್ಟೀನಿಯನ್ನರು ಪ್ರಾಣ ಉಳಿಸಿಕೊಳ್ಳಲು ಗಾಜಾದ ಗಡಿಯ ಸಣ್ಣ ಪ್ರದೇಶಕ್ಕೆ ಬಂದು ನೆಲೆಸಿದ್ದರು. ಸದ್ಯ ಈ ಭಾಗದಲ್ಲೂ ಇಸ್ರೇಲ್ ದಾಳಿ ಆರಂಭಿಸಿದ್ದು, ನಾಗರಿಕರು ಸುರಕ್ಷಿತ ಸ್ಥಳ ಇಲ್ಲದೆ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಜಮ್ಮುವಿನ ಪೂಂಛ್– ರಜೌರಿ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ ಭದ್ರತಾಪಡೆಗೆ ಹೊಸ ಸವಾಲು

ಗುಹೆಗಳ ನಾಶಕ್ಕೆ ಸೇನೆ ಮುಖ್ಯಸ್ಥರ ಸೂಚನೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮುವಿನ ಪೂಂಛ್ ಮತ್ತು ರಜೌರಿ ಜಿಲ್ಲೆಗಳಲ್ಲಿ ಹಳ್ಳತಿಟ್ಟುಗಳ ಭೂಪ್ರದೇಶದಲ್ಲಿ ಸಹಜವಾಗಿರುವ ಗುಹೆಗಳು ಭದ್ರತಾಪಡೆಗಳಿಗೆ ಹೊಸ ಸವಾಲಾಗಿದ್ದು, ಉಗ್ರರ ಅಡಗುತಾಣಗಳಾಗಿರುವ ಇವುಗಳನ್ನು ಶೀಘ್ರ ನಾಶಪಡಿಸುವಂತೆ ಸೇನೆ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಕಮಾಂಡರ್‌ಗಳಿಗೆ ಸೂಚಿಸಿದ್ದಾರೆ.

ಸೋಮವಾರ ಗಡಿಯ ಅವಳಿ ಜಿಲ್ಲೆಗಳಿಗೆ ಭೇಟಿ ನೀಡಿ ಭದ್ರತಾ ಪರಿಸ್ಥಿತಿಯನ್ನು ಅವಲೋಕಿಸಿದ ಅವರು ಅರಣ್ಯ ಪ್ರದೇಶದಲ್ಲಿ ಉಗ್ರರ ಅಡಗುತಾಣಗಳ ಮೇಲೆ ದಾಳಿ ನಡೆಸುವಂತೆ ಸ್ಥಳೀಯ ಕಮಾಂಡರ್‌ಗಳಿಗೆ ಸೂಚನೆ ನೀಡಿದ್ದಾರೆ. ಎಲೆ, ರೆಂಬೆಗಳ ದಟ್ಟ ಗೊಂಚಲಿನ ಕೆಳಗೆ ಯಾರಿಗೂ ಕಾಣದಂತಿರುವ ಗುಹೆಗಳನ್ನು ನಾಶ ಮಾಡುವಂತೆಯೂ ಹೇಳಿದ್ದಾರೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ಪೀರ್ ಪಂಜಾಲ್ ಪರ್ವತಸಾಲು ಎಂದೇ ಹೆಸರುವಾಸಿಯಾಗಿರುವ ರಜೌರಿ– ಪೂಂಛ್‌ನ ಅರಣ್ಯ ಪ್ರದೇಶಗಳಲ್ಲಿ ಗುಹೆಗಳ ಅಡಗುತಾಣಗಳಲ್ಲಿ ಉಗ್ರರು ನೆಲೆಸಿದ್ದರು ಎಂಬ ವರದಿಗಳಿವೆ. ದಾಳಿ ನಡೆಸುವ ಮೊದಲು ಮತ್ತು ದಾಳಿ ನಡೆಸಿದ ನಂತರ ಅವರು ಇಲ್ಲಿ ಆಶ್ರಯ ಪಡೆದಿದ್ದರು. ಈ ಗುಹೆಗಳು ಸುತ್ತುಬಳಸಿದ ಹಾದಿಗಳನ್ನು ಹೊಂದಿದ್ದು ಉಗ್ರರ ಕಾರ್ಯತಂತ್ರಕ್ಕೆ ಅನುಕೂಲಕರವಾಗಿವೆ ಎನ್ನಲಾಗಿದೆ.

'ಕೆಲ ಸ್ಥಳೀಯರ ಬೆಂಬಲದೊಂದಿಗೆ ಆಹಾರ ಪಡೆದು ಈ ಗುಹೆಗಳನ್ನು ಆಶ್ರಯ ತಾಣವಾಗಿ ಉಗ್ರರು ಬಳಸುತ್ತಿರಬಹುದು ಎಂಬ ವರದಿಗಳಿವೆ' ಎಂದು ಮೂಲಗಳು ತಿಳಿಸಿವೆ.


ಕಳೆದ ವಾರ ಉಗ್ರರು ಹಠಾತ್ ದಾಳಿ ನಡೆಸಿ ನಾಲ್ವರು ಯೋಧರನ್ನು ಹತ್ಯೆಗೈದ ಡೇರಾ ಕಿ ಗಲಿ ಪ್ರದೇಶವು ಗಡಿ ನಿಯಂತ್ರಣ ರೇಖೆಯಿಂದ ಕೇವಲ 20 ಕಿ.ಮೀ ದೂರದಲ್ಲಿದೆ ಮತ್ತು ಪೂಂಛ್‌ನ ಬಫ್ಲಿಯಾಜ್‌ನಿಂದ ರಜೌರಿಯ ಥಾನಮಂಡಿಗೆ ಸಂಪರ್ಕ ಕಲ್ಪಿಸುತ್ತದೆ.

ಸೆಪ್ಟೆಂಬರ್‌ನಲ್ಲಿ ಕೋಕರ್‌ನಾಗ್ ಕಾರ್ಯಾಚರಣೆಯಲ್ಲಿ ಕರ್ನಲ್, ಮೇಜರ್, ಪೊಲೀಸ್ ಅಧಿಕಾರಿಯನ್ನು ಹತ್ಯೆ ಮಾಡಲಾಗಿತ್ತು. ಉಗ್ರರ ಪತ್ತೆಗೆ ಅತ್ಯಾಧುನಿಕ ಡ್ರೋನ್‌ಗಳನ್ನು ಬಳಸಿದ್ದನ್ನು ಭದ್ರತಾ ಪಡೆ ಬಿಡುಗಡೆಮಾಡಿದ್ದ ವಿಡಿಯೊದಲ್ಲಿ ತೋರಿಸಲಾಗಿತ್ತು.

ಮುಖ್ಯಾಂಶಗಳು

- ಉಗ್ರರಿಗೆ ಅನುಕೂಲಕರವಾದ ಸುತ್ತುಬಳಸಿನ ಹಾದಿ
- ಗುಹೆಗಳನ್ನು ಪ್ರವೇಶಿಸುವ ಮಾರ್ಗಗಳ ಪತ್ತೆ ಯತ್ನ

ಗಾಜಾ ಪರಿಸ್ಥಿತಿಯೇ ನಮಗೂ ಬರುತ್ತದೆ: ಫಾರೂಕ್



ಶ್ರೀನಗರ: 'ಬಿಕ್ಕಟ್ಟು ಬಗೆಹರಿಸಿಕೊಳ್ಳುವ ದಿಸೆಯಲ್ಲಿ ಪಾಕಿಸ್ತಾನದ ಜೊತೆ ಮಾತುಕತೆ ಆರಂಭಿಸದಿದ್ದರೆ ಗಾಜಾ, ಪ್ಯಾಲೆಸ್ಟೀನ್‌ಗಾದ ಸ್ಥಿತಿಯೇ ಕಾಶ್ಮೀರಕ್ಕೂ ಆಗುತ್ತದೆ' ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಅವರು ಮಂಗಳವಾರ ಹೇಳಿಕೆ ನೀಡಿದ್ದಾರೆ. ಇದಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಕಳೆದ ವಾರ ಸೇನೆಯ ನಾಲ್ವರು ಸಿಬ್ಬಂದಿಯನ್ನು ಉಗ್ರರು ಹತ್ಯೆಗೈದ ಪ್ರಕರಣ ಮತ್ತು ಆ ನಂತರದ ಬೆಳವಣಿಗೆಗಳಿಗೆ ಸಂಬಂಧಿಸಿ ಅಬ್ದುಲ್ಲಾ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ನಾವು ನಮ್ಮ ಸ್ನೇಹಿತರನ್ನು ಬದಲಿಸಬಹುದು. ಆದರೆ ನೆರೆಹೊರೆಯವರನ್ನು ಬದಲಿಸಲು ಸಾಧ್ಯವಿಲ್ಲ' ಎಂದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ನೀಡಿದ್ದ ಹೇಳಿಕೆಯನ್ನು ಉಲ್ಲೇಖಿಸಿ ಅವರು ಮಾತನಾಡಿದರು. 'ನೆರೆಯವರ ಜೊತೆ ಸ್ನೇಹದಿಂದ ಇದ್ದರೆ ಎರಡೂ ದೇಶಗಳೂ (ಭಾರತ, ಪಾಕಿಸ್ತಾನ) ಏಳಿಗೆಯಾಗಬಹುದು. ಶತ್ರುತ್ವ ಮುಂದುವರಿಸಿದರೆ ಏಳಿಗೆ ಸಾಧ್ಯವಿಲ್ಲ' ಎಂದರು.

'ನಮ್ಮೆದುರು ಯುದ್ಧದ ಆಯ್ಕೆ ಇಲ್ಲ. ಏನಿದ್ದರೂ ಸಮಾಲೋಚನೆ ಮೂಲಕವೇ ಬಿಕ್ಕಟ್ಟು ಬಗೆಹರಿಸಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರೂ ಹೇಳಿದ್ದರು. ಆದರೆ ಸಮಾಲೋಚನೆ ಯಾಕೆ ನಡೆಯುತ್ತಿಲ್ಲ' ಎಂದು ಫಾರೂಕ್ ಪ್ರಶ್ನಿಸಿದರು.

ಈಗ ನವಾಜ್ ಷರೀಫ್ ಅವರು ಪಾಕಿಸ್ತಾನದ ಪ್ರಧಾನಿ ಆಗಲಿದ್ದಾರೆ. ಭಾರತದ ಜೊತೆ ಮಾತುಕತೆಗೆ ತಯಾರಿರುವುದಾಗಿ ಅವರು ಹೇಳುತ್ತಲೇ ಬಂದಿದ್ದಾರೆ. ಆದರೆ ಭಾರತವೇಕೆ ಮಾತುಕತೆಗೆ ಸಿದ್ಧವಾಗಿಲ್ಲ ಎಂದು ಪ್ರಶ್ನಿಸಿದರು.

ವಿಚಾರಣೆಗಾಗಿ ಸೇನಾ ಸಿಬ್ಬಂದಿ ಕರೆದೊಯ್ದಿದ್ದ ಮೂವರು ನಾಗರಿಕರು ಸಾವಿಗೀಡಾಗಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ನಾಗರಿಕರನ್ನು ಹಿಂಸಿಸಿ ಹತ್ಯೆಗೈಯಲಾಗಿದೆ. ನಾವು ಯಾವ ಭಾರತದಲ್ಲಿ ಇದ್ದೇವೆ? ಇದು ಮಹಾತ್ಮಾ ಗಾಂಧಿ ಅವರ ಭಾರತವೇ? ದ್ವೇಷ ಎಷ್ಟು ವ್ಯಾಪಕವಾಗಿ ಹರಡಿದೆ ಎಂದರೆ ಹಿಂದೂ ಮತ್ತು ಮುಸ್ಲಿಮರು ಪರಸ್ಪರರನ್ನು ವೈರಿಗಳೆಂದು ತಿಳಿದಿದ್ದಾರೆ' ಎಂದರು.

> ಸೇನಾಧಿಕಾರಿಗಳನ್ನು ಕರ್ತವ್ಯದಿಂದ ಹಿಂದಕ್ಕೆ ಕರೆಸಿಕೊಳ್ಳುವುದು ಪೂಂಛ್ ನಾಗರಿಕರ ಸಾವಿಗೆ ಪರಿಹಾರವಲ್ಲ. ಪ್ರಕರಣದ ತನಿಖೆ ಮಾಡಬೇಕು
>
> **ಫಾರೂಕ್ ಅಬ್ದುಲ್ಲಾ,** ಎನ್‌ಸಿ ಅಧ್ಯಕ್ಷ

ಫಾರೂಕ್ ಹೇಳಿಕೆ ವಿಷಾದಕರ: ಬಿಜೆಪಿ

ಬಿಜೆಪಿ ನಾಯಕಿ ಡಾ. ಹೀನಾ ಶಫೀ ಭಟ್ ಅವರು ಫಾರೂಕ್ ಅವರ ಹೇಳಿಕೆಗೆ ತಿರುಗೇಟು ನೀಡಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಪಾಕಿಸ್ತಾನದ ಜೊತೆ ಭಾರತ ಮಾತುಕತೆ ಕೈಗೊಳ್ಳಬೇಕು ಎಂದು ಫಾರೂಕ್ ಅವರು ಈಗಲೂ ಪ್ರತಿಪಾದಿಸುತ್ತಿರುವುದು ವಿಷಾದನೀಯ. ಮೋದಿ ಅವರ ನೇತೃತ್ವದ ಸರ್ಕಾರವು ಪಾಕಿಸ್ತಾನದ ಎದುರು ತಲೆ ಬಾಗುವುದಿಲ್ಲ ಎಂದಿದ್ದಾರೆ.

'ಈ ಹಿಂದೆ ನಾವು ಮಾತುಕತೆ ನಡೆಸಲು ಪ್ರಯತ್ನಿಸಿದ್ದೇವೆ. ಆದರೆ ಅವರು ಮತ್ತೆಮತ್ತೆ ಬೆನ್ನಿಗೆ ಚೂರಿ ಹಾಕಿದರು' ಎಂದಿದ್ದಾರೆ.

'ಪಾಕಿಸ್ತಾನದ ಜೊತೆ ಸೌಹಾರ್ದಯುತವಾದ ಸಂಬಂಧ ಹೊಂದಲು ಭಾರತ ಬಯಸುತ್ತದೆ. ಆದರೆ, ಅಂಥ ಸಂಬಂಧವನ್ನು ಹೊಂದಲು ಭಯೋತ್ಪಾದನೆ ಮತ್ತು ಹಿಂಸಾಚಾರ ಮುಕ್ತ ವಾತಾವರಣ ಇರಬೇಕು' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಅರಿಂದಮ್ ಬಾಗ್ಚಿ ಅವರು ಫಾರೂಕ್ ಹೇಳಿಕೆಗೆ ಪ್ರತಿಕ್ರಿಯಿಸಿದ್ದಾರೆ.

ರೈಲು ನಿಲ್ದಾಣಗಳಲ್ಲಿ ಮೋದಿ 'ಸೆಲ್ಫಿ ಬೂತ್'

'ಎ' ಕೆಟಗರಿ ರೈಲು ನಿಲ್ದಾಣಗಳಲ್ಲಿ ತಾತ್ಕಾಲಿಕ ಸೆಲ್ಫಿ ಪಾಯಿಂಟ್ ಸ್ಥಾಪಿಸಲು ₹1.25 ಲಕ್ಷ, 'ಸಿ' ಕೆಟಗರಿ ನಿಲ್ದಾಣಗಳಲ್ಲಿ ಶಾಶ್ವತ ಸೆಲ್ಫಿ ಪಾಯಿಂಟ್ ಸ್ಥಾಪಿಸಲು ₹6.25 ಲಕ್ಷ ವೆಚ್ಚವಾಗಲಿದೆ.

'ತೆರಿಗೆದಾರರ ಹಣ ಪೋಲು'

ನವದೆಹಲಿ (ಪಿಟಿಐ): ರೈಲು ನಿಲ್ದಾಣಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವಿರುವ 'ಸೆಲ್ಫಿ ಬೂತ್' ಸ್ಥಾಪಿಸುವ ಮೂಲಕ ಸರ್ಕಾರವು ತೆರಿಗೆದಾರರ ಹಣ ಪೋಲು ಮಾಡಲು ಮುಂದಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

'ಮೋದಿ ಸರ್ಕಾರ ನಡೆಸುತ್ತಿರುವ ಸ್ವಯಂ ಪ್ರಚಾರಕ್ಕೆ ಯಾವುದೇ ಮಿತಿಯಿಲ್ಲ. ರೈಲು ನಿಲ್ದಾಣಗಳಲ್ಲಿ ಮೋದಿ ಅವರ 3ಡಿ ಸೆಲ್ಫಿ ಪಾಯಿಂಟ್‌ಗಳನ್ನು ಸ್ಥಾಪಿಸಿದರೆ ತೆರಿಗೆದಾರರ ಹಣ ವ್ಯರ್ಥವಾಗಲಿದೆ' ಎಂದು 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

'ಕೇಂದ್ರ ಸರ್ಕಾರವು ಕೆಲವು ರಾಜ್ಯಗಳಿಗೆ ಇನ್ನೂ ಪ್ರವಾಹ ಮತ್ತು ಬರ ಪರಿಹಾರ ಮೊತ್ತವನ್ನು ನೀಡಿಲ್ಲ. ಬಿಜೆಪಿಯೇತರ ಸರ್ಕಾರ ಆಡಳಿತದಲ್ಲಿರುವ ರಾಜ್ಯಗಳಿಗೆ ನರೇಗಾ ಬಾಕಿ ಹಣ ಪಾವತಿ ಮಾಡಿಲ್ಲ. ಆದರೆ ಚುನಾವಣೆಯ ದೃಷ್ಟಿಯಿಂದ ಈ ರೀತಿಯ ಪ್ರಚಾರಕ್ಕೆ ಸಾರ್ವಜನಿಕರ ಹಣ ಪೋಲು ಮಾಡುವ ಭಂಡತನ ತೋರಿಸುತ್ತಿದೆ' ಎಂದು ದೂರಿದ್ದಾರೆ.

ಕೇಂದ್ರೀಯ ರೈಲ್ವೆಯು ಶಾಶ್ವತ ಮತ್ತು ತಾತ್ಕಾಲಿಕ ಸೆಲ್ಫಿ ಪಾಯಿಂಟ್‌ಗಳನ್ನು ಸ್ಥಾಪಿಸಲಿರುವ ನಿಲ್ದಾಣಗಳ ಪಟ್ಟಿಯನ್ನು ಸಿದ್ಧಪಡಿಸಿದೆ. ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಪಡೆದ ಈ ಪಟ್ಟಿಯನ್ನು ಖರ್ಗೆ ಅವರು ಹಂಚಿಕೊಂಡಿದ್ದಾರೆ.

ಪ್ರಧಾನಿ ಅವರ ಕಟೌಟ್ ಹೊಂದಿರುವ 822 ಸೆಲ್ಫಿ ಪಾಯಿಂಟ್‌ಗಳನ್ನು ಸ್ಥಾಪಿಸುವಂತೆ ಈ ಹಿಂದೆ ಸಶಸ್ತ್ರ ಪಡೆಗಳಿಗೆ ಸೂಚಿಸಿದ್ದನ್ನು ಕೂಡಾ ಕಾಂಗ್ರೆಸ್ ಟೀಕಿಸಿತ್ತು. ದೇಶಕ್ಕಾಗಿ ಪ್ರಾಣ ತೆತ್ತ ಸೈನಿಕರ ಬಲಿದಾನವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದೆ ಎಂದು ಖರ್ಗೆ ಆರೋಪಿಸಿದ್ದರು.

'ರಾಮಮಂದಿರ ಆತ್ಮನಿರ್ಭರದ ಪ್ರತೀಕ'

ಪ್ರಜಾವಾಣಿ ವಾರ್ತೆ/ಪಿಟಿಐ



ಅಯೋಧ್ಯೆಯಲ್ಲಿ ನಿರ್ಮಾಣ ಹಂತದಲ್ಲಿರುವ ರಾಮಮಂದಿರ –ಪಿಟಿಐ ಚಿತ್ರ

ಅಯೋಧ್ಯೆ:'ರಾಮಮಂದಿರ ನಿರ್ಮಾಣ ಇದುವರೆಗೂ ಪೂರ್ಣಗೊಂಡಿಲ್ಲ. ಆದರೆ, ಪೂರ್ಣಗೊಂಡ ಮಂದಿರದಲ್ಲಿ ಅದರದ್ದೇ ಆದ ಕೊಳಚೆ ನೀರು ಸಂಸ್ಕರಣಾ ಘಟಕ ಹಾಗೂ ನೀರು ಶುದ್ಧೀಕರಣ ಘಟಕ ಇರಲಿದೆ. ಜೊತೆಗೆ ಇಡೀ ದೇವಾಲಯಕ್ಕೆ ಪವರ್‌ಹೌಸ್‌ನಿಂದ ನೇರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಆ ಮೂಲಕ ಮಂದಿರವು ಸಂಪೂರ್ಣ ಆತ್ಮನಿರ್ಭರವಾಗಿದೆ' ಎಂದು ರಾಮಮಂದಿರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ತಿಳಿಸಿದರು.

ಮಂದಿರ ಸಂಕೀರ್ಣದಲ್ಲಿ ಮಾಧ್ಯಮದವರಿಗಾಗಿ ಚಂಪತ್ ರಾಯ್ ಅವರು ಮಂಗಳವಾರ ಪ್ರಾತ್ಯಕ್ಷಿಕೆ ನೀಡಿದರು. 'ದೇವಸ್ಥಾನ ಪ್ರದೇಶವು ಒಟ್ಟು 70 ಎಕರೆ ವಿಸ್ತಾರದಲ್ಲಿ ಇರಲಿದೆ. ಇದರ ಶೇ 70ರಷ್ಟು ಜಾಗವು ಹಸಿರಿನಿಂದ ಕಂಗೊಳಿಸಲಿದೆ. ಜೊತೆಗೆ, ದೇವಾಲಯ ಪ್ರದೇಶದಲ್ಲಿ ಅಗ್ನಿಶಾಮಕ ಘಟಕ ಇರಲಿದೆ. ಈ ಘಟಕಕ್ಕೆ ತನ್ನದೇ ಆದ ಸ್ವಂತ ನೀರಿನ ತೊಟ್ಟಿ ಇರಲಿದೆ' ಎಂದು ವಿವರಿಸಿದರು.

'ದೇವಾಲಯವು ಪೂರ್ವಾಭಿಮುಖವಾಗಿ ಇರಲಿದೆ ಹಾಗೂ ದಕ್ಷಿಣ ದಿಕ್ಕಿನಿಂದ ನಿರ್ಗಮನ ವ್ಯವಸ್ಥೆ ಇರಲಿದೆ. ನೆಲಮಹಡಿಯೂ ಸೇರಿ ಮಂದಿರವು ಮೂರು ಅಂತಸ್ತಿನದಾಗಿರುತ್ತದೆ. ಮಂದಿರವನ್ನು ನಾಗರ ಶೈಲಿಯಲ್ಲಿ ನಿರ್ಮಿಸಲಾಗುತ್ತಿದೆ. ಸಾಮಾನ್ಯವಾಗಿ ದಕ್ಷಿಣ ಭಾರತದ ದೇವಾಲಯಗಳಲ್ಲಿ ಇರುವ 'ಜಗುಲಿ'ಯನ್ನು ರಾಮಮಂದಿರದಲ್ಲೂ ಅಳವಡಿಸಲಾಗಿದೆ' ಎಂದು ವಿವರಿಸಿದರು.

'ರಾಮಮಂದಿರ ನಿರ್ಮಾಣಕ್ಕೆ ಕರ್ನಾಟಕ ಹಾಗೂ ತೆಲಂಗಾಣದಿಂದ 17 ಸಾವಿರ ಗ್ರಾನೈಟ್ ಕಲ್ಲುಗಳನ್ನು, 4 ಲಕ್ಷ ಘನ ಅಡಿಯ ಮರಳುಶಿಲೆಯನ್ನು ರಾಜಸ್ಥಾನದಿಂದ ತರಿಸಿಕೊಳ್ಳಲಾಗಿದೆ. ಮಹಾರಾಷ್ಟ್ರದಿಂದ ₹4.6 ಕೋಟಿ ಮೌಲ್ಯದ ತೇಗದ ಮರಗಳನ್ನು ಬಳಸಿಕೊಳ್ಳಲಾಗುವುದು. ಒಟ್ಟು ಮೂರು ರಾಮನ ಮೂರ್ತಿಗಳನ್ನು ಸಿದ್ಧಪಡಿಸಿಲಾಗಿದೆ. ಇವುಗಳಲ್ಲಿ ಒಂದನ್ನು ಮಂದಿರದಲ್ಲಿ ಪ್ರತಿಷ್ಠಾಪಿಸಲಾಗುವುದು. ಜನವರಿ 22ರಂದು ಮಂದಿರ ಉದ್ಘಾಟನೆಗೊಳ್ಳಲಿದೆ. ಆದರೆ, ಮೊದಲಿಗೆ ನೆಲಮಹಡಿ ಮಾತ್ರವೇ ಭಕ್ತಾದಿಗಳ ದರ್ಶನಕ್ಕೆ ತೆರೆದುಕೊಳ್ಳಲಿದೆ' ಎಂದು ದೇವಾಲಯದ ಟ್ರಸ್ಟ್‌ನ ಸದಸ್ಯರೊಬ್ಬರು ಹೇಳಿದರು.

ಯೆಚೂರಿ ಭಾಗವಹಿಸುವುದಿಲ್ಲ: ಸಿಪಿಎಂ

ನವದೆಹಲಿ: ರಾಮಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಭಾಗವಹಿಸುವುದಿಲ್ಲ ಎಂದು ಸಿಪಿಎಂನ ಪಾಲಿಟ್ ಬ್ಯುರೊ ಮಂಗಳವಾರ ಹೇಳಿದೆ. 'ಧಾರ್ಮಿಕ ಕಾರ್ಯಕ್ರಮವಾದ ರಾಮಮಂದಿರ ಉದ್ಘಾಟನೆಯನ್ನು ಬಿಜೆಪಿ ಹಾಗೂ ಆರ್‌ಎಸ್‌ಎಸ್ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಳ್ಳುತ್ತಿದೆ' ಎಂದೂ ಪಕ್ಷ ದೂರಿದೆ. ಪಕ್ಷದ ನಿರ್ಧಾರದ ಕುರಿತು ಪಾಲಿಟ್ ಬ್ಯೂರೊ ತನ್ನ 'ಎಕ್ಸ್' ಖಾತೆಯಲ್ಲಿ ಹೇಳಿಕೆ ಪ್ರಕಟಿಸಿದೆ. 'ಪ್ರಧಾನಿ ಮೋದಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ ಹಾಗೂ ಇನ್ನಿತರ ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರನ್ನು ಬಳಸಿಕೊಂಡು ಧಾರ್ಮಿಕ ಕಾರ್ಯಕ್ರಮವನ್ನು ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮವನ್ನಾಗಿ ಮಾರ್ಪಡಿಸಿಕೊಳ್ಳಲಾಗುತ್ತಿದೆ' ಎಂದಿದೆ.

ಸಿಬಲ್ ಟ್ವೀಟ್: ಸುಳ್ಳು ಸುದ್ದಿ

'ನನ್ನ ಮಾತಿಗೆ ನಾನು ಬದ್ಧನಾಗಿದ್ದೇನೆ. ರಾಮಮಂದಿರ ನಿರ್ಮಾಣವಾಗುವ ಮೊದಲೇ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ರಾಜ್ಯಸಭಾ ಸದಸ್ಯ, ವಕೀಲ ಕಪಿಲ್ ಸಿಬಲ್ ಅವರು ಟ್ವೀಟ್ ಮಾಡಿದ್ದಾರೆ ಎನ್ನಲಾದ ಪೋಸ್ಟರ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಪೋಸ್ಟ್ ಹಂಚಿಕೊಂಡ ಕೆಲವು 'ಎಕ್ಸ್' ಖಾತೆದಾರರು, 'ದಿನಾಂಕ ಹತ್ತಿರವಾಗುತ್ತಿದೆ. ಕಪಿಲ್ ಸಿಬಲ್ ಅವರಿಗೆ ಯಾರಾದರೂ ನೆನಪಿಸಿ' ಎಂದು ಬರೆದುಕೊಂಡಿದ್ದಾರೆ. ಆದರೆ, ಇದೊಂದು ಸುಳ್ಳು ಸುದ್ದಿಯಾಗಿದೆ.

ಪೋಸ್ಟರ್‌ನಲ್ಲಿ ಸಿಬಲ್ ಅವರು 2020ರಲ್ಲಿ ಈ ಮಾತನ್ನು ಹೇಳಿದ್ದಾಗಿ ಗೊತ್ತಾಗುತ್ತದೆ. ಆದರೆ, ಸಿಬಲ್ ಅವರ 'ಎಕ್ಸ್' ಖಾತೆಯನ್ನು 2020ರಿಂದ ಇಲ್ಲಿಯವರೆಗೆ ಹುಡುಕಾಡಿದಾದರೂ ಇಂಥದೊಂದು ಟ್ವೀಟ್ ಕಾಣಿಸುವುದಿಲ್ಲ. ಈ ಪೋಸ್ಟರ್ ಬಗ್ಗೆ ಸಿಬಲ್ ಅವರೇ ಡಿ.24ರಂದು ತಮ್ಮ 'ಎಕ್ಸ್' ಖಾತೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ. 'ಇಂಥ ಯಾವುದೇ ಟ್ವೀಟ್ ಅನ್ನು ನಾನು ಮಾಡಿಲ್ಲ' ಎಂದು ಅವರು ಹೇಳಿದ್ದಾರೆ.

ಜೆ.ಪಿ. ನಡ್ಡಾ– ಅಮಿತ್ ಶಾ ಸರಣಿ ಸಭೆ

ಲೋಕಸಭಾ ಚುನಾವಣಾ ಸಿದ್ಧತೆಗೆ ಬಿಜೆಪಿ ಚಾಲನೆ • ಬಂಗಾಳದಲ್ಲಿ ಮುಖಂಡರೊಂದಿಗೆ ಚರ್ಚೆ

ಪ್ರಜಾವಾಣಿ ವಾರ್ತೆ



ಕೋಲ್ಕತ್ತದ ಕಾಲಿಘಾಟ್ ದೇವಸ್ಥಾನಕ್ಕೆ ಬಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು ಜನರತ್ತ ಕೈ ಬೀಸಿದರು –ಪಿಟಿಐ ಚಿತ್ರ

ಕೋಲ್ಕತ್ತ: ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಪಶ್ಚಿಮಬಂಗಾಳಕ್ಕೆ ಭೇಟಿ ನೀಡಿ, ಸರಣಿ ಸಭೆಗಳು ಮತ್ತು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಇದರೊಂದಿಗೆ ರಾಜ್ಯದಲ್ಲಿ ಲೋಕಸಭೆ ಚುನಾವಣೆಗಾಗಿ ಪಕ್ಷದ ಸಿದ್ಧತೆಗಳಿಗೆ ಚಾಲನೆ ನೀಡಿದರು.

ಸೋಮವಾರ ತಡರಾತ್ರಿಯೇ ಇಲ್ಲಿಗೆ ಬಂದ ಈ ಇಬ್ಬರು ನಾಯಕರು ಮಂಗಳವಾರ ಗುರುದ್ವಾರ ಮತ್ತು ಕಾಲಿಘಾಟ್ ದೇವಸ್ಥಾನಕ್ಕೆ ಭೇಟಿ ನೀಡಿದರು. ಬಳಿಕ ಒಂದರ ಮೇಲೆ ಒಂದರಂತೆ ಸಂಘಟನಾ ಸಭೆಗಳನ್ನು ನಡೆಸಿದರು.

ಮುಂಬರುವ ಚುನಾವಣೆಗಾಗಿ ಸಿದ್ಧತೆ ಕೈಗೊಳ್ಳಲು 15 ಸದಸ್ಯರ ತಂಡವನ್ನು ರಚಿಸಲಾಗಿದೆ. ಈ ತಂಡದಲ್ಲಿ ರಾಜ್ಯದ ನಾಲ್ವರು ಕೇಂದ್ರ ಸಚಿವರ ಹೆಸರುಗಳು ಇಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ರಾಜ್ಯದಲ್ಲಿನ 42 ಸ್ಥಾನಗಳ ಪೈಕಿ 18 ಸ್ಥಾನಗಳನ್ನು ಪಡೆದಿತ್ತು. ಮುಂಬರುವ ಚುನಾವಣೆಯಲ್ಲಿ 35 ಸ್ಥಾನಗಳನ್ನು ಗೆಲ್ಲಿಸಿಕೊಡಬೇಕೆಂಬ ಗುರಿಯನ್ನು ಅಮಿತ್ ಶಾ ಅವರು ರಾಜ್ಯ ಘಟಕಕ್ಕೆ ನಿಗದಿಪಡಿಸಿದ್ದಾರೆ.

ರಾಷ್ಟ್ರೀಯ ಗ್ರಂಥಾಲಯದಲ್ಲಿ ನಡ್ಡಾ ಮತ್ತು ಶಾ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಪಕ್ಷದ ಪರವಾಗಿ ಸಾಮಾಜಿಕ ಜಾಲತಾಣದಲ್ಲಿ ಕೆಲಸ ಮಾಡಲು 1500 ಮಂದಿ ಮುಂದೆ ಬಂದಿದ್ದಾರೆ.

ಭ್ರಷ್ಟಾಚಾರ, ರಾಜಕೀಯದಲ್ಲಿ ಕುಟುಂಬ ಸದಸ್ಯರಿಗೆ ಉತ್ತೇಜನ ಮತ್ತು ನಿರುದ್ಯೋಗದಂತಹ ವಿಷಯಗಳನ್ನು ರಾಜ್ಯದ ಬಿಜೆಪಿ ನಾಯಕರು ಚರ್ಚಿಸಿದರು. ಮುಂದೆ ಚುನಾವಣಾ ಪ್ರಚಾರದ ವೇಳೆಯೂ ಈ ವಿಷಯಗಳು ಪ್ರಧಾನವಾಗಿ ಪ್ರಸ್ತಾಪವಾಗುವ ಸಾಧ್ಯತೆ ಇದೆ.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 35 ಸ್ಥಾನಗಳನ್ನು ಪಡೆಯುವುದು ದೂರದ ಮಾತು. ಪಶ್ಚಿಮಬಂಗಾಳದಲ್ಲಿ ಬಿಜೆಪಿಯು ಮೂರರಿಂದ ಐದು ಸ್ಥಾನಗಳಲ್ಲಿ ಗೆಲ್ಲುವ ಸಾಮರ್ಥ್ಯವನ್ನು ಮೊದಲು ಪ್ರದರ್ಶಿಸಲಿ ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಹೇಳಿದ್ದಾರೆ.

ಬಿಜೆಪಿ ನಾಯಕರನ್ನು 'ನಿತ್ಯ ಪ್ರಯಾಣಿಸುವ ಪ್ರಯಾಣಿಕರು' ಎಂದು ಬಣ್ಣಿಸಿದ ಅವರು, ರಾಜ್ಯಕ್ಕೆ ಹೆಚ್ಚು ನಾಯಕರು ಭೇಟಿ ನೀಡಿದಷ್ಟೂ ಬಿಜೆಪಿಯು ಹೆಚ್ಚು ಸ್ಥಾನಗಳನ್ನು ಕಳೆದುಕೊಳ್ಳಲಿದೆ ಎಂದಿದ್ದಾರೆ.

ತೆಲಂಗಾಣ: ಎರಡಂಕಿ ದಾಟಲು ಬಿಜೆಪಿ ನಾಯಕರ ಗುರಿ

ಹೈದರಾಬಾದ್: ಮುಂಬರುವ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ತೆಲಂಗಾಣದ ಬಿಜೆಪಿ ಘಟಕವು, ರಾಜ್ಯದಲ್ಲಿ ಎರಡಂಕಿಯ ಸ್ಥಾನಗಳನ್ನು ಗೆಲ್ಲುವ ಉದ್ದೇಶದಿಂದ 90 ದಿನಗಳ ಕ್ರಿಯಾ ಯೋಜನೆಗೆ ಸಿದ್ಧತೆ ಆರಂಭಿಸಿದೆ.

ಮೂಲಗಳ ಪ್ರಕಾರ, ಕ್ರಿಯಾ ಯೋಜನೆಯು ಜನವರಿಯಿಂದ ಜಾರಿಯಾಗಲಿದೆ.

ಈ ಮಧ್ಯೆ ಚುನಾವಣಾ ಸಿದ್ಧತೆಗಳಿಗೆ ಔಪಚಾರಿಕವಾಗಿ ಚಾಲನೆ ನೀಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಿಸೆಂಬರ್ 28ರಂದು ತೆಲಂಗಾಣಕ್ಕೆ ಭೇಟಿ ನೀಡಿ, ಪದಾಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

> ಲೋಕಸಭಾ ಚುನಾವಣೆಯಲ್ಲಿ ತೆಲಂಗಾಣದಲ್ಲಿ ಎರಡಂಕಿಯ ಸೀಟುಗಳನ್ನು ಗೆಲ್ಲುವ ಗುರಿ ಇದೆ. ಮೋದಿಯನ್ನು ಪ್ರಧಾನಿಯನ್ನಾಗಿ ಮಾಡಲು ಜನರು ಕಾತರರಾಗಿದ್ದಾರೆ
>
> **ಜಿ.ಕಿಶನ್ ರೆಡ್ಡಿ**
> ತೆಲಂಗಾಣ ಬಿಜೆಪಿ ಮುಖ್ಯಸ್ಥ

ರಾಜ್ಯ ಘಟಕಗಳೊಂದಿಗೆ 'ಕೈ' ವರಿಷ್ಠರ ಮಾತುಕತೆ

ನವದೆಹಲಿ: ಲೋಕಸಭೆಯ ಮುಂಬರುವ ಚುನಾವಣೆಗೆ ಕಾಂಗ್ರೆಸ್ ವರಿಷ್ಠರು ಸಿದ್ಧತೆ ನಡೆಸಿದ್ದು, 'ಇಂಡಿಯಾ' ಮೈತ್ರಿಕೂಟದ ಪಕ್ಷಗಳೊಂದಿಗೆ ಸೀಟು ಹಂಚಿಕೆ, ರಾಜ್ಯಗಳಲ್ಲಿನ ಪಕ್ಷದ ಸ್ಥಿತಿಗತಿ ಕುರಿತು ರಾಜ್ಯ ಘಟಕದ ಮುಖಂಡರೊಂದಿಗೆ ಚರ್ಚೆ ಆರಂಭಿಸಿದ್ದಾರೆ.

ಚುನಾವಣೆ ಎದುರಿಸಲು ರಾಜ್ಯದಲ್ಲಿನ ಪಕ್ಷದ ಸ್ಥಿತಿಗತಿ ಕುರಿತು ಬಿಹಾರದ ಕಾಂಗ್ರೆಸ್ ಮುಖಂಡರ ಜೊತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಿರಿಯ ನಾಯಕರು ಮಂಗಳವಾರ ಚರ್ಚೆ ನಡೆಸಿದರು.

ಪಂಜಾಬ್, ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನ ಕಾಂಗ್ರೆಸ್ ಮುಖಂಡರ ಜೊತೆಗೂ ವರಿಷ್ಠರು ಸಭೆ ನಡೆಸಿದ್ದಾರೆ. ಆಂಧ್ರಪ್ರದೇಶದ ಮುಖಂಡರ ಜೊತೆಗೆ ಬುಧವಾರ ಸಭೆ ನಡೆಸಲಿದ್ದಾರೆ.

ಬಿಹಾರ ರಾಜ್ಯ ಘಟಕದ ಅಧ್ಯಕ್ಷ ಅಖಿಲೇಶ್ ಪ್ರಸಾದ್ ಸಿಂಗ್ ಸೇರಿದಂತೆ 40 ಮಂದಿ ಮುಖಂಡರ ಜೊತೆ ಮಲ್ಲಿಕಾರ್ಜುನ ಖರ್ಗೆ, ಸಂಸದ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಚರ್ಚೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಜೆಡಿಯು ಮತ್ತು ಆರ್‌ಜೆಡಿ ಜೊತೆಗೆ ಸೀಟು ಹಂಚಿಕೆ ವಿಚಾರವಾಗಿ ಚರ್ಚಿಸುವಾಗ, 'ಕಾಂಗ್ರೆಸ್‌ಗೆ ಸೂಕ್ತ ಸಂಖ್ಯೆಯ' ಸೀಟುಗಳನ್ನು ಕೇಳುವಂತೆ ಬಿಹಾರದ ಮುಖಂಡರು ಸಭೆಯಲ್ಲಿ ಒತ್ತಾಯಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸೀಟು ಹಂಚಿಕೆ ವಿಚಾರವಾಗಿ ಮಾತನಾಡುವ ಮೊದಲು ರಾಜ್ಯದಲ್ಲಿ ಪಕ್ಷದ ನೆಲೆಗಟ್ಟು ಹೇಗಿದೆ ಎಂಬುದರ ಬಗ್ಗೆ ಹೇಳಿ ಎಂದು ರಾಹುಲ್ ಗಾಂಧಿ ಅವರು ಬಿಹಾರದ ಕಾಂಗ್ರೆಸ್ ಮುಖಂಡರಿಗೆ ಸೂಚಿಸಿದರು ಎನ್ನಲಾಗಿದೆ.

ಬಿಹಾರದಲ್ಲಿ ಕಾಂಗ್ರೆಸ್ ಸದ್ಯ ಒಂದು ಲೋಕಸಭಾ ಸ್ಥಾನವನ್ನು ಹೊಂದಿದೆ. ಜೆಡಿಯು–ಆರ್‌ಜೆಡಿಯು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮೂರರಿಂದ ನಾಲ್ಕು ಸೀಟುಗಳನ್ನು ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಮೂರು ಗಂಟೆಗಳ ಸಭೆಯ ಬಳಿಕ ಮಾತನಾಡಿದ ಅಖಿಲೇಶ್ ಪ್ರಸಾದ್ ಸಿಂಗ್, ಲೋಕಸಭಾ ಚುನಾವಣೆಯಲ್ಲಿ ಮೈತ್ರಿಕೂಟದ ಅಡಿಯಲ್ಲಿ ಕಾಂಗ್ರೆಸ್ ಸ್ಪರ್ಧಿಸಲಿದೆ ಎಂದು ಹೇಳಿದ್ದಾರೆ.

'ಬಿಜೆಪಿ ಜತೆ ಮೈತ್ರಿ ಇಲ್ಲ'

ಚೆನ್ನೈ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಇಲ್ಲ ಎಂದು ತಮಿಳುನಾಡಿನ ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಇದೇ ಸಂದರ್ಭದಲ್ಲಿ 'ಜನರ ನೈಜ ಸಮಸ್ಯೆ' ಮತ್ತು ಆಡಳಿತಾರೂಢ ಡಿಎಂಕೆ ವೈಫಲ್ಯಗಳನ್ನಿಟ್ಟುಕೊಂಡು ಚುನಾವಣೆ ಎದುರಿಸುವುದಾಗಿ ಅದು ತಿಳಿಸಿದೆ.

ಆದರೆ, ಪಕ್ಷದ ಪ್ರಮುಖ ನೀತಿ ನಿರ್ಧಾರಗಳನ್ನು ಕೈಗೊಳ್ಳುವ ಸಾಮಾನ್ಯ ಮಂಡಳಿಯ ಸಭೆಯಲ್ಲಿ ಕೈಗೊಂಡ ನಿರ್ಣಯವು ಬಿಜೆಪಿ ಬಗ್ಗೆ ಮೃದುಧೋರಣೆ ಹೊಂದಿದೆ. ಬಿಜೆಪಿ ಮತ್ತು ಕೇಂದ್ರ ಸರ್ಕಾರವನ್ನು ಟೀಕಿಸದಿರಲು ನಿರ್ಧರಿಸಿದೆ.

ನೌಕಾಪಡೆಯ ಬಲ ಮತ್ತಷ್ಟು ಹೆಚ್ಚಿಸಿದ ಅತ್ಯಾಧುನಿಕ ಯುದ್ಧ ನೌಕೆ

ಐಎನ್‌ಎಸ್ ಇಂಫಾಲ್ ನಿಯೋಜನೆ

ಪ್ರಜಾವಾಣಿ ವಾರ್ತೆ



ಐಎನ್‌ಎಸ್ ಇಂಫಾಲ್ ಯುದ್ಧನೌಕೆಯನ್ನು ನೌಕಾಪಡೆಗೆ ನಿಯೋಜಿಸುವ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್‌.ಹರಿ ಕುಮಾರ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಮುಂಬೈ: ಭಾರತೀಯ ನೌಕಾಪಡೆಯ ಬಲವನ್ನು ಹೆಚ್ಚಿಸಿರುವ, ಕ್ಷಿಪಣಿ ವಿಧ್ವಂಸಕ ಅತ್ಯಾಧುನಿಕ ಯುದ್ಧ ನೌಕೆ 'ಐಎನ್‌ಎಸ್ ಇಂಫಾಲ್' ಅನ್ನು ಮಂಗಳವಾರ ಕರ್ತವ್ಯಕ್ಕೆ ನಿಯೋಜಿಸಲಾಯಿತು.

ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಯನ್ನು ಉಡಾವಣೆ ಮಾಡುವ ಸಾಮರ್ಥ್ಯ ಹೊಂದಿರುವ ನೌಕೆಯನ್ನು ನೌಕಾಪಡೆಯ ಪಶ್ಚಿಮ ಕಮಾಂಡ್‌ಗೆ ಸೇರ್ಪಡೆಗೊಳಿಸಲು ಮುಂಬೈನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಕ್ಷಣಾ ಸಚಿವ ರಾಜನಾಥ್ ಸಿಂಗ್, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿ ಕುಮಾರ್ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಸಮಾರಂಭದಲ್ಲಿ ಪಾಲ್ಗೊಂಡರು.

ಭಾರತೀಯ ನೌಕಾಪಡೆಯ ಯುದ್ಧನೌಕೆಗೆ ಈಶಾನ್ಯ ರಾಜ್ಯದ ನಗರವೊಂದರ ಹೆಸರು ಇಟ್ಟಿರುವುದು ಇದೇ ಮೊದಲು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಣಿಪುರದ ಜನರ ಕೊಡುಗೆ ಮತ್ತು ತ್ಯಾಗಗಳನ್ನು ಸ್ಮರಿಸಲು ಈ ಹೆಸರು ಇಡಲಾಗಿದೆ.

ಬಂದರು ಮತ್ತು ಸಮುದ್ರದಲ್ಲಿ ವಿವಿಧ ಹಂತಗಳಲ್ಲಿ ಸಮಗ್ರ ರೀತಿಯಲ್ಲಿ ಪರೀಕ್ಷೆಗೆ ಒಳಪಡಿಸಿದ ನೌಕೆಯನ್ನು ಅಕ್ಟೋಬರ್ 20 ರಂದು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು.

'ಇದೇ ವರ್ಷ ನವೆಂಬರ್‌ನಲ್ಲಿ ಇಂಫಾಲ್ ನೌಕೆಯಲ್ಲಿ ಬ್ರಹ್ಮೋಸ್ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆಯನ್ನು ಯಶಸ್ವಿಯಾಗಿ ನಡೆಸಲಾಗಿತ್ತು. ಸ್ವದೇಶಿನಿರ್ಮಿತ ಯುದ್ಧನೌಕೆಯನ್ನು ನಿಯೋಜನೆಗೂ ಮುನ್ನ ಈ ರೀತಿಯ ಪರೀಕ್ಷೆಗೆ ಒಳಪಡಿಸಿದ್ದು ಇದೇ ಮೊದಲು. ನೌಕೆಯ ಸಾಮರ್ಥ್ಯದಲ್ಲಿ ನೌಕಾಪಡೆಯು ಇಟ್ಟಿರುವ ವಿಶ್ವಾಸವನ್ನು ಇದು ತೋರಿಸುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

'ಐಎನ್‌ಎಸ್ ಇಂಫಾಲ್ ನೌಕೆಯು ರಕ್ಷಣಾ ಕ್ಷೇತ್ರದಲ್ಲಿ ದೇಶವು ಸ್ವಾವಲಂಬನೆ (ಆತ್ಮನಿರ್ಭರತೆ) ಸಾಧಿಸುತ್ತಿರುವುದಕ್ಕೆ ಉತ್ತಮ ಉದಾಹರಣೆಯಾಗಿದೆ. ನೌಕಾಪಡೆಯ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿದೆ' ಎಂದು ರಾಜನಾಥ್ ಸಿಂಗ್ ಹೇಳಿದರು.

ಒಟ್ಟು 315 ಸಿಬ್ಬಂದಿಯನ್ನು ಒಳಗೊಳ್ಳಲಿರುವ ಈ ನೌಕೆಗೆ ಕ್ಯಾಪ್ಟನ್ ಕೆ.ಕೆ.ಚೌಧರಿ ಅವರು ಕಮಾಂಡರ್ ಆಗಿದ್ದಾರೆ.

ಅಂಕಿ-ಅಂಶಗಳು

163 ಮೀ
ನೌಕೆಯ ಉದ್ದ

75%
ಸ್ವದೇಶಿ ತಂತ್ರಜ್ಞಾನ, ಉಪಕರಣ ಮತ್ತು ಬಿಡಿಭಾಗಗಳ ಬಳಕೆ

315
ಸಿಬ್ಬಂದಿ

ಸಮುದ್ರದ ತಳದಲ್ಲಿದ್ದರೂ ಪತ್ತೆಹಚ್ಚಿ ಕ್ರಮಕೈಗೊಳ್ಳುತ್ತೇವೆ: ರಾಜನಾಥ್

ಮುಂಬೈ: ಸರಕು ಸಾಗಣೆ ಹಡಗುಗಳ ಮೇಲೆ ಈಚೆಗೆ ನಡೆದ ದಾಳಿಯ ಹಿಂದಿರುವವರನ್ನು ಪತ್ತೆಹಚ್ಚಿ ಶಿಕ್ಷಿಸಲಾಗುವುದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

'ಎಂವಿ ಚೆಮ್ ಪ್ಲುಟೊ ಮತ್ತು ಎಂವಿ ಸಾಯಿಬಾಬಾ (ದಕ್ಷಿಣ ಕೆಂಪು ಸಮುದ್ರದಲ್ಲಿ) ಹಡಗುಗಳ ಮೇಲೆ ನಡೆದ ಡ್ರೋನ್ ದಾಳಿಯನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ದಾಳಿಯ ಹಿಂದಿರುವವರು ಸಾಗರದ ತಳದಲ್ಲಿದ್ದರೂ ಪತ್ತೆಹಚ್ಚಿ ಕ್ರಮ ಕೈಗೊಳ್ಳುತ್ತೇವೆ' ಎಂದು ಎಚ್ಚರಿಸಿದರು.

ಸೌದಿ ಅರೇಬಿಯಾದಿಂದ ಮಂಗಳೂರಿಗೆ ಕಚ್ಚಾ ತೈಲ ಸಾಗಿಸುತ್ತಿದ್ದ ಸರಕು ಸಾಗಣೆ ಹಡಗು ಎಂವಿ ಚೆಮ್ ಪ್ಲುಟೊ ಮೇಲೆ ಶನಿವಾರ ಡ್ರೋನ್ ದಾಳಿ ನಡೆದಿತ್ತು. ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿರಲಿಲ್ಲ.

ಈ ಘಟನೆಯ ಬಳಿಕ ನೌಕಾಪಡೆಯು ಸಮುದ್ರದಲ್ಲಿ ತನ್ನ ಗಸ್ತು ಹೆಚ್ಚಿಸಿದೆ ಎಂದು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿ ಕುಮಾರ್ ತಿಳಿಸಿದರು.

ನೌಕೆಯ ವೈಶಿಷ್ಟ್ಯಗಳು

- ಭಾರತದಲ್ಲಿ ಈವರೆಗೆ ನಿರ್ಮಿಸಲಾಗಿರುವ ಪ್ರಬಲ ಯುದ್ಧ ನೌಕೆಗಳಲ್ಲಿ ಇದೂ ಒಂದು
- ಪರಮಾಣು, ಜೈವಿಕ ಮತ್ತು ರಾಸಾಯನಿಕ ಅಸ್ತ್ರಗಳ ದಾಳಿ ಸೇರಿದಂತೆ ಯಾವುದೇ ಯುದ್ಧದ ಪರಿಸ್ಥಿತಿಯಲ್ಲೂ ಹೋರಾಡುವ ರೀತಿಯಲ್ಲಿ ನೌಕೆಯನ್ನು ವಿನ್ಯಾಸಗೊಳಿಸಲಾಗಿದೆ
- ಕ್ಷಿಪಣಿಗಳನ್ನು ನಾಶ ಮಾಡಬಲ್ಲ ವ್ಯವಸ್ಥೆ ಮತ್ತು ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಇದಕ್ಕಿದೆ
- ನೆಲದಿಂದ ನೆಲಕ್ಕೆ ಮತ್ತು ನೆಲದಿಂದ ಆಗಸಕ್ಕೆ ಉಡಾವಣೆ ಮಾಡಬಲ್ಲ ಕ್ಷಿಪಣಿಗಳನ್ನು ಒಳಗೊಂಡಿರಲಿದೆ
- ಸ್ವದೇಶಿ ನಿರ್ಮಿತ ರಾಕೆಟ್ ಲಾಂಚರ್, ಟಾರ್ಪಿಡೊ ಲಾಂಚರ್‌ಗಳು ಮತ್ತು ಜಲಾಂತರ್ಗಾಮಿ ಯುದ್ಧ ನೌಕೆಗಳನ್ನು ಧ್ವಂಸಗೊಳಿಸುವ ಹೆಲಿಕಾಪ್ಟರ್‌ಗಳನ್ನು ಒಳಗೊಂಡಿದೆ

'ಅಪರಾಧ ಕೃತ್ಯದಿಂದ ದೊರೆತ' ಆಸ್ತಿ ಬಳಸಿದ್ದ ವಾದ್ರಾ: ಆರೋಪ



ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಅಳಿಯ, ಉದ್ಯಮಿ ರಾಬರ್ಟ್ ವಾದ್ರಾ ಅವರು 'ನವೀಕರಣ ಮಾಡಿ ವಾಸ್ತವ್ಯ' ಹೂಡಿದ್ದ ಲಂಡನ್‌ನಲ್ಲಿರುವ ಆಸ್ತಿ, 'ಅಪರಾಧ ಕೃತ್ಯದಿಂದ ದೊರೆತದ್ದು' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಿಸಿದೆ.

ಭಾರತದಲ್ಲಿ ಹಣ ಅಕ್ರಮ ವರ್ಗಾವಣೆ ಹಾಗೂ ತೆರಿಗೆ ವಂಚನೆ ಮಾಡಿದ ಆರೋಪ ಎದುರಿಸುತ್ತಿರುವ ಶಸ್ತ್ರಾಸ್ತ್ರ ವ್ಯವಹಾರಗಳ ಸಲಹೆಗಾರ ಮತ್ತು ಮಧ್ಯವರ್ತಿ ಸಂಜಯ್ ಭಂಡಾರಿ ಅವರಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಈ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ವಾದ್ರಾ ಅವರ ಹೆಸರು ಹೇಳಿರುವುದು ಇದೇ ಮೊದಲು.

ಬ್ರಿಟನ್‌ನಲ್ಲಿ ಬೇನಾಮಿ ಆಸ್ತಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ಯುಎಇಯಲ್ಲಿ ನೆಲೆಸಿರುವ ಎನ್‌ಆರ್‌ಐ ಉದ್ಯಮಿ ಸಿ.ಸಿ ತಂಬಿ ಮತ್ತು ಬ್ರಿಟನ್ ಪ್ರಜೆ ಸುಮಿತ್ ಚಡ್ಡಾ ಅವರ ವಿರುದ್ಧ ಹೊಸ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಂಬಿ ಅವರನ್ನು ಇ.ಡಿ ಅಧಿಕಾರಿಗಳು 2020ರ ಜನವರಿಯಲ್ಲಿ ಬಂಧಿಸಿದ್ದರು. ಇದೀಗ ಅವರು ಜಾಮೀನು ಪಡೆದು ಹೊರಬಂದಿದ್ದಾರೆ.

'ಸಂಜಯ್ ಭಂಡಾರಿ ಅವರು ಲಂಡನ್‌ನ ನಂ.12 ಬ್ರಯನ್‌ಸ್ಟನ್ ಸ್ಕ್ವೇರ್ ಮತ್ತು ನಂ. 6 ಗ್ರೋವ್ನರ್ ಹಿಲ್ ಕೋರ್ಟ್‌ನಲ್ಲಿರುವ ಆಸ್ತಿ ಸೇರಿದಂತೆ ಬಹಿರಂಗಪಡಿಸದೇ ಇರುವ ಇನ್ನಷ್ಟು ಆಸ್ತಿಗಳನ್ನು ವಿದೇಶದಲ್ಲಿ ಹೊಂದಿದ್ದಾರೆ' ಎಂದು ಆರೋಪಪಟ್ಟಿಯಲ್ಲಿ ಹೇಳಿದೆ.

'ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಈ ಆಸ್ತಿಗಳು 'ಅಪರಾಧ ಕೃತ್ಯದಿಂದ ದೊರೆತದ್ದು' ಆಗಿದೆ. ಸಿ.ಸಿ ತಂಬಿ ಮತ್ತು ಸುಮಿತ್ ಅವರು ಈ ಆಸ್ತಿಗಳನ್ನು ಬಳಸಿಕೊಂಡಿದ್ದರು' ಎಂದಿದೆ.

'ತಂಬಿ ಅವರು ವಾದ್ರಾ ಅವರ ನಿಕಟ ಸಹವರ್ತಿ ಎಂಬ ಮಾಹಿತಿ ತನಿಖೆಯಿಂದ ತಿಳಿದುಬಂದಿದೆ. ವಾದ್ರಾ ಅವರು ನಂ.12 ಬ್ರಯನ್‌ಸ್ಟನ್ ಸ್ಕ್ವೇರ್‌ನಲ್ಲಿರುವ ಆಸ್ತಿಯನ್ನು ನವೀಕರಣ ಮಾಡಿದ್ದು ಮಾತ್ರವಲ್ಲದೆ, ಅಲ್ಲಿ ವಾಸ್ತವ್ಯ ಮಾಡಿದ್ದರು' ಎಂದು ಹೇಳಿದೆ.

'ವಾದ್ರಾ ಮತ್ತು ತಂಬಿ ಅವರು ಫರೀದಾಬಾದ್ (ದೆಹಲಿ ಸಮೀಪ) ಬಳಿ ಪಾಲುದಾರಿಕೆಯಲ್ಲಿ ದೊಡ್ಡ ಪ್ರಮಾಣದ ಭೂಮಿ ಖರೀದಿಸಿದ್ದಾರೆ. ಇಬ್ಬರ ನಡುವೆ ಹಣಕಾಸಿನ ವ್ಯವಹಾರವೂ ನಡೆದಿದೆ' ಎಂದಿದೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿ, ರಾಬರ್ಟ್ ವಾದ್ರಾ ಅವರನ್ನು ಇ.ಡಿ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ವಿಚಾರಣೆ ನಡೆಸಿತ್ತು. ಆದರೆ ಅವರು ಎಲ್ಲ ಆರೋಪಗಳನ್ನು ನಿರಾಕರಿಸುತ್ತಲೇ ಬಂದಿದ್ದರು.

ಮುಂಬೈ: ಆರ್‌ಬಿಐ ಕಚೇರಿಗೆ ಬಾಂಬ್ ಬೆದರಿಕೆ

ಮುಂಬೈ (ಪಿಟಿಐ): ಇಲ್ಲಿನ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಕಚೇರಿ ಸೇರಿದಂತೆ ಒಟ್ಟು 11 ಸ್ಥಳಗಳಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆಯಿರುವ ಇ-ಮೇಲ್, ಮಂಗಳವಾರ ಮುಂಬೈನ ಕೆಲವೆಡೆ ಆತಂಕಕ್ಕೆ ಕಾರಣವಾಯಿತು. ಆದರೆ ಪೊಲೀಸರು ನಡೆಸಿದ ಶೋಧದಲ್ಲಿ ಯಾವುದೇ ಶಂಕಾಸ್ಪದ ವಸ್ತು ಪತ್ತೆ ಆಗಲಿಲ್ಲ.

ಆರ್‌ಬಿಐ ಗವರ್ನರ್ ಅವರ ಇ-ಮೇಲ್ ಐ.ಡಿಗೆ ಬೆಳಿಗ್ಗೆ 10.50ಕ್ಕೆ 'khilafat.india@gmail.com' ಎಂಬ ಐ.ಡಿಯಿಂದ ಬೆದರಿಕೆ ಇ-ಮೇಲ್ ಬಂದಿದೆ. ಆರ್‌ಬಿಐ ನ್ಯೂ ಸೆಂಟ್ರಲ್ ಕಚೇರಿ, ಚರ್ಚ್‌ಗೇಟ್ ಬಳಿಯ ಎಚ್‌ಡಿಎಫ್‌ಸಿ ಹೌಸ್ ಮತ್ತು ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನ ಐಸಿಐಸಿಐ ಬ್ಯಾಂಕ್ ಟವರ್‌ನಲ್ಲಿ ಮಧ್ಯಾಹ್ನ 1.30ಕ್ಕೆ ಬಾಂಬ್ ಸ್ಫೋಟಿಸಲಾಗುವುದು ಎಂಬ ಬೆದರಿಕೆ ಹಾಕಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ರಾಜೀನಾಮೆ ನೀಡಬೇಕು ಎಂದೂ ಇ-ಮೇಲ್‌ನಲ್ಲಿ ಆಗ್ರಹಿಸಲಾಗಿತ್ತು.

'ಇ-ಮೇಲ್‌ನಲ್ಲಿ ಹೆಸರಿಸಿರುವ ಎಲ್ಲ 11 ತಾಣಗಳಲ್ಲೂ ಪೊಲೀಸರು ಶೋಧ ಕಾರ್ಯ ನಡೆಸಿದರು. ಬಾಂಬ್ ಅಥವಾ ಯಾವುದೇ ಶಂಕಾಸ್ಪದ ವಸ್ತುಗಳು ಪತ್ತೆಯಾಗಿಲ್ಲ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಟೆಸ್ಟ್ ಪಂದ್ಯ • ವೇಗದ ದಾಳಿಗೆ ಭಾರತದ ಬ್ಯಾಟರ್‌ಗಳ ಪರದಾಟ

ರಬಾಡ ಆರ್ಭಟ, ರಾಹುಲ್ ಹೋರಾಟ

ಸೆಂಚುರಿಯನ್ (ಪಿಟಿಐ): ವೇಗದ ಬೌಲರ್‌ಗಳಿಗೆ ನೆರವಾಗುತ್ತಿದ್ದ ಪಿಚ್‌ನಲ್ಲಿ ಅಮೋಘ ಲಯದಲ್ಲಿ ಬೌಲಿಂಗ್ ಮಾಡಿದ ಕಗಿಸೊ ರಬಾಡ (44ಕ್ಕೆ5) ಅವರು ಭಾರತದ ಪ್ರಮುಖ ಬ್ಯಾಟರ್‌ಗಳನ್ನು ಕಾಡಿದರು. ಮಂಗಳವಾರ ಆರಂಭವಾದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ 8 ವಿಕೆಟ್‌ಗೆ 208 ರನ್‌ಗಳೊಡನೆ ದಿನದಾಟ ಮುಗಿಸಿತು. ವೇಗಿಗಳ ಆರ್ಭಟದ ನಡುವೆಯೂ ಕೆಚ್ಚೆದೆಯಿಂದ ಆಡಿದ ಕೆ.ಎಲ್.ರಾಹುಲ್ (ಅಜೇಯ 70, 105 ಎಸೆತ) ಅರ್ಧಶತಕ ಹೊಡೆದು ತಂಡದ ರಕ್ಷಣೆಗೆ ನಿಂತರು.

ಸೂಪರ್ ಸ್ಪೋರ್ಟ್ಸ್ ಪಾರ್ಕ್ ಕ್ರೀಡಾಂಗಣದಲ್ಲಿ ಪಂದ್ಯ ಅರ್ಧ ಗಂಟೆ ತಡವಾಗಿ ಆರಂಭವಾಯಿತು. ಮಳೆ, ಮಂದ ಬೆಳಕಿನಿಂದಾಗಿ ಬೇಗನೇ ಮುಕ್ತಾಯಗೊಂಡಿತು. 59 ಓವರುಗಳ ಆಟವಷ್ಟೇ ಸಾಧ್ಯವಾಯಿತು. ರಬಾಡಾ ಅವರು ಎರಡು ನಿರ್ಣಾಯಕ ಸ್ಪೆಲ್‌ಗಳಲ್ಲಿ ಭಾರತದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಟಾಸ್ ಗೆದ್ದ ತೆಂಬಾ ಬವುಮಾ ನಿರೀಕ್ಷೆಯಂತೆ ಬೌಲಿಂಗ್ ಆಯ್ದುಕೊಂಡಿದ್ದರು.

ಮೊದಲ ಸ್ಪೆಲ್‌ನಲ್ಲಿ ನಾಯಕ ರೋಹಿತ್ ಶರ್ಮಾ (5) ಅವರ ವಿಕೆಟ್ ಪಡೆದಿದ್ದ ರಬಾಡ, ಎರಡನೇ ಸ್ಪೆಲ್ ವೇಳೆ ಅಮೋಘ ಎಸೆತದಲ್ಲಿ ವಿರಾಟ್ ಕೊಹ್ಲಿ (38) ಅವರ ವಿಕೆಟ್ ಕೂಡ ಪಡೆದರು. ಸ್ವಲ್ಪ ಒಳಕ್ಕೆ ಬಂದ ಚೆಂಡನ್ನು ಆಡುವಂತೆ ಪ್ರೇರೇಪಿಸಿದರು. ಕೊಹ್ಲಿ ಬ್ಯಾಟ್‌ಗೆ ತಾಗಿದ ಚೆಂಡು ವಿಕೆಟ್ ಕೀಪರ್ ಕೈಲ್ ವೆರೈನ್ ಕೈಸೇರಿತು. ಬೇರೂರಲು ಪರದಾಡಿದ ಶ್ರೇಯಸ್ ಅಯ್ಯರ್ ಅವರ ರಕ್ಷಣೆಯನ್ನು ಭೇದಿಸಿದ ಚೆಂಡು ಬ್ಯಾಟ್ ಮತ್ತು ಪ್ಯಾಡ್ ನಡುವಿನಿಂದ ನುಗ್ಗಿ ಬೇಲ್ಸ್‌ಗಳನ್ನು ಹಾರಿಸಿತು.

ರಬಾಡ ಟೆಸ್ಟ್‌ನಲ್ಲಿ 14ನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಪಡೆದರು. ವಿಶ್ವಾಸದಿಂದ ಆಡುತ್ತಿದ್ದ ಶಾರ್ದೂಲ್ ಠಾಕೂರ್ (24) ಅವರ ಬಳಿ ರಬಾಡ ಅವರ ಬೌನ್ಸರ್ ಒಂದಕ್ಕೆ ಉತ್ತರವಿರಲಿಲ್ಲ. ನಂತರ ಅಶ್ವಿನ್ ವಿಕೆಟ್ ಕೂಡ ಪಡೆದರು. ಹಿಮ್ಮಡಿ ನೋವಿನಿಂದ ಕೆಲ ತಿಂಗಳು ವಿಶ್ರಾಂತಿಯಲ್ಲಿದ್ದ ರಬಾಡ ತಮ್ಮ ಪುನರಾಗಮನ ಪಂದ್ಯದಲ್ಲಿ ಲಯಕ್ಕೆ ಮರಳಲು ಸಮಯ ತೆಗೆದುಕೊಳ್ಳಲಿಲ್ಲ.

ಪದಾರ್ಪಣೆ ಪಂದ್ಯ ಆಡಿದ ನ್ಯಾಂಡ್ರೆ ಬರ್ಗರ್, ಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಅವರ ವಿಕೆಟ್ ಪಡೆದು ಆರಂಭಿಕ ಆಘಾತ ನೀಡಿದರು. ಅದಕ್ಕೆ ಮೊದಲೇ ನಾಯಕ ರೋಹಿತ್ ಅವರು ರಬಾಡ ಅವರ ಬೌನ್ಸರ್ ಎಸೆತವನ್ನು ಹುಕ್ ಮಾಡುವ ಯತ್ನದಲ್ಲಿ ಲಾಂಗ್‌ಲೆಗ್‌ನಲ್ಲಿ ಕ್ಯಾಚಿತ್ತಿದ್ದರು. ಭಾರತದಮೊದಲ 3 ವಿಕೆಟ್‌ಗಳು 11.1 ಓವರುಗಳಲ್ಲಿ 24 ರನ್‌ಗಳಾಗುವಷ್ಟರಲ್ಲಿ ಬಿದ್ದಿದ್ದವು. ಚೆಂಡಿಗೆ ಸ್ವಿಂಗ್ ಮತ್ತು ಅಸಮಾನ ಬೌನ್ಸ್ ನೀಡುತ್ತಿದ್ದ ಅನುಕೂಲಕರ ಪಿಚ್‌ನಲ್ಲಿ ಬರ್ಗರ್, ಕೋಯೆಝಿ, ರಬಾಡ, ಯಾನ್ಸೆನ್ ಅವರ ದಾಳಿಯೆದುರು ಭಾರತದ ಬ್ಯಾಟರ್‌ಗಳ ಪರದಾಟ ಮುಂದುವರಿಯಿತು.

ರಾಹುಲ್ ಹೋರಾಟ: ಈ ನಡುವೆ ಕೆ.ಎಲ್.ರಾಹುಲ್ ಎಚ್ಚರಿಕೆ ಮಿಶ್ರಿತ ಆಟವಾಡಿದರು. ಕಳೆದ ಪ್ರವಾಸದ ವೇಳೆ ಇದೇ ಕ್ರೀಡಾಂಗಣದಲ್ಲಿ ಶತಕ ಬಾರಿಸಿದ್ದ ರಾಹುಲ್ ಈ ಬಾರಿಯೂ ಒತ್ತಡದ ಪರಿಸ್ಥಿತಿಯಲ್ಲೇ ತಂಡದ ರಕ್ಷಣೆಗೆ ನಿಂತರು. ಅವರು ಎರಡು ಸಿಕ್ಸರ್, 10 ಬೌಂಡರಿಗಳನ್ನು ಬಾರಿಸಿದರು. ಕೆಳಕ್ರಮಾಂಕದ ಆಟಗಾರರ (ಶಾರ್ದೂಲ್ ಠಾಕೂರ್, ಬೂಮ್ರಾ) ಜೊತೆ ಅವರು ಟೀ ವಿರಾಮದ ನಂತರ ಅರ್ಧ ಶತಕವನ್ನೂ ದಾಟಿದರು.



ಅರ್ಧಶತಕ ಗಳಿಸಿದ ಕೆ.ಎಲ್. ರಾಹುಲ್ —ಎಎಫ್‌ಪಿ ಚಿತ್ರ



ಭಾರತ ತಂಡದ ವಿಕೆಟ್ ಪಡೆದ ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಅವರನ್ನು ಅಭಿನಂದಿಸುತ್ತಿರುವ ಸಹ ಆಟಗಾರರು —ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಒಂದನೇ ಇನಿಂಗ್ಸ್: ಭಾರತ: 8 ವಿಕೆಟ್‌ಗೆ 208 (59 ಓವರ್)

ಜೈಸ್ವಾಲ್ ಸಿ ವೆರೈನ್ ಬಿ ಬರ್ಗರ್ 17 (37ಎ, 4x4)
ರೋಹಿತ್ ಸಿ ಬರ್ಗರ್ ಬಿ ರಬಾಡ 5 (14ಎ, 4x1)
ಗಿಲ್ ಸಿ ವೆರೈನ್ ಬಿ ಬರ್ಗರ್ 2 (12ಎ)
ಕೊಹ್ಲಿ ಸಿ ವೆರೈನ್ ಬಿ ರಬಾಡ 38 (64ಎ, 4x5)
ಶ್ರೇಯಸ್ ಬಿ ರಬಾಡ 31 (50ಎ, 4x3, 6x1)
ರಾಹುಲ್ ಔಟಾಗದೆ 70 (105ಎ, 4x10, 6x2)
ಅಶ್ವಿನ್ ಸಿ ಸಬ್ (ಮುಲ್ಡರ್) ಬಿ ರಬಾಡ 8 (11ಎ, 4x2)
ಶಾರ್ದೂಲ್ ಸಿ ಎಲ್ಗರ್ ಬಿ ರಬಾಡ 24 (33ಎ, 4x3)
ಬೂಮ್ರಾ ಬಿ ಯಾನ್ಸೆನ್ 1 (19ಎ)
ಸಿರಾಜ್ ಔಟಾಗದೆ 0 (10ಎ)

ಇತರೆ: 12 (ಬೈ 1, ಲೆಗ್‌ಬೈ 8, ನೋಬಾಲ್ 1, ವೈಡ್ 2)

ವಿಕೆಟ್ ಪತನ: 1–13 (ರೋಹಿತ್, 4.6), 2–23 (ಯಶಸ್ವಿ, 9.4), 3–24 (ಗಿಲ್, 11.1), 4–92 (ಶ್ರೇಯಸ್, 26.6), 5–107 (ಕೊಹ್ಲಿ, 30.6), 6–121 (ಅಶ್ವಿನ್, 34.6), 7–164 (ಶಾರ್ದೂಲ್ ಠಾಕೂರ್, 46.2), 8–191 (ಜಸ್ಪ್ರೀತ್ ಬೂಮ್ರಾ, 54.3),

ಬೌಲಿಂಗ್: ಕಗಿಸೊ ರಬಾಡ 17–3–44–5, ಮಾರ್ಕೊ ಯಾನ್ಸೆನ್ 15–1–52–1, ನ್ಯಾಂಡ್ರೆ ಬರ್ಗರ್ 15–4–50–2, ಜೆರಾಲ್ಡ್ ಕೋಯೆಝಿ 12–1–53–0

‘ವರ್ಷಕ್ಕೆ 2 ಟೆಸ್ಟ್: ರಬಾಡಾಗೆ ದಾಖಲೆ ಹೇಗೆ ಸಾಧ್ಯ?’

ಸೆಂಚುರಿಯನ್ (ಪಿಟಿಐ): ಕಗಿಸೊ ರಬಾಡ ಈಗಾಗಲೇ ದಕ್ಷಿಣ ಆಫ್ರಿಕಾದ ಶ್ರೇಷ್ಠ ಬೌಲರ್‌ಗಳ ಸಾಲಿನಲ್ಲಿದ್ದಾರೆ. ಆದರೆ ದಕ್ಷಿಣ ಆಫ್ರಿಕಾ ತಂಡ ವರ್ಷಕ್ಕೆ ಕೆಲವೇ ಕೆಲವು ಟೆಸ್ಟ್ ಆಡಿದರೆ ಅವರು ಎಂದಿಗೂ ಡೇಲ್ ಸ್ಟೀನ್ ಅವರ 439 ವಿಕೆಟ್‌ಗಳ ದಾಖಲೆ ಮುರಿಯಲು ಸಾಧ್ಯವಾಗುವುದಿಲ್ಲ ಎಂದು ಮಾಜಿ ವೇಗದ ಬೌಲರ್ ಮಖಾಯ ಎಂಟಿನಿ ಮಂಗಳವಾರ ಹೇಳಿದರು.

ಈಗ ಭಾರತ ವಿರುದ್ಧ ಆಡುತ್ತಿರುವ ಟೆಸ್ಟ್ ಪಂದ್ಯ ದಕ್ಷಿಣ ಆಫ್ರಿಕಾ ಈ ವರ್ಷ ಆಡುತ್ತಿರುವ ಕೇವಲ ಮೂರನೇ ಟೆಸ್ಟ್ ಪಂದ್ಯವಾಗಿದೆ.

ಈಗ 285 ವಿಕೆಟ್‌ಗಳನ್ನು ಪಡೆದಿರುವ ರಬಾಡ ಅವರು ಹರಿಣಗಳ ನಾಡಿನ ದಿಗ್ಗಜ ಬೌಲರ್‌ಗಳಾದ ಆ್ಯಲನ್ ಡೊನಾಲ್ಡ್, ಶಾನ್ ಪೊಲಾಕ್, ಡೇಲ್ ಸ್ಟೀನ್ ಮತ್ತು ಸ್ವತಃ ಎಂಟಿನಿ ಸಾಲಿಗೆ ಸೇರುವರೇ ಎಂಬ ಪ್ರಶ್ನೆ ಎಂಟಿನಿ ಅವರಿಗೆ ಎದುರಾಯಿತು. ಎಂಟಿನಿ ಟೆಸ್ಟ್‌ಗಳಲ್ಲಿ 390 ವಿಕೆಟ್‌ಗಳನ್ನು ಗಳಿಸಿದ್ದಾರೆ.

‘ಅವರು ಈಗಾಗಲೇ ಆ (ದಿಗ್ಗಜರ) ಸಾಲಿನಲ್ಲಿದ್ದಾರೆ. ಈ ಮೇಲಿನ ಬೌಲರ್‌ಗಳು 400 ವಿಕೆಟ್‌ಗಳನ್ನು ದಾಟಿದ್ದಾರೆ. ಕೆಜಿ (ರಬಾಡ) 300 ವಿಕೆಟ್‌ಗಳ ಮೈಲಿಗಲ್ಲಿನ ಬೆನ್ನತ್ತಿದ್ದಾರೆ. ಆದರೆ ನಮಗೆ ದೊಡ್ಡ ಸಮಸ್ಯೆಯಿದೆ. ವರ್ಷಕ್ಕೆ ಎರಡು ಟೆಸ್ಟ್ ಆಡುತ್ತೀರಿ. ಏನಿದು? ಆ ದಾಖಲೆ ತಲುಪುವವರೆಗೆ ಅವರು ಆಡಲು ಆಗುತ್ತದೆಯೇ?’ ಎಂದು ವೀಕ್ಷಕವಿವರಣೆಗಾರರೂ ಆಗಿರುವ ಎಂಟಿನಿ ಪ್ರಶ್ನಿಸಿದರು

ಪಾಕಿಸ್ತಾನ ವಿರುದ್ಧ ಎರಡನೇ ಟೆಸ್ಟ್

ಆಸ್ಟ್ರೇಲಿಯಾ ನೆರವಿಗೆ ಲಾಬುಷೇನ್

ಮೆಲ್ಬರ್ನ್ (ಎಎಫ್‌ಪಿ): ಪಾಕಿಸ್ತಾನದ ಬಿಗು ದಾಳಿಯೆದುರು ಬಂಡೆಯಂತೆ ಅಚಲವಾಗಿ ನಿಂತ ಮಾರ್ನಸ್ ಲಾಬುಷೇನ್, 2ನೇ ಟೆಸ್ಟ್‌ನ ಮೊದಲ ದಿನ ಆಸ್ಟ್ರೇಲಿಯಾ ತಂಡ ಕುಸಿಯದಂತೆ ನೋಡಿಕೊಂಡರು. ಆಸ್ಟ್ರೇಲಿಯಾ ದಿನದಾಟ ಮುಗಿದಾಗ 3 ವಿಕೆಟ್‌ಗೆ 187 ರನ್ ಗಳಿಸಿ ನಿಟ್ಟುಸಿರುಬಿಟ್ಟಿತು.

120 ಎಸೆತಗಳನ್ನು ಆಡಿರುವ ಲಾಬುಷೇನ್ 44 ರನ್ ಗಳಿಸಿ ಅಜೇಯರಾಗುಳಿದರು. ಟ್ರಾವಿಸ್ ಹೆಡ್ 9 ರನ್ ಗಳಿಸಿ ಆಟ ಕಾದಿರಿಸಿದರು. ಮೊದಲ ದಿನ ಸುಮಾರು ಮೂರು ಗಂಟೆಗಳ ಆಟ ಮಳೆಯ ಪಾಲಾಯಿತು. ಪಾಕ್ ನಾಯಕ ಶಾನ್ ಮಸೂದ್ ಟಾಸ್ ಗೆದ್ದು ಆತಿಥೇಯರನ್ನು ಆಡಲು ಇಳಿಸಿದ್ದರು.

ಪಾಕ್ ನಾಯಕ ಶಾನ್ ಮಸೂದ್ ಬೌಲಿಂಗ್ ಆಯ್ಕೆ ಮಾಡಿಕೊಂಡ ನಂತರ, ಚೆಂಡಿಗೆ ಸ್ವಿಂಗ್ ನೀಡುತ್ತಿದ್ದ ಪಿಚ್‌ನಲ್ಲಿ ಪಾಕ್ ಬೌಲರ್‌ಗಳು ಪರಿಣಾಮಕಾರಿಯಾಗಿ ಬೌಲ್ ಮಾಡಿದರು. ಡೇವಿಡ್ ವಾರ್ನರ್ (38), ಉಸ್ಮಾನ್ ಖ್ವಾಜಾ (42) ಮತ್ತು ಸ್ಟೀವ್ ಸ್ಮಿತ್ (26) ಅವರ ವಿಕೆಟ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಸಹನೆಯಿಂದ ಆಡಿದ ಲಾಬುಷೇನ್ ಬೌಲರ್‌ಗಳನ್ನು ಹತಾಶಗೊಳಿಸಿದರು.



ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ —ಎಎಫ್‌ಪಿ ಚಿತ್ರ

ಚೆಸ್: ಕಿಶನ್ ಗಂಗೊಳ್ಳಿಗೆ ಮತ್ತೆ ಪ್ರಶಸ್ತಿ

ಬೆಂಗಳೂರು: ಅಗ್ರ ಶ್ರೇಯಾಂಕ ಪಡೆದಿದ್ದ ಕರ್ನಾಟಕದ ಆಟಗಾರ ಕಿಶನ್ ಗಂಗೊಳ್ಳಿ, ಸೋಮವಾರ ನಗರದಲ್ಲಿ ಮುಕ್ತಾಯಗೊಂಡ ದೃಷ್ಟಿದೋಷವುಳ್ಳವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಅಜೇಯ ಸಾಧನೆಯೊಡನೆ ಪ್ರಶಸ್ತಿ ಗೆದ್ದುಕೊಂಡರು. ಕಳೆದ ಸಲವೂ ಚಾಂಪಿಯನ್ ಆಗಿದ್ದ ಅವರು 9 ಸುತ್ತುಗಳಿಂದ ಒಟ್ಟು 7.5 ಪಾಯಿಂಟ್ಸ್ ಕಲೆಹಾಕಿದರು.

ಶಿವಮೊಗ್ಗದವರಾದ ಕಿಶನ್ ಎಂಟು ಬಾರಿ ಪ್ರಶಸ್ತಿ ಗೆದ್ದಿರುವುದೂ ಒಂದು ದಾಖಲೆಯಾಗಿದೆ. ಟ್ರೋಫಿ ಜೊತೆಗೆ ₹35,000 ನಗದು ಬಹುಮಾನ ಅವರ ಪಾಲಾಯಿತು.



ಟ್ರೋಫಿಯೊಂದಿಗೆ ಕಿಶನ್ ಗಂಗೊಳ್ಳಿ

ಯಲಹಂಕದ ಪಡುಕೋಣೆ– ದ್ರಾವಿಡ್ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ಆರ್ಯನ್ ಕೇರ್ ಫೌಂಡೇಷನ್ ಆತಿಥ್ಯದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಒಡಿಶಾದ ಸುಭೇಂದು ಕುಮಾರ್ ಪಾತ್ರ (ಒಡಿಶಾ) ಅವರು ಎರಡನೇ ಸ್ಥಾನ ಪಡೆದು ಟ್ರೋಫಿ ಮತ್ತು ₹25,000 ಬಹುಮಾನ ಪಡೆದರು. ಅಶ್ವಿನ್ ಮಕ್ವನಾ ಮೂರನೇ ಸ್ಥಾನ (ಟ್ರೋಫಿ ಮತ್ತು ₹15,000) ಪಡೆದರೆ, ಸಮಂತ್ ಮಿಲಿಂದ್ ಮತ್ತು ಶಶಿಧರ್ ಕೆ.ಎಂ. ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು. ದೇಶದ ನಾಲ್ಕು ವಲಯಗಳಿಂದ ಅರ್ಹತೆ ಪಡೆದ ಒಟ್ಟು 40 ಆಟಗಾರರು ಈ ಕೂಟದಲ್ಲಿ ಭಾಗವಹಿಸಿದ್ದರು.



ರಾಜಭವನದಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ವಾರ್ಷಿಕ ಪ್ರಶಸ್ತಿಯನ್ನು ಕ್ರೀಡಾಪಟುಗಳು, ಕ್ರೀಡಾ ಆಡಳಿತಗಾರರಿಗೆ ಪ್ರದಾನ ಮಾಡಲಾಯಿತು. ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಗೃಹ ಸಚಿವ ಜಿ.ಪರಮೇಶ್ವರ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಕ್ರೀಡಾ ಸಚಿವ ಬಿ.ನಾಗೇಂದ್ರ ಭಾಗವಹಿಸಿದ್ದರು—ಪ್ರಜಾವಾಣಿ ಚಿತ್ರ

2031ರವರೆಗೆ ಐಸಿಸಿ ಜೊತೆ ಕೋಕ್ ಪಾಲುದಾರಿಕೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಜೊತೆಗಿನ ತನ್ನ ಪಾಲುದಾರಿಕೆಯನ್ನು ಇನ್ನೂ ಎಂಟು ವರ್ಷ ಮುಂದುವರಿಸುವುದಾಗಿ ತಂಪು ಪಾನೀಯ ಕ್ಷೇತ್ರದ ಕೋಕಾ ಕೋಲಾ ಮಂಗಳವಾರ ಪ್ರಕಟಿಸಿದೆ. ಕ್ರಿಕೆಟ್ ಸಂಸ್ಥೆಯೊಂದಿಗೆ ಅತಿ ದೀರ್ಘ ಕಾಲ ಬಾಂಧವ್ಯ ಹೊಂದಿದ ಬ್ರ್ಯಾಂಡ್ ಎನಿಸಿತು.

ಪಾಲುದಾರಿಕೆಯನ್ನು 2031ರವರೆಗೆ ವಿಸ್ತರಿಸುವುದಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ ಕೋಕಾ ಕೋಲಾ ಕಂಪನಿ ಮತ್ತು ಐಸಿಸಿ ದುಬೈನಲ್ಲಿರುವ (ಐಸಿಸಿ) ಕೇಂದ್ರ ಕಚೇರಿಯಲ್ಲಿ ಸಹಿ ಹಾಕಿದವು ಎಂದು ಜಂಟಿ ಹೇಳಿಕೆ ತಿಳಿಸಿದೆ.

ಐಪಿಎಲ್: ಅಫ್ಗನ್ ಆಟಗಾರರಿಗೆ ಎಸಿಬಿ ಶಾಕ್

ಕಾಬೂಲ್ (ಪಿಟಿಐ): ಅಫ್ಗಾನಿಸ್ತಾನದ ಕ್ರಿಕೆಟಿಗರಾದ ಮುಜೀಬ್ ಉರ್ ರೆಹಮಾನ್, ನವೀನ್ ಉಲ್ ಹಕ್ ಮತ್ತು ಫಜಲ್ ಹಕ್ ಫಾರೂಕಿ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವುದು ಅನುಮಾನವಾಗಿದೆ. ಈ ಆಟಗಾರರಿಗೆ ವಿದೇಶಿ ಲೀಗ್‌ಗಳಲ್ಲಿ ಪಾಲ್ಗೊಳ್ಳಲು ಬೇಕಿದ್ದ ನಿರಾಕ್ಷೇಪಣಾ ಪತ್ರ ನೀಡದಿರಲು ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿ (ಎಸಿಬಿ) ನಿರ್ಧರಿಸಿದೆ.

2024ರ ಜನವರಿಯಿಂದ ಅನ್ವಯವಾಗುವ ಹೊಸ ಒಪ್ಪಂದಕ್ಕೆ ಸಹಿ ಹಾಕಲು ಈ ಮೂವರು ಆಟಗಾರರು ನಿರಾಕರಿಸಿ, ಫ್ರಾಂಚೈಸಿ ಲೀಗ್‌ಗಳಲ್ಲಿ ಆಡಲು ಎನ್‌ಒಸಿ ನೀಡುವಂತೆ ಎಸಿಬಿಗೆ ಮನವಿ ಮಾಡಿದ್ದರು. ಇದರ ಬೆನ್ನಲ್ಲೇ ಎಸಿಬಿ ಈ ಕ್ರಮ ತೆಗೆದುಕೊಂಡಿದೆ.

ಆಫ್ ಸ್ಪಿನ್ನರ್ ಮುಜೀಬ್ ₹ 2 ಕೋಟಿ ಮೂಲ ಬೆಲೆಗೆ ಕೋಲ್ಕತ್ತ ನೈಟ್ ರೈಡರ್ಸ್ ಪಾಲಾಗಿದ್ದರು. ಉಳಿದಂತೆ ವೇಗಿಗಳಾದ ನವೀನ್ ಅವರನ್ನು ಲಖನೌ ಸೂಪರ್ ಜೈಂಟ್ಸ್ ಮತ್ತು ಫಾರೂಕಿ ಅವರನ್ನು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಉಳಿಸಿಕೊಂಡಿದ್ದವು.

ಕ್ರೀಡಾ ಸಾಧಕರಿಗೆ ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆಯ ವಾರ್ಷಿಕ ಪ್ರಶಸ್ತಿ ಪ್ರದಾನ

‘ಜನವರಿಯಲ್ಲಿ ಮಿನಿ ಒಲಿಂಪಿಕ್ಸ್ ಆಯೋಜನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ತಿಂಗಳು ಬೆಂಗಳೂರಿನಲ್ಲಿ ಮೂರನೇ ಮಿನಿ ಒಲಿಂಪಿಕ್ಸ್ ನಡೆಸಲಾಗುವುದು ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ಹೇಳಿದರು.

ರಾಜಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಮಂಗಳೂರು ಅಥವಾ ಉಡುಪಿಯಲ್ಲಿ ಸೀನಿಯರ್ ಒಲಿಂಪಿಕ್ಸ್ ಆಯೋಜಿಸಲಾಗುವುದು. ಸೀನಿಯರ್ ಮತ್ತು ಜೂನಿಯರ್ ಒಲಿಂಪಿಕ್ಸ್‌ಗೆ ಸರ್ಕಾರ ಈಗಾಗಲೇ ಅನುದಾನ ಬಿಡುಗಡೆ ಮಾಡಿದೆ. ಸಾಧಕ ಕ್ರೀಡಾಪಟುಗಳಿಗೆ ನಿವೇಶನ ನೀಡುವುದು ಬಾಕಿ ಇದೆ. ಈ ಬಗ್ಗೆ ಸಂಪುಟದಲ್ಲಿ ಚರ್ಚಿಸಿ ಆದಷ್ಟು ಬೇಗ ನಿರ್ಧಾರ ಕೈಗೊಳ್ಳಬೇಕು ಎಂದು ಅವರು ಸರ್ಕಾರಕ್ಕೆ ಮನವಿ ಮಾಡಿದರು.

> **ನಾನು ವಿಶ್ವವಿದ್ಯಾಲಯ ಮಟ್ಟದಲ್ಲಿ 100 ಮೀ. ಓಟವನ್ನು 10.09 ಸೆಕೆಂಡ್‌ನಲ್ಲಿ ಓಡಿದ್ದೇನೆ. ಅಂದು ಮಣ್ಣಿನ ಟ್ರ್ಯಾಕ್‌ನಲ್ಲಿ ಮಾಡಿದ ದಾಖಲೆ ಈಗಲು ಯಾರೂ ಮುರಿದಿಲ್ಲ.**
> **ಜಿ.ಪರಮೇಶ್ವರ,** ಗೃಹ ಸಚಿವ

ಗೃಹ ಸಚಿವ ಜಿ.ಪರಮೇಶ್ವರ ಮಾತನಾಡಿ, ‘ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲು ರಾಜ್ಯದಲ್ಲಿ 15 ಸಿಂಥೆಟಿಕ್ ಟ್ರ್ಯಾಕ್ ನಿರ್ಮಿಸಲಾಗಿದೆ. ತವರು ಜಿಲ್ಲೆ ತುಮಕೂರಿನಲ್ಲಿ ₹57 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಿಸಲಾಗಿದೆ. ರಾಜ್ಯದ ಎಲ್ಲಾ ಇಲಾಖೆಗಳ ನೇಮಕಾತಿಯಲ್ಲಿ ಶೇ 3ರಷ್ಟು ಮೀಸಲಾತಿಯನ್ನು ಕ್ರೀಡಾಪಟುಗಳಿಗೆ ನೀಡುವ ಬಗ್ಗೆ ಪರಿಶೀಲನೆ ನಡೆಸಲಾಗುವುದು’ ಎಂದರು.

‘ರಾಜ್ಯದಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆ ಆಗಬೇಕಿದೆ. ಬೆಂಗಳೂರಿನಲ್ಲಿ 70 ಎಕರೆ ಜಾಗದಲ್ಲಿ ಕ್ರೀಡಾ ನಗರಿ ನಿರ್ಮಿಸುವ ಪ್ರಸ್ತಾವ ಇದೆ’ ಎಂದರು.

2023ನೇ ಸಾಲಿನ ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ವಾರ್ಷಿಕ ಪ್ರಶಸ್ತಿಯನ್ನು ಒಟ್ಟು 22 ಮಂದಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಿದರು. ಕ್ರೀಡಾಪಟುಗಳು ಮತ್ತು ಪ್ರಶಸ್ತಿ ಪುರಸ್ಕೃತರು, ಏಷ್ಯನ್ ಗೇಮ್ಸ್ ಪದಕ ವಿಜೇತರಿಗೆ ತಲಾ ₹1ಲಕ್ಷ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಲಾಯಿತು. ಹಿರಿಯ (ವೆಟರನ್) ಕ್ರೀಡಾಪಟುಗಳು ಮತ್ತು ಕ್ರೀಡಾ ಆಡಳಿತಗಾರ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹50 ಸಾವಿರ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತರಲ್ಲಿ ‘ಪ್ರಜಾವಾಣಿ’ಯ ಕ್ರೀಡಾ ವಿಭಾಗದ ಮುಖ್ಯ ವರದಿಗಾರ ಗಿರೀಶ ದೊಡ್ಡಮನಿ ಸಹ ಇದ್ದರು.

ಕ್ರೀಡಾ ಸಚಿವ ನಾಗೇಂದ್ರ, ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಆಯುಕ್ತ ಎನ್. ಶಶಿಕುಮಾರ್, ಕೆಒಎ ಮಹಾಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಹಾಜರಿದ್ದರು.

ಪಾಯಿಂಟ್ಸ್ ಪಟ್ಟಿಯಲ್ಲಿ ಪುಣೇರಿಗೆ ಅಗ್ರಸ್ಥಾನ

ಸಾಂಘಿಕ ಪ್ರದರ್ಶನ: ಪಲ್ಟನ್‌ಗೆ ಗೆಲುವು

ಚೆನ್ನೈ (ಪಿಟಿಐ): ಪಂಕಜ್ ಮೋಹಿತೆ ಮತ್ತು ಮೋಹಿತ್ ಗೋಯತ್ ಅವರ ಚುರುಕಾದ ದಾಳಿಯ ಬಲದಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಏಕ ಪಕ್ಷೀಯ ಪಂದ್ಯದಲ್ಲಿ ಮಂಗಳವಾರ ಪಟ್ನಾ ಪೈರೇಟ್ಸ್ ತಂಡವನ್ನು 18 ಪಾಯಿಂಟ್ (46–28) ಗಳಿಂದ ಸುಲಭವಾಗಿ ಸೋಲಿಸಿತು.

ಲೀಗ್‌ನಲ್ಲಿ ಆಡಿರುವ ಏಳು ಪಂದ್ಯಗಳ ಪೈಕಿ ಆರು ಪಂದ್ಯದಲ್ಲಿ ಗೆಲುವು ಸಾಧಿಸುವುದರೊಂದಿಗೆ ಪುಣೇರಿ ಪಲ್ಟನ್ ಪಾಯಿಂಟ್ಸ್ ಪಟ್ಟಿಯಲ್ಲಿ (31 ಅಂಕ) ಅಗ್ರಸ್ಥಾನದಲ್ಲಿದೆ. ಪಟ್ನಾ ತಂಡವು ಏಳು ಪಂದ್ಯಗಳಲ್ಲಿ ಮೂರರಲ್ಲಿ ಗೆದ್ದು, ನಾಲ್ಕರಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೆ ಸ್ಥಾನದಲ್ಲಿದೆ.

ಇಲ್ಲಿನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪುಣೇರಿ ತಂಡದವರು ಉತ್ತಮ ಆಟ ಪ್ರದರ್ಶಿಸಿದರು. ನಾಲ್ಕು ನಿಮಿಷಗಳಲ್ಲಿ ಪಲ್ಟನ್ 6-1 ಮುನ್ನಡೆ ಸಾಧಿಸಿತು. ಉತ್ತಮ ರೈಡಿಂಗ್ ಮತ್ತು ರಕ್ಷಣಾತ್ಮಕ ಆಟ ಪ್ರದರ್ಶಿಸಿದರು. ಮಧ್ಯಂತರದ ವೇಳೆಗೆ ಪುಣೇರಿ ತಂಡ 22–15ರಿಂದ ಮುನ್ನಡೆಯಲ್ಲಿತ್ತು. ದ್ವಿತೀಯಾರ್ಧದಲ್ಲೂ ಉತ್ತಮ ಪ್ರದರ್ಶನ ನೀಡಿತು. ಪಟ್ನಾ ಪೈರೇಟ್ಸ್ ತಂಡವನ್ನು ಒಟ್ಟು ಮೂರು ಬಾರಿ ಆಲೌಟ್ ಮಾಡುವಲ್ಲಿ ಯಶಸ್ವಿಯಾಯಿತು.

ಸತತ ಸೋಲಿನಿಂದ ಚೇತರಿಸಿಕೊಂಡು ಹಿಂದಿನ ಪಂದ್ಯದಲ್ಲಿ ಗೆದ್ದಿದ್ದ ಪೈರೇಟ್ಸ್ ಮತ್ತೆ ಮುಗ್ಗರಿಸಿತು.

ಪಲ್ಟನ್ ತಂಡದ ಪರ ಪಂಕಜ್ ಮೊಹಿತೆ ಅವರು ‘ಸೂಪರ್ ಟೆನ್’ (11 ಪಾಯಿಂಟ್ಸ್) ಸಾಧನೆ ಮಾಡಿದರು. ಇವರಿಗೆ ಸಹ ಆಟಗಾರರಾದ ಮೋಹಿತ್ ಗೋಯತ್ 9, ನಾಯಕ ಅಸ್ಲಾಂ ಇನಾಮದಾರ್ 6, ಮೊಹಮದ್‌ರೇಝಾ 6 ಪಾಯಿಂಟ್ ಕಲೆ ಹಾಕಿದರು. ಅಭಿನೇಶ್ ನಾಡರಾಜನ್ ಟ್ಯಾಕಲ್‌ನಲ್ಲಿ 5 ಪಾಯಿಂಟ್ ಸಂಗ್ರಹಿಸಿದರು.

ಪಟ್ನಾ ಪರ ಸಚಿನ್ 8, ಸುಧಾಕರ್ 5, ಮಂಜಿತ್ ಹಾಗೂ ಸಂದೀಪ್ ಕುಮಾರ್ ತಲಾ 4 ಅಂಕ ಗಳಿಸಿದರು.



ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಪುಣೇರಿ ಪಲ್ಟನ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳ ಹಣಾಹಣಿ

ಅರ್ಜುನ, ಖೇಲ್‌ರತ್ನ ಪ್ರಶಸ್ತಿ ಮರಳಿಸುವೆ: ವಿನೇಶಾ ಫೋಗಾಟ್

ಒಂದನೇ ಪುಟದಿಂದ

ಕುಸ್ತಿಪಟು ಬಜರಂಗ್ ಪೂನಿಯಾ ಮತ್ತು ಡೆಫ್‌ಲಿಂಪಿಕ್ಸ್ ಚಾಂಪಿಯನ್ ವಿರೇಂದರ್ ಸಿಂಗ್ ಯಾದವ್ ಅವರು ಇತ್ತೀಚೆಗೆ ಪದ್ಮಶ್ರೀ ಪ್ರಶಸ್ತಿ ವಾಪಸು ಮಾಡಿದ ಬೆನ್ನಲ್ಲೇ ವಿನೇಶಾ ಅವರ ನಿರ್ಧಾರ ಪ್ರಕಟವಾಗಿದೆ.

‘ಮೇಜರ್ ಧ್ಯಾನಚಂದ್ ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಯನ್ನು ನಾನು ಹಿಂತಿರುಗಿಸುತ್ತಿದ್ದೇನೆ’ ಎಂದು ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಪತ್ರದಲ್ಲಿ ವಿನೇಶಾ ತಿಳಿಸಿದ್ದಾರೆ.

ಕಳೆದ ಗುರುವಾರ ಸಂಜಯ್ ಸಿಂಗ್ ಅವರು ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಫೆಡರೇಷನ್‌ನ 15 ಸ್ಥಾನಗಳಲ್ಲಿ 13 ಸ್ಥಾನಗಳನ್ನು ಬ್ರಿಜ್‌ಭೂಷಣ್ ಬೆಂಬಲಿಗರು ಗೆದ್ದುಕೊಂಡಿದ್ದರು. ಬ್ರಿಜ್‌ಭೂಷಣ್ ಆಪ್ತರಿಗೆ ಫೆಡರೇಷನ್‌ನಲ್ಲಿ ಸ್ಥಾನ ನೀಡಬಾರದು ಎಂದು ಬಜರಂಗ್, ವಿನೇಶಾ, ಸಾಕ್ಷಿ ಮಲಿಕ್ ಸೇರಿದಂತೆ ಕೆಲವು ಕುಸ್ತಿ ಪೈಲ್ವಾನರು ಆಗ್ರಹಿಸಿದ್ದರು. ಅಧ್ಯಕ್ಷರಾಗಿ ಸಂಜಯ್ ಆಯ್ಕೆಯಾದ ಬೆನ್ನಲ್ಲೇ ಸಾಕ್ಷಿ ಮಲಿಕ್ ಕುಸ್ತಿಗೆ ವಿದಾಯ ಹೇಳಿದ್ದರು.

ಕ್ರೀಡಾ ಸಚಿವಾಲಯವು ನಿಯಮ ಉಲ್ಲಂಘನೆ ಕಾರಣಕ್ಕೆ ಫೆಡರೇಷನ್‌ನ ನೂತನ ಆಡಳಿತ ಸಮಿತಿಯನ್ನು ಎರಡು ದಿನಗಳ ಹಿಂದೆಯಷ್ಟೇ ಅಮಾನತು ಮಾಡಿತ್ತು. ನೀತಿ ನಿಯಮಗಳನ್ನು ಪಾಲಿಸದೇ ಮತ್ತು ಕುಸ್ತಿಪಟುಗಳಿಗೆ ಕಾಲಾವಕಾಶ ನೀಡದೇ ಆತುರದಿಂದ 15 ಮತ್ತು 20 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳ ದಿನಾಂಕ ಘೋಷಣೆ ಮಾಡಿರುವುದಕ್ಕೆ ಸಚಿವಾಲಯ ಈ ಕ್ರಮ ಕೈಗೊಂಡಿತ್ತು.

ಹಾಕಿ: ರಾಷ್ಟ್ರೀಯ ಶಿಬಿರಕ್ಕೆ 34 ಸಂಭಾವ್ಯ ಆಟಗಾರ್ತಿಯರು

ಬೆಂಗಳೂರು (ಪಿಟಿಐ): ರಾಂಚಿಯಲ್ಲಿ ನಡೆಯುವ ಒಲಿಂಪಿಕ್ ಅರ್ಹತಾ ಟೂರ್ನಿ ಪಂದ್ಯಗಳು ಮತ್ತು ಹಾಕಿ ಫೈವ್ಸ್ ವಿಶ್ವಕಪ್ ಸಿದ್ಧತೆಗಾಗಿ 34 ಆಟಗಾರ್ತಿಯರು ಗುರುವಾರ ಇಲ್ಲಿ ಪ್ರಾರಂಭವಾಗುವ ಹಿರಿಯ ಮಹಿಳಾ ಹಾಕಿ ತರಬೇತಿ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

5 ರಾಷ್ಟ್ರಗಳ ಟೂರ್ನಿಯಲ್ಲಿ ಆಡಲು ಸ್ಪೇನ್ ಪ್ರವಾಸ ಮಾಡಿದ್ದ ಭಾರತದ ಆಟಗಾರ್ತಿಯರು ಸ್ವಲ್ಪ ವಿರಾಮದ ನಂತರ ಶಿಬಿರವನ್ನು ಸೇರಿಕೊಳ್ಳಲಿದ್ದಾರೆ.

ಒಲಿಂಪಿಕ್ ಅರ್ಹತಾ ಪಂದ್ಯಗಳು ಜ.13 ರಿಂದ 19 ರವರೆಗೆ ನಡೆಯಲಿದ್ದು, ಇದರಲ್ಲಿ ಭಾರತವು ನ್ಯೂಜಿಲೆಂಡ್, ಇಟಲಿ ಮತ್ತು ಅಮೆರಿಕಾದೊಂದಿಗೆ ‘ಬಿ’ ಗುಂಪಿನಲ್ಲಿ ಸ್ಥಾನ ಪಡೆದಿದೆ.

ಭಾರತ ತಂಡ: ಗೋಲ್ ಕೀಪರ್ಸ್: ಸವಿತಾ, ರಜನಿ ಎಟಿಮಾರ್ಪು, ಬಿಚು ದೇವಿ ಖರಿಬಾಮ್, ಬನ್ಸಾರಿ ಸೋಲಂಕಿ. **ಡಿಫೆಂಡರ್ಸ್:** ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಅಕ್ಷತಾ ಅಬಾಸೊ ಢೇಕಲೆ, ಜ್ಯೋತಿ ಚೆಟ್ರಿ, ಮಹಿಮಾ ಚೌಧರಿ. **ಮಿಡ್ ಫೀಲ್ಡರ್ಸ್:** ನಿಶಾ, ಸಲೀಮಾ ಟೆಟೆ, ಸುಶೀಲಾ ಚಾನು, ಜ್ಯೋತಿ, ನವಜೋತ್ ಕೌರ್, ಮೋನಿಕಾ, ಮರಿಯಾನಾ ಕುಜೂರ್, ಸೋನಿಕಾ, ನೇಹಾ, ಬಲ್ಜೀತ್ ಕೌರ್, ರೀನಾ ಖೋಖರ್, ವೈಷ್ಣವಿ ವಿಠ್ಠಲ್ ಫಾಲ್ಕೆ, ಅಜ್ಮಿನಾ ಕುಜುರ್. **ಫಾರ್ವರ್ಡ್ಸ್:** ಲಾಲ್ರೆಮ್ಸಿಯಾಮಿ, ನವನೀತ್ ಕೌರ್, ವಂದನಾ ಕಟಾರಿಯಾ, ಶರ್ಮಿಳಾ ದೇವಿ, ದೀಪಿಕಾ, ಸಂಗೀತಾ ಕುಮಾರಿ, ಮುಮ್ತಾಜ್ ಖಾನ್, ಸುನೆಲಿಟಾ ಟೊಪ್ಪೊ, ಬ್ಯೂಟಿ ಡುಂಗ್ಡುಂಗ್.